# ಸುಗುಣಾಂತರಂಗ

ಸಂಪುಟ : 19 ಕರ್ಕಟ ಮಾಸ ಸಂಚಿಕೆ : 7 ಜುಲೈ 2004

## ಸುಗುಣ ಬಳಗ

ಸಂಸ್ಥಾಪಕರು :
ಶ್ರೀ ಶ್ರೀ ಸುಗುಣೇಂದ್ರತೀರ್ಥ ಶ್ರೀಪಾದರು
ನಿರ್ದೇಶಕ : ಬನ್ನಂಜೆ ಗೋವಿಂದಾಚಾರ್ಯ
ಸಂಪಾದಕ : ಎಂ. ರಾಧಾಕೃಷ್ಣರಾವ್
ಪ್ರಕಾಶಕ : ಪ್ರಸನ್ನಾಚಾರ್ಯ
ಮುದ್ರಕ : ಬಿ.ಜಿ. ಸುಬ್ಬರಾವ್
ಸಲಹಾ ಮಂಡಳಿ
ಬನ್ನಂಜೆ ರಾಮಾಚಾರ್ಯ
ಮಳಗಿ ಜಯತೀರ್ಥಾಚಾರ್ಯ
ಡಾ। ಯು. ಪಿ. ಉಪಾಧ್ಯಾಯ
ಬಿಂದು ಮಾಧವಾಚಾರ್ಯ ನಾಗಸಂಪಿಗೆ
ಸಗ್ರಿ ರಾಘವೇಂದ್ರ ಉಪಾಧ್ಯಾಯ
ಡಾ। ಎನ್. ವೆಂಕಟೇಶ ರಾವ್
ಚಿಪ್ಪಗಿರಿ ನಾಗೇಂದ್ರಾಚಾರ್ಯ
ಗಂಜೀಫಾ ರಘುಪತಿ ಭಟ್
ಕಡೆಕಾರು ಶ್ರೀಶ ಭಟ್
ಉಡುಪಿ ರಾಮನಾಥಾಚಾರ್ಯ
ಬಿ.ಜಿ. ರವಿಕುಮಾರ್

**ಸಂಪರ್ಕವಿಳಾಸ :**
ಸಂಚಾಲಕ, ಸುಗುಣಮಾಲಾ ಮಾಸಪತ್ರಿಕೆ
ರಥಬೀದಿ, ಉಡುಪಿ - 576 101, ಉಡುಪಿ ಜಿಲ್ಲೆ, ಕರ್ನಾಟಕ
ದೂರವಾಣಿ : **(0820) 2522222, 2531047**
Tel Fax : 0820-2521272
E-Mail:mprasannaacharya@yahoo.com
Website:http://WWW.shreeputhige.org

**ಚಂದಾವಿವರ**
ವಾರ್ಷಿಕ : ರೂ. 80/- 15 ವರ್ಷ ರೂ. 1000/-
**ಜಾಹೀರಾತು ವಿವರ :**
ಅರ್ಧ ಪುಟಕ್ಕೆ ರೂ. 750/- ಒಂದು ಪುಟಕ್ಕೆ ರೂ. 1500/-

ಮುಖಪುಟ : ಧನ್ವಂತರಿರ್ಭಗವಾನ್
ಕೃಪೆ : ಶ್ರೀ ಪುತ್ತಿಗೆ ಮಠ

| | |
|---|---|
| **ಮರ್ಮಮೀಮಾಂಸೆ**<br>ಸುಶ್ರೀ | 5 |
| **ಮುಖಪುಟ ಲೇಖನ** | 41 |
| **ಶ್ರೀ ಸುಧಾ ಸುವಚನ** ಲೇಖಾಂಕ - 27<br>ಶ್ರೀ ಶ್ರೀ ಸುಗುಣೇಂದ್ರ ತೀರ್ಥ ಶ್ರೀಪಾದರು. | 42 |
| **ಎತ್ತು ಗೀತೆ ಕೇಳಿದಾಗ**<br>ಕೆ. ಹಯವದನ ಪುರಾಣಿಕರು | 9 |
| **ಚರಿತಂ ಜ್ಞಾಪಯ ಮೇ ತೇ**<br>ಸಗ್ರಿ ರಾಘವೇಂದ್ರ ಉಪಾಧ್ಯಾಯ | 13 |
| **ಕರ್ಣನ ನಾಮಾಂತರಗಳು**<br>ಡಾ। ಕೆ. ಎಂ. ಸುಬ್ರಹ್ಮಣ್ಯ | 17 |
| **ಏಳು ಏನೆಂದು ಹೇಳು - ೨**<br>ಉಡುಪಿ ಅಷ್ಟಾವಧಾನಿ | 21 |
| **ಯಕ್ಷಪ್ರಶ್ನೆ - 29**<br>ಅರವಿಂದ ದೇಶಪಾಂಡೆ, ಬೆಳಗಾಂ | 25 |
| **ಆಹಾರ - ಹಿಂಸೆ**<br>ಎ. ಬಿ. ಕುಂಜಾರ್, ಬೆಂಗಳೂರು | 29 |
| **ಪ್ರಾಚೀನ ಗುರುಕುಲ ವ್ಯವಸ್ಥೆ - ವಿದ್ಯಾದಾನ**<br>ಕೋಟೇಶ್ವರ ಸೂರ್ಯನಾರಾಯಣ ರಾವ್ | 34 |

**ಇನ್ನಿತರ ಲೇಖನಗಳು ಒಳಪುಟಗಳಲ್ಲಿ**

### 2004 ಆಗಸ್ಟ್ ತಿಂಗಳ ವಿಶೇಷಗಳು

3 ಸಂಕಷ್ಟ ಚತುರ್ಥಿ - ಚ. ಉ. ಘಂ. 9-14
11 ಸರ್ವೈಕಾದಶೀ
12 ಪುತ್ತಿಗೆ ಸ್ವಾಮಿನಾಂ ಗುರು ಸಮಾರಾಧನಂ
16 ಅಮಾವಾಸ್ಯಾ (ಸೋಮವತಿ ಅಮಾವಾಸ್ಯೆ)
20 ನಾಗಪಂಚಮೀ - ಸಾಮೋಪಾಕರ್ಮ
26 ಸರ್ವೈಕಾದಶೀ
27 ದಧಿವ್ರತಾರಂಭ - ವರಮಹಾಲಕ್ಷ್ಮೀವ್ರತಂ
29 ರಕ್ಷಾಬಂಧನಂ
30 ಪೂರ್ಣಿಮಾ - ಯಜುರುಪಾಕರ್ಮ
31 ರಾಘವೇಂದ್ರ ಸ್ವಾಮೀ ಆರಾಧನಂ



# ಸಹಸ್ಪಂದನ

‘ಚಿನ್ನದಂತಹ ಸೋನಿಯಾ’ ಎಂಬ ಸುಶ್ರೀ ಮೇಡಂರವರ ಮರ್ಮಮೀಮಾಂಸೆ ಸ್ವಜನ ಪಕ್ಷಪಾತದಿಂದ ಕೂಡಿತ್ತಲ್ಲವೇ?

ನರಸಿಂಹ ಬೆಟ್ಟದಬೈಲು

ಕಳೆದ ಸಂಚಿಕೆಯ ಸುಗುಣಮಾಲಾದಲ್ಲಿ ಪ್ರಕಟವಾದ ‘ಚಿನ್ನದಂತಹ ಸೋನಿಯಾ’ ಅತ್ಯಂತ ಸಮತೋಲನದ ವಿಮರ್ಶೆಯಾಗಿದ್ದು, ಹಗ್ಗದ ಮೇಲೆ ನಡೆದಂತಿತ್ತು. ಉಡುಪಿ ಮಠಗಳು ಒಂದು ಪಕ್ಷದ ಮಠಗಳು ಎಂಬ ಆಪಾದನೆಗೆ ಅಪವಾದವಾಗಿತ್ತು.

ಕೆ. ಎಂ. ಶೇಷಗಿರಿ ಬೆಂಗಳೂರು

ಮುಗುಳುನಗೆ ಲೇಖನ ಭಾರತೀಯರ ಮೊಗದಲ್ಲಿ ಮುಗುಳುನಗೆ ಅರಳಿಸುವಂತೆ ಮೂಡಿ ಬಂದಿದೆ. ಶ್ರೀ ಶ್ರೀಗಳಿಗೆ ಅಭಿನಂದನೆಗಳು.

ಡಾ। ಅರಳುಮಲ್ಲಿಗೆ ಪಾರ್ಥಸಾರಥಿ ಬೆಂಗಳೂರು

## ಹಸ್ತ ಪ್ರತಿಗಳ ಸಂರಕ್ಷಣಾ ಕಾರ್ಯಾಗಾರ

ಪರಮಪೂಜ್ಯ ಶ್ರೀ ಶ್ರೀ ಸುಗುಣೇಂದ್ರತೀರ್ಥ ಶ್ರೀಪಾದರ ಆದೇಶದಂತೆ
ಹಿರಿಯಡ್ಕ ಪುತ್ತಿಗೆ ವಿದ್ಯಾಪೀಠದಲ್ಲಿ

**ಹಸ್ತಪ್ರತಿಗಳ ಸಂರಕ್ಷಣಾ ಜಾಗೃತ ಶಿಬಿರವು**

**ಶ್ರೀಪುತ್ತಿಗೆ ವಿದ್ಯಾಪೀಠ ಹಾಗೂ ಮೈಸೂರು ವಿಶ್ವವಿದ್ಯಾನಿಯದ**
**ಪ್ರಾಚ್ಯವಸ್ತು ಸಂಗ್ರಾಹಾಲಯದ**
ಜಂಟಿ ಆಶ್ರಯದಲ್ಲಿ
ದಿನಾಂಕ 10-7-2004ರಂದು ಶನಿವಾರ
ಬೆಳಿಗ್ಗೆ 9-00ರಿಂದ ಸಂಜೆ 5-00ರ ವರೆಗೆ ನಡೆಯುವುದು.
ಆಸಕ್ತರು 6-7-2004ರ ಒಳಗೆ ತಮ್ಮ ಹೆಸರನ್ನು ಈ ಕೆಳಗಿನ ವಿಳಾಸದಲ್ಲಿ ಸಂಪರ್ಕಿಸಿ ನೊಂದಾಯಿಸಿಕೊಳ್ಳಬೇಕಾಗಿ ತಿಳಿಸಿದೆ.

ಪ್ರಾಂಶುಪಾಲರು
ಶ್ರೀ ಪುತ್ತಿಗೆ ವಿದ್ಯಾಪೀಠ
ಶ್ರೀ ಶ್ರೀ ಸುಗುಣೇಂದ್ರತೀರ್ಥ ವೇದ ಆಗಮ ಸಂಸ್ಕೃತ ಮಹಾಪಾಠಶಾಲಾ, ಪುತ್ತಿಗೆ - ಉಡುಪಿ
ದೂರವಾಣಿ : 0820-2542205

# ಕಳೆದ ಮಗ ಮರಳಿ ಬಂದ

**ಡಾ। ಜಿ. ವಿ. ಕುಲಕರ್ಣಿ**

ಗುರುವಾರ ರಾಯರಿಗೆ ವಿಶೇಷ ಪೂಜೆ ಸಲ್ಲಿಸಿ ಇಡೀ ದಿನ ಉಪವಾಸ ಇರುತ್ತಾರೆ ಗುರೂಜಿ. ಅಂದು ಗುರು ಶ್ರೀರಾಘವೇಂದ್ರರ ವಿಶೇಷ ಸನ್ನಿಧಾನ ಇರುತ್ತದೆ. ಅಂದು ಎಷ್ಟೋ ಸಲ ಎದುರು ಬಂದ ವ್ಯಕ್ತಿಯ ಭೂತ - ವರ್ತಮಾನ - ಭವಿಷ್ಯಗಳು ಅವರ ಕಣ್ಣ ಮುಂದೆ ಗೋಚರವಾಗುತ್ತದೆ. ಒಮ್ಮೆ ಒಬ್ಬ ಮರಾಠಿ ಇಳಿ ವಯಸ್ಸಿನ ತಾಯಿ ಗುರೂಜಿಯನ್ನು ಕಾಣಲು ಬಂದಳು. ಅವಳು ತನ್ನ ಸಮಸ್ಯೆ ಹೇಳುವುದಕ್ಕಿಂತಲೂ ಮೊದಲೇ ಗುರೂಜಿ ಹೇಳಿದರು. "ನನಗೆ ಗೊತ್ತಿದೆ ನೀನು ಯಾಕೆ ಬಂದಿ ಎಂಬುದು ನಿನ್ನ ಮಗ ಓಡಿ ಹೋಗಿ ಏಳು ವರ್ಷವಾಯಿತು. ಅವನು ಬದುಕಿರುವನೋ ಸತ್ತಿರುವನೋ ಎಂಬ ಶಂಕೆ ನಿನ್ನನ್ನು ಕಾಡುತ್ತಿದೆ, ಅಲ್ಲವೆ?".

ಆ ತಾಯಿ ದನಿ ತೆಗೆದು ಅಳತೊಡಗಿದಳು ಒಬ್ಬನೇ ಮಗ ಅವನು, ಕೂಡ 14 ವರ್ಷದವನಿದ್ದಾಗ ಕಾಣೆಯಾದವ ಸಿಕ್ಕಿರಲಿಲ್ಲ. ಅಪಘಾತದಲ್ಲಿ ಮಡಿದನೋ, ಎಲ್ಲಿಯೋ ಓಡಿ ಹೋಗಿ ಜೀವಂತವಾಗಿ ಇರುವನೋ ಎಂಬ ಚಿಂತೆ ಅವಳನ್ನು ಆವರಿಸಿತ್ತು.

"ನಿನ್ನ ಮಗನಿಗೆ ಈಗ 21 ವರ್ಷವಾಗಿರಬೇಕಲ್ಲ, ಅವನು ಇನ್ನು ಬರುತ್ತಾನೆ. ಚಿಂತಿಸಬೇಡ. ನಾನು ಹೇಳಿದ ಉಪಾಸನೆ ಮಾಡಿದರೆ 21 ದಿನಗಳಲ್ಲಿ ಅವನು ವಾಪಸ್ ಬರುತ್ತಾನೆ ಚಿಂತಿಸದಿರು" ಎಂದು ಹೇಳಿ ಮಂತ್ರ ಬರೆದುಕೊಟ್ಟರು. 21ನೆ ದಿನ ಉಪಾಸನೆ ಮಾಡಲು ಹೇಳಿದರು. ಆ ತಾಯಿ ಗುರೂಜಿ ಹೇಳಿದಂತೆಯೇ ವ್ರತದ ಆಚರಣೆ ಪ್ರಾರಂಭಿಸಿದಳು.

15ನೆಯ ದಿನ ಮಗನಿಂದ ಒಂದು ಪತ್ರ ಬಂತು. ಅದೂ ಒಂದು ಪೋಸ್ಟ್ ಕಾರ್ಡ್ ರೂಪದಲ್ಲಿ. ಅದರ ಮೇಲೆ ಮಗನ ವಿಳಾಸವಿರಲಿಲ್ಲ. ಒಂದೇ ವಾಕ್ಯ ಮರಾಠಿಯಲ್ಲಿ ಬರೆದಿದ್ದ 'ಆಯೀ.. ತುಝಿ ಆಠವಣ ಏತೆ...'- 'ಪರಶುರಾಮ' ಎಂದು.

ಆ ತಾಯಿ ಆ ಪತ್ರವನ್ನು ಆನಂದ ಬಾಷ್ಪ ಹರಿಸಿ ಗುರೂಜಿಯ ಬಳಿ ಧಾವಿಸಿ ಬಂದಳು. ಪತ್ರ ತೋರಿಸಿದಳು. "ನನ್ನ ಮಗ ಜೀವಂತ ಇದ್ದಾನೆ ಅಂತ ಈಗ ಖಾತ್ರಿ ಆಯ್ತು. ಈ ಪತ್ರದಲ್ಲಿ ಅದರ ಪುರಾವೆ ಇದೆ. ನಿಮ್ಮ ಪುಣ್ಯ ಅವನು ಮರಳಿ ಮನೆಗೆ ಬರಲಿ!" ಎಂದು ಹಾರೈಸಿ ನಮಸ್ಕರಿಸಿದಳು. "ತಾಯಿ ನನಗೆ ನಮಸ್ಕರಿಸಬೇಡಿರಿ. ಇಲ್ಲಿ ನಮ್ಮ ಗುರುಗಳ ಫೋಟೋ ಇದೆ. ಅದಕ್ಕೆ ನಮಸ್ಕರಿಸಿರಿ." ಎಂದರು ಗುರೂಜಿ.

ತಾಯಿ ಮತ್ತೆ ತನ್ನ ವ್ರತಾಚರಣೆ ಮುಂದುವರಿಸಿದಳು. 21ನೆಯ ದಿನ ಅವಳ ವ್ರತ ಮುಗಿಯಿತು. ದೇವರನ್ನು ಕೈಮುಗಿದು ಬೇಡಿಕೊಂಡಳು. ಈ ಮುಪ್ಪಿನಲ್ಲಿ ಆ ಮಗನೊಬ್ಬನೇ ಐಶ್ವರ್ಯ ತನಗೆ. ತನ್ನ ಕೈಯ ಊರುಗೋಲು ಅದನ್ನು ಕಿತ್ತುಕೊಳ್ಳಬೇಡ ಎಂದು ಅಂಗಲಾಚಿದಳು.

ರಾತ್ರಿ ಹನ್ನೊಂದು ಗಂಟೆಗೆ ಮನೆಯ ಬಾಗಿಲು ಬಡಿದ ಸದ್ದು, ಪ್ರತಿಯೊಬ್ಬರು ಒಂದೊಂದು ರೀತಿ ಬಾರಿಸುತ್ತಾರೆ. ಕೇಳುವ ಕಿವಿಗೆ ಯಾರೋ ಕದ ತಟ್ಟಿದರು ಗೊತ್ತಾಗಿ ಬಿಡುತ್ತದೆ. 'ಬಾಗಿಲ ಚಿಲಕದ ಸದ್ದು, ನನ್ನ ಪರಶುರಾಮನದು' ಎನ್ನುತ್ತಾ ತಾಯಿ ರೇಣುಕ ಬಾಗಿಲು ತೆರೆದಳು. 'ಆಯೀ' ಎಂಬ ಮಧುರ ಧ್ವನಿ ನಿನಾದಿಸಿತು. ಪರಶುರಾಮ ತನ್ನ ತಾಯಿಯನ್ನು ಅಪ್ಪಿದ, ಬೆಳಗಾಗುವವರೆಗೆ ತನ್ನ ಏಳು ವರ್ಷದ ವನವಾಸದ ಕತೆ ಹೇಳಿದ. ತಾಯಿ ಬೆಳಗಾಗುವವರೆಗೆ ಎಚ್ಚೆತ್ತು, ನಂತರ ಸ್ನಾನ ಮಾಡಿ ಮಗನಿಗೆ ಸ್ನಾನ ಮಾಡಿಸಿದಳು!! 'ಆಯಿ ಕಳೆದ 20 ದಿನಗಳಿಂದ ಪ್ರತಿದಿನ ನಾನು ಅವಳನ್ನು ಸ್ವಪ್ನದಲ್ಲಿ ಕಾಣುತ್ತಿದ್ದೆ. ತಡೆಯಲಾರದೆ ಒಂದು ಪತ್ರ ಬರೆದೆ' ಎಂದ. ಮರುದಿನ ಮುಂಜಾನೆ ಗುರೂಜಿಯನ್ನು ತಾಯಿ ಮಗ ಕಾಣಲು ಮರೆಯಲಿಲ್ಲ.

**8-A/15, ಜವಾಹರ್ ಸೊಸೈಟಿ, ಗೋವಿಂದ ನಗರ್, ಬೋರಿವ್ಲಿ (ಪಶ್ಚಿಮ) ಮುಂಬೈ - 400 092**

**(ಡಾ। 'ಜೀವಿ' ಕುಲಕರ್ಣಿಯವರ 'ಸತ್ಯಕಥೆ ಕಲ್ಪನೆಗಿಂತಲೂ ವಿಚಿತ್ರ' ಎಂಬ ಗ್ರಂಥದಿಂದ ಆಯ್ದ ಭಾಗ)**

**MODERN INTERIORS & FURNITURE**

**Ph.: 2523504**

**Opp. : Sanskrit College, Maruthi Veethika, Udupi - 576 101**

*Specialists in :*
- Interior Decoration work and Furnishings.
- Steel & Wooden Furniture.
- Sofa sets of different designs
- Computer Furniture and chairs of different Designs
- Kurlon & Duroflex Mattress and many more.

## ಶ್ರೀ ಪುತ್ತಿಗೆ ವಿದ್ಯಾಪೀಠಕ್ಕೆ ಪ್ರವೇಶಾವಕಾಶ

***ಸನಾತನ ವೈದಿಕ ಸಂಸ್ಕೃತಿಯ ಘೋಷಣೆಯ ಉದ್ದೇಶದಿಂದ ಪರಮಪೂಜ್ಯ ಶ್ರೀ ಸುಗುಣೇಂದ್ರತೀರ್ಥ ಶ್ರೀಪಾದರ ದಿವ್ಯಮಾರ್ಗದರ್ಶನದಲ್ಲಿ ಹಿರಿಯಡ್ಕ ಶ್ರೀ ಪುತ್ತಿಗೆ ಮಠದಲ್ಲಿ ಸುವರ್ಣಾನದಿಯ ತೀರದ ಪ್ರಶಾಂತವಾದ ಆಶ್ರಮದ ವಾತಾವರಣದಲ್ಲಿ ಗುರುಕುಲ ಪದ್ಧತಿಯಲ್ಲಿ ವೇದ, ವೇದಾಂತ, ಆಗಮ, ಪೌರೋಹಿತ್ಯ, ಸಂಸ್ಕೃತ, ಜ್ಯೋತಿಷ ಮುಂತಾದ ವಿಷಯಗಳ ಬಗ್ಗೆ 12 ವರ್ಷಗಳ ಶಿಕ್ಷಣವನ್ನು ನೀಡಲಾಗುವುದು. ವಿದ್ಯಾಪೀಠವು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳಿಂದ ಈಗಾಗಲೇ ಮಾನ್ಯತೆಯನ್ನು ಪಡೆದಿರುತ್ತದೆ.***

***ಅಭ್ಯರ್ಥಿಯು ಕನಿಷ್ಠ 5ನೇ ತರಗತಿಯಲ್ಲಿ ಉತ್ತೀರ್ಣರಾಗಿರಬೇಕು. ವಿದ್ಯಾಪೀಠದಲ್ಲಿ ಶಾಲೆಯ 7ನೇ ತರಗತಿ ಹಾಗೂ ಎಸ್. ಎಸ್. ಎಲ್. ಸಿ. ಪರೀಕ್ಷೆಗಳನ್ನು ಖಾಸಗಿಯಾಗಿ ಕಟ್ಟಿಸಲಾಗುವುದು.***

**ಆಸಕ್ತ ವಿದ್ಯಾರ್ಥಿಗಳು ಮೇ 20ರೊಳಗೆ ಸಂಪರ್ಕಿಸಿರಿ.**

**ಪ್ರಾಂಶುಪಾಲರು**

ಶ್ರೀ ಪುತ್ತಿಗೆ ವಿದ್ಯಾಪೀಠ, ವೇದ- ಆಗಮ-ಸಂಸ್ಕೃತ ಮಹಾಪಾಠಶಾಲಾ

ಪುತ್ತಿಗೆ ಗ್ರಾಮ, ಹಿರಿಯಡ್ಕ, ಉಡುಪಿ

ದೂರವಾಣಿ : 2542205, 9845043417, 9448279303

# ಕರ್ಣನ ನಾಮಾಂತರಗಳು

**ಡಾ। ಕೆ. ಎಂ. ಸುಬ್ರಹ್ಮಣ್ಯ**

ಮಹಾಭಾರತವು ವೇದವ್ಯಾಸರಿಂದ ರಚಿತವಾಗಿ 'ಪಂಚಮವೇದ' ಎಂದು ಹೆಸರುಗೊಂಡಿದೆ. ಇದರಲ್ಲಿ ಹಲವು ತರಹದ ವ್ಯಕ್ತಿಗಳು, ಹಲವು ನಮೂನೆಯ ಪ್ರಾಣಿ - ಪಕ್ಷಿಗಳು, ಹಲವು ವಿಧದ ಸಮಸ್ಯೆಗಳು, ಹಲವು ಸ್ಥಳಗಳ ವರ್ಣನೆಗಳು, ಇತ್ಯಾದಿ ವಿಷಯಗಳನ್ನು ವಿವರಿಸಲಾಗಿದೆ. ಮಹತ್ವ ಹಾಗೂ ಭಾರವತ್ವ ಇರುವ ಕೃತಿಯಾದ್ದರಿಂದ 'ಮಹಾಭಾರತ'ವೆಂದು ಹೆಸರುಗೊಂಡಿದೆ. 'ಯದಿ ಹಾಸ್ತಿ ತದನ್ಯತ್ರ ಯನ್ನೇ ಹಾಸ್ತಿ ನ ಕುತ್ರಚಿತ್' ಎಂಬಷ್ಟು ಹೊಗಳಿಕೆಗೆ ಪಾತ್ರವಾಗಿದೆ.

ದ್ವಾಪರಯುಗದ ಮಹಾಪುರುಷರಲ್ಲಿ ತನ್ನದೇ ಆದ ತೇಜಸ್ಸಿನಿಂದ ಕಂಗೊಳಿಸುವ ವ್ಯಕ್ತಿಯೆಂದರೆ ಕರ್ಣ. ಇತರ ಪಾತ್ರಗಳು ಬೇರೆ ಬೇರೆ ದೃಷ್ಟಿಗಳಿಂದ ಇವನನ್ನು ಮೀರಿಸಿದ್ದರೂ ಇವನ ಕ್ಷೇತ್ರದಲ್ಲಿ ಅವರು ಯಾರೂ ಇವನನ್ನು ಮೀರಿಸುವಂತಿಲ್ಲ. ಇತರರಲ್ಲಿ ಕಾಣಲಾಗದ ವಿಶಿಷ್ಟ ಮಹಿಮೆ ಕರ್ಣನಲ್ಲಿ ಮೈಗೊಂಡು ಬೆಳೆದಿದೆ. ಕೃಷ್ಣ, ದ್ರೋಣ, ಭೀಷ್ಮ, ವಿದುರಾದಿ ಮಹಾಪುರುಷರು ಜ್ಞಾನದಲ್ಲಾಗಲಿ, ಪರಾಕ್ರಮದಲ್ಲಾಗಲಿ, ಆತ್ಮೋನ್ನತಿಯಲ್ಲಾಗಲಿ, ಕರ್ಣನಿಗಿಂತ ಮೇಲಾದ ವ್ಯಕ್ತಿಗಳು ಆಗಿರಬಹುದು. ಆದರೆ ಕರ್ಣನ ಮಾನವೀಯತೆಯ ಎದುರಿಗೆ ಆ ಪಾತ್ರಗಳ ಪ್ರಭೆ ಮಸುಕಾಗಿ ತೋರುತ್ತದೆ. ಕರ್ಣನಿಗೆ ಒದಗಿದ ಸಮಸ್ಯೆಗಳು, ಧರ್ಮ ಸಂಕಟಗಳು ಅವರ ಬಾಳ್ವೆಯಲ್ಲಿ ಸುಳಿದಾಡಲಿಲ್ಲ. ಅಂಥ ಸಂದರ್ಭಗಳಲ್ಲಿ ಅವರು ಯಾವ ರೀತಿಯಲ್ಲಿ ನಡೆದುಕೊಳ್ಳುತ್ತಿದ್ದರು ಎಂಬುದನ್ನು ಊಹಿಸಲು ಕೂಡ ಅವಕಾಶ ಸಾಲದು. ಕರ್ಣನಲ್ಲಿ ಕಾಣುವಷ್ಟು ಸತ್ಯ ಪ್ರಿಯತೆಯಾಗಲಿ, ಸ್ವಾಮಿಭಕ್ತಿಯಾಗಲೀ, ಸ್ನೇಹ ರಸವಾಗಲಿ, ಅಂತಿಮ ವಿರಕ್ತಿಯಾಗಲಿ ಅವರಲ್ಲಿ ಕಾಣದಿರುವುದರಿಂದ ಅವನಿಗೆ ಬಂದಂತಹ ಧರ್ಮ ಸಮಸ್ಯೆಗಳಿಗೆ ಸದೃಶವಾದ ಸಂದರ್ಭಗಳು ಅವರಿಗೇನಾದರೂ ಒದಗಿದ್ದರೆ, ಅವರ ನಡತೆ ಇವನ ನಡತೆಗಿಂತ ಏನು ಉತ್ತಮವಾಗುತ್ತಿರಲಿಲ್ಲವೆಂದು ಹೇಳಬಹುದು. ಈ ದೃಷ್ಟಿಯಿಂದಲೂ ಕರುಳನ್ನು ಹಿಂಡುವ ಜೀವಿತದ ಕರುಣ ಕಥೆಯಿಂದಲೂ ಕರ್ಣನ ಪಾತ್ರ ಭವ್ಯತೆಯ ತುತ್ತ ತುದಿಗೇರಿದೆ.

ಸೂರ್ಯಪುತ್ರ ಕರ್ಣನು 'ಸೂತಪುತ್ರ'ನೆಂದು ವ್ಯಾಸಭಾರತದಲ್ಲಿ ಉಲ್ಲೇಖವಾಗಿದೆ. ಏಕೆಂದರೆ ಕರ್ಣನನ್ನು ಸಾಕಿದವನು ಸೂತನು, ಆ ಮೇರೆಗೆ ಅವನಿಗೆ ಈ ಹೆಸರು ಬಂದಿದೆ ಇದಕ್ಕೆ ನಿದರ್ಶನ.

**ಅಸ್ವಾಮಿಕಸ್ಯ ಸ್ವಾಮಿತ್ವಂ ಯಸ್ಮಿನ್ ಸಂಪ್ರತಿ ಲಕ್ಷ್ಯತೇ ।**

ಮುಖ್ಯಸ್ಥರು, ಹಿಂದೀ ವಿಭಾಗ, ಶ್ರೀ ಜೆ. ಸಿ. ಬಿ. ಎಂ. ಕಾಲೇಜು, ಶೃಂಗೇರಿ.



**ಯೋ ವರ್ಣಃ ಪೋಷಯೇತ್ತಂಚ ತದ್ವರ್ಣಸ್ತಸ್ಯ ಜಾಯತೇ ।**

(ಅನುಶಾಸನ ಪರ್ವ 49-21)

ಒಡೆಯನಿಲ್ಲದವನ ಒಡೆತನವು ಯಾವನಲ್ಲಿ ಕಾಣುತ್ತದೆಯೋ ಅವನು ಆ ಒಡೆಯನಿಲ್ಲದವನನ್ನು ಸಾಕುವನೋ ಅವನ ಜಾತಿ - ವರ್ಣ ಆ ಸಾಕಲ್ಪಟ್ಟವನಿಗೆ ಒದಗುವುದೆಂದು ಜಾತಿ ವಿಚಾರ ವಿವರಣದಲ್ಲಿ ಬಂದಿದೆ ಅಂದರೆ ಕರ್ಣನ ನಿಜಮಾತೆಯಾಗಲಿ, ನಿಜಪಿತೃವಾಗಲೀ ಜನರಿಗೆ ತಿಳಿದಿರಲಿಲ್ಲ.

ಗಂಗೆಯಲ್ಲಿ ತೇಲುತ್ತಿದ್ದ ಮಗುವುಳ್ಳ ಪೆಟ್ಟಿಗೆಯನ್ನು ಪಡೆದವರು ಸೂತದಂಪತಿಗಳಾದ ಅಧಿರಥ - ರಾಧೇಯರು. ಕರ್ಣನ ಸಾಕುತಂದೆ ಅಧಿರಥನು ಚಂದ್ರವಂಶದ ಸತ್ಯಕರ್ಮ ರಾಜನಿಂದ ಬ್ರಾಹ್ಮಣ ಸ್ತ್ರೀಯಲ್ಲಿ ಹುಟ್ಟಿದ. ಆತನು ಕರ್ಣನ ಸಾಕು ತಂದೆಯಾದ್ದರಿಂದ ಕರ್ಣನು 'ಸೂತಪುತ್ರ' ಎನ್ನುವುದರಲ್ಲಿ ಔಚಿತ್ಯವಿದೆ.

ಅಷ್ಟು ಮಾತ್ರವಲ್ಲ ಕರ್ಣನ ಹುಟ್ಟುತಾಯಿ ಕುಂತಿಯೆಂದೂ, ಹುಟ್ಟು ತಂದೆ ಸೂರ್ಯನೆಂದು ಅದಾಗ ಲೌಕಿಕರಲ್ಲಿ ಗೊತ್ತಾಗಿರಲಿಲ್ಲ. ಆದುದರಿಂದ ಈ ಮೊದಲಲ್ಲಿ ಹೇಳಿದ ನಿಯಮದಂತೆ ಕರ್ಣನಿಗೆ ಕ್ಷತ್ರಿಯೋಚಿತ ಕುಲಸಂಸ್ಕಾರಗಳು ನಡೆದಿದ್ದವು. ಕರ್ಣನು ಸೂತಕುಲದವರೊಂದಿಗೆ ಆವಾಹ - ವಿವಾಹಗಳನ್ನು ನಡೆಸಿದ್ದನು. ಆ ಮೇರೆಗೆ ಕರ್ಣನು 'ಸೂತ್ರಪುತ್ರ'ನೆಂಬುದು ದೃಢವಾಗುತ್ತದೆ. (ಉದ್ಯೋಗ ಪರ್ವ- ಕೃಷ್ಣ - ಕರ್ಣ

NANDAKI
Ph. : 2480248 (5 lines)
Mobile : 9844009894 (Amar)
Tele Fax : 2125099 /2126420
Email : nandaki@vsnl.net
**Investments & Holdings (P) Ltd.**
**ENGINEERS & DEVELOPERS (P) Ltd.**
1st floor, CFC Building Annexe, #14/3,
Nrupathunga Road, Bangalore - 560 001
*Contact us for advice on your*
**Investments (Mutual Funds, RBI Bonds, Infrastructure Bonds etc.)**
**Insurance (Life Insurance & General Insurance)**
**Home Loans**
**Construction of Flats & Houses**

ಸಂವಾದ)

**ಕರ್ಣನು ಸೂತಪುತ್ರ ಎಂದು ತಿಳಿಯುವಲ್ಲಿ 'ಸೂತಪುತ್ರ' ಎಂದರೆ ಯಾರು ಎಂದು ತಿಳಿಯುವುದು ಅಗತ್ಯ. 'ಸೂತ' ಶಬ್ದದ ವ್ಯಾಖ್ಯೆ ವೃತ್ತಿವಾಚಕ ಹಾಗೂ ಜಾತಿವಾಚಕದ ನೆಲೆಯಲ್ಲಿಯೂ ನೀಡಬಹುದಾಗಿದೆ. 'ಸೂತ' ಶಬ್ದ ವೃತ್ತಿವಾಚಕವಾದರೆ 'ಸುವತಿ ಗಮಯಿತಿ ಅಶ್ವಾನ್ ಇತಿ ಸೂತಃ' - ಕುದುರೆಗಳನ್ನು ನಡೆಸುವವನು ಎಂಬ ಅರ್ಥ. ಜಾತಿವಾಚಕವಾದರೆ 'ಬ್ರಾಹ್ಮಣ ಕ್ಷತ್ರಿಯ ಸಂಜಾತೋಽಯಂ ಸೂತಃ' ವಿವಾಹವಾಗದ ಬ್ರಾಹ್ಮಣ ಸ್ತ್ರೀಯಲ್ಲಿ ಕ್ಷತ್ರಿಯನೋರ್ವನಿಂದ ಹುಟ್ಟಿದ ಸಂತತಿ.**

ಭಟ್ಟ ಹಲಾಯುಧನ 'ಅಭಿದಾನರತ್ನಮಾಲ' ಕೃತಿಯ 281ನೇ ಶ್ಲೋಕದಲ್ಲಿ ಸೂತಶಬ್ದದ ವ್ಯಾಖ್ಯೆ ಹೀಗೆ ಇದೆ.

**ಪ್ರಭೋದಕಾ ಮಾಗಧವಂದಿ ಸೂತಾ ।**

**ವೈತಾಳಿಕ ಮಂಗಳ ಪಾಠಕಾಶ್ಚ ॥**

ಹೈಮನೆಂಬ ನಿಘಂಟುಕಾರ ಸೂತಶಬ್ದಕ್ಕೆ ಪಾವರಸ, ಸ್ತುತಿಪಾಠಕ, ಧೀವರ, ಕೈವರ್ತ ಇತ್ಯಾದಿ ಅರ್ಥಗಳನ್ನು ನೀಡಿದ್ದಾನೆ.

ಮನುಸ್ಮೃತಿಯ 10ನೇ ಅಧ್ಯಾಯದ 47ನೇ ಶ್ಲೋಕದಲ್ಲಿ ಸೂತಶಬ್ದಕ್ಕೆ ಈ ರೀತಿ ವ್ಯಾಖ್ಯೆ ಇದೆ.

**ಸೂತಾನಾಂ ಅಶ್ವಸಾರಥ್ಯಂ ಅಂಬಷ್ಠಾನಾಂ ಚಿಕಿತ್ಸನಾಂ**

**ವೈದೇಹಿಕಾನಾಂ ಸ್ತ್ರೀಕಾರ್ಯಂ ಮಾಗಧಾನಾಂ ವಣಿಕ್ವಪಥಃ ॥**

ಅಮರಸಿಂಹನ ಅಮರಕೋಶದ ಕ್ಷತ್ರಿಯವರ್ಗದಲ್ಲಿ

**ನಿಯಂತಾ ಪ್ರಾಜಿತಾ ಯಂತಾ ಸೂತಃ ಕ್ಷತ್ರಾ ಚಸಾರಥಿಃ**

**ಸವ್ಯೇಷ್ಟ ದಕ್ಷಿಣಸೌಚ ಸಂಜ್ಞಾರಥ ಕುಟುಂಬಿನಃ ॥**

ಸೂತನು ರಥಕಾರವೃತ್ತಿಯವನು ಆದರೂ ದ್ವಿಜರಂತೆ ಸಂಸ್ಕಾರಗಳನ್ನು ಆಯಾವಿಧಿ ಪ್ರಕಾರ ಹೊಂದುವನೆಂದು ಅರ್ಥವಾಗುತ್ತದೆ. ಸೂತನು ಕ್ಷತ್ರಿಯನಿಗಿಂತ ಕೆಳಗಿನ ಹಾಗೂ ವೈಶ್ಯನಿಗಿಂತ ಮೇಲಿನ ಜಾತಿಯವನಾಗಿರುತ್ತಾನೆ. ಹಾಗಾಗಿ ಉತ್ತಮಾಸ್ತ್ರಗಳನ್ನು ಹೊಂದಬಾರದೆಂದು ಬೇರೆ ನಿಯಮವಿದೆ. ಆ ಕಾರಣವೇ ಪರಶುರಾಮನು ಕರ್ಣನಿಗೆ ಶಾಪವಿತ್ತನು.

ಮಹಾಭಾರತದ ಗ್ರಂಥಗಳಲ್ಲಿ ಹೆಸರಿಸಿದ ವ್ಯಕ್ತಿ ವಿಶೇಷಗಳಲ್ಲಿ ಕೀಚಕನ ಹಿರಿಯನೊಬ್ಬ ಸೂತನೆಂದು ಜಾತಿವಾಚಕವಿದೆ. ಇನ್ನು ಸೂತಪುರಾಣಿಕನೊಬ್ಬ ಋಷಿಯೆಂದು ವ್ಯಕ್ತಿನಾಮವಾಗಿದೆ. ಕರ್ಣನ ಸಾಕುತಂದೆಯಾದ ಅಧಿರಥನು



ಸೂತಜಾತಿಯವನೋ ಸೂತವೃತ್ತಿಯವನೋ ಎಂಬ ಜಿಜ್ಞಾಸೆ ಹುಟ್ಟುತ್ತದೆ. ಚಂದ್ರವಂಶದ ಸತ್ಯಕರ್ಮರಾಜನಿಂದ ಹುಟ್ಟಿದ ಅಧಿರಥನು ಸೂತಜಾತಿಯವನೇ.

ಆದಿತ್ಯತನಯ, ಆದಿರಥಿ, ಅರ್ಕಪುತ್ರ, ಆದಿತ್ಯನಂದನ, ರವಿಸೂನು, ಸೌತಿ, ಸೂರ್ಯಜ, ಪೂಷಾತ ಇತ್ಯಾದಿ ಹೆಸರುಗಳನ್ನು ಸೂರ್ಯನ ಮಗನಾಗಿ, ಕೌನೀಯ ಕನ್ಯೆಯ ಮಗನಾಗಿಯೂ, ಕುಂತಿಸುತ, ಕೌಂತೇಯ ಕುಂತಿಯ ಮಗನಾಗಿಯೂ, ಪಾರ್ಥ ಪೃಥೆಯ ಮಗನಾಗಿಯೂ, ಸೂತ, ಸೂತನಂದನ, ಸೂತಪುತ್ರ, ಸೂತತನಯ, ಸೂತಾತ್ಮಜ, ಸೂತಸೂನು, ಸೂತನ ಸಾಕುಮಗನಾಗಿಯೂ, ರಾಧೇಯ, ರಾಧೇಯ ಮಗನಾಗಿಯೂ ಕರ್ಣ - ವೈಕರ್ತನ. ಇಂದ್ರನಿಗೆ ಸಹಜವಾದ ತನ್ನ ಕವಚವನ್ನು ಹರಿದುಕೊಟ್ಟದರಿಂದ ಕರ್ಣ ವೈಕರ್ತನಾಗಿಯೂ, ಅಂಗೇಶ್ವರ, ಅಂಗರಾಜ, ಅಂಗದೇಶದ ರಾಜನಾಗಿಯೂ, ವಸುನಿಮಿತ್ತದಿಂದ ವಸುಷೇಣನಾಗಿಯೂ, 'ವೃಷ' ಎನ್ನುವ ಹೆಸರನ್ನು ಸದಾ ಕರ್ಣ ಹೊಂದಿದ್ದ. 'ವೃಷ' ಹೆಸರಿನ ಮಹತ್ವವನ್ನು ಸ್ವತಃ ಕೃಷ್ಣನೇ ಹೇಳಿದ್ದಾನೆ. ಯಾರು ವೇದವನ್ನು ಬಲ್ಲವನೋ, ಸತ್ಯವಾದಿಯೋ, ದಯಾಶೀಲನೋ ಹಾಗೂ ಶತೃಗಳ ಮೇಲೆ ದಯೆ ತೋರಿಸುವನೋ ಅವನು 'ವೃಷ' ಎಂಬ ಹೆಸರನ್ನು ಹೊಂದುವನು.

**ಬ್ರಾಹ್ಮಣ್ಯ ಸತ್ಯವಾದೀಚ ತಪಸ್ವಿ ನಿಯತವ್ರತಃ**

**ರಿಪುಶ್ವಾಪಿ ದಯಾವಾಂಶ್ಚ ತಸ್ಮಾತ್‌ಕರ್ಣೇ ವೃಷಸ್ಮೃತಃ**

ಬೃಹಸ್ಪತಿಗೆ ಸಮಾನವಾಗಿ ಬುದ್ಧಿವಂತನು ಹಾಗೇ ಶಾಸ್ತ್ರ ಪಾರಂಗತನಾದ ಕಾರಣ ಆತನಿಗೆ 'ಜೀವ' ಅನ್ನುವ ಹೆಸರಿತ್ತು. ಉದ್ಯೋಗಪರ್ವದಲ್ಲಿ ಸ್ವತಃ ಕೃಷ್ಣನೇ ಹೇಳಿದ್ದಾನೆ.

**ತ್ವಮೇವ ಕರ್ಣ ಜಾನಾಸಿ ವೇದ ವಾದಾನ್ ಸನಾತನಮ್**

**ತ್ವಮೇವ ಧರ್ಮಜಶಾಸ್ತ್ರೇಷು ಸೂಕ್ಷ್ಮೇಷು ಪರಿನಿಷ್ಟಿತಃ ॥**

ಕರ್ಣನು ಸೂರ್ಯನ ಪುತ್ರನಾಗಿ 'ಸೂರ್ಯಪುತ್ರ'ನೆಂದು ಹೆಸರು ಪಡೆದಿದ್ದ. ಕರ್ಣನು ತನ್ನ ತೇಜಸ್ಸಿನ ಕಾರಣ 'ಸೂರ್ಯಪುತ್ರ', ಅನ್ನುವ ಹೆಸರನ್ನು ಪಡೆದಿರಬಹುದು. ಇದಕ್ಕೆ ಶಾಸ್ತ್ರಾಧಾರವಿದೆ. ಅಥರ್ವವೇದದಲ್ಲಿ 'ದೇವಾಃ ಪುರಷಂ ಆವಿಷಾನ್' ಎಂದಿದೆ. ಅಂದರೆ ದೇವತೆಗಳು ಪುರುಷನಲ್ಲಿ ಸೇರಿರುತ್ತಾರೆ ಎಂದು. ಕರ್ಣನು ಕುಂತಿಪುತ್ರನಾಗಿದ್ದರೂ ಕೂಡಾ 'ಸೂತಪುತ್ರ', 'ರಾಧೇಯ', 'ಸಾರಥಿಪುತ್ರ' ಎಂದು ಪ್ರಸಿದ್ಧನಾಗಿದ್ದ.

*With Best Compliments from :*



**LAXMIDAS JEWELLERS**

"Megha Building" Balmatta Road,
Mangalore - 575 001.

**Phone : 2426060, 2421760**

# ಏಳು ಏನೆಂದು ಹೇಳು – ೨

**ಉಡುಪಿ ಅಷ್ಟಾವಧಾನಿ**

### ೧೮೧ ಏಳು ಹುಡುಗಿಯರು

ಅಷ್ಟಾವಕ್ರನ ಬಳಿ ಏಳು ಹುಡುಗಿಯರು ಬಂದಿದ್ದರು. ಅವರು ಏಳು ಮಂದಿ ದಿಗಭಿಮಾನಿ ದೇವತೆಗಳೆನ್ನುವುದು ವಿಶೇಷ. ಒಂದು ಮನೆ ಎಂದಾಗ ಅದರ ಸುತ್ತಲು ಎಂಟು ದಿಕ್ಕಿನ ದೇವತೆಗಳು ಆ ಮನೆಯನ್ನು ಕಾಯುತ್ತಿರುವರು. ಬೇಕೆಂದಾಗ ರಕ್ಷಣೆಗೆ ಕಾಣಿಸಿಕೊಳ್ಳುವರು. ಋಷಿಯ ತಪಃ ಶಕ್ತಿಗೆ ವರಿಸಲು ಬಂದದ್ದಿಲ್ಲಿ ಹೊಸತು -

**ಅಥ ಕನ್ಯಾಃ ಪರಿವೃತಾ ಗೃಹಾ ತ್ತಸ್ಮಾದ್ವಿನಿರ್ಗತಾಃ ।**
**ನಾನಾರೂಪಾಃ ಸಪ್ತ ವಿಭೋ ಕನ್ಯಾಃ ಸರ್ವಾಃ ಮನೋಹರಾಃ ॥**

### ೧೮೨ ಆರರಂತೆ ಏಳನೆಯದೂ ಆಗದ್ದು

ಬ್ರಾಹ್ಮಣರನ್ನು ಗೆಲ್ಲುವುದು ಆಗದ ಮಾತು.
ಗಾಳಿಯನ್ನು ಮುಷ್ಟಿಯೊಳಗೆ ಹಿಡಿದಿಟ್ಟುಕೊಳ್ಳಲಾಗದು.
ಕೈಯಿಂದ ಚಂದಿರನನ್ನು ಮುಟ್ಟಲಾಗದು.
ತಲೆಯಿಂದ ನೆಲವನ್ನು ಹೊರಲಾಗದು.
ಆಕಾಶವನ್ನು ಮುಟ್ಟುವುದು ಶಕ್ಯವಿಲ್ಲ.
ಹಿಮಾಲಯ ಬೆಟ್ಟವನ್ನು ಅಲುಗಾಡಿಸಲಾಗದು.
ಗಂಗೆಯನ್ನು ಸೇತುವೆಯಿಂದ ತಡೆಯಲಾಗದು.

**ದುರ್ಗ್ರಾಹ್ಯೋ ಮುಷ್ಟಿನಾ ವಾಯುರ್ದುಃಸ್ಪರ್ಶಃ ಪಾಣಿನಾ ಶಶೀ ।**
**ದುರ್ಧರಾ ಪೃಥಿವೀ ಮೂರ್ಧ್ನಾ ದುರ್ಜಯಾ ಬ್ರಾಹ್ಮಣಾ ಭುವಿ ॥**
**ಅಶಕ್ಯಂ ಸ್ಪ್ರಷ್ಟು ಮಾಕಾಶಮಚಾಲ್ಯೋ ಹಿಮವಾನ್ ಗಿರಿಃ ।**
**ಅವಾರ್ಯಾ ಸೇತುನಾ ಗಂಗಾ ದುರ್ಜಯಾ ಬ್ರಾಹ್ಮಣಾ ಭುವಿಃ**

### ೧೮೩ ತೆಂಕು ದಿಕ್ಕಿನ ಗುರುಗಳು ಏಳು –

**ಧರ್ಮರಾಜರ್ತ್ವಿಜಃ ಸಪ್ತ ದಕ್ಷಿಣಾಂ ದಿಶಮಾಶ್ರಿತಾಃ**

ಉನ್ಮುಚು, ಪ್ರಮುಚು, ಸ್ವಸ್ತ್ಯಾತ್ರೇಯ, ದೃಢವ್ಯ, ಊರ್ಧ್ವಬಾಹು, ತೃಣಸೋಮಾಂಗಿರಸ್ ಮತ್ತು ಅಗಸ್ತ್ಯ

---

‘ಶ್ರೀಭಾಗವತಮ್’, ಮ. ನಂ. 1-146, ಮುಚ್ಲುಕೋಡು, ಉಡುಪಿ



### ೧೮೪ ಪಡುದಿಕ್ಕಿನ ಒಡೆಯನ ಗುರುಗಳು ಏಳು –

**ವರುಣಸ್ಯರ್ತ್ವಿಜಃ ಸಪ್ತ ಪಶ್ಚಿಮಾಂ ದಿಶಮಾಶ್ರಿತಾಃ**

ದೃಢೇಯಾ, ಋತೇಯು, ಪರಿವ್ಯಾಧ, ಏಕಚ, ದ್ವಿತ, ತ್ರಿತ ಮತ್ತು ಸಾರಸ್ವತಾತ್ರೇಯ.

### ೧೮೫ ಬಡಗು ದಿಕ್ಕಿನ ಒಡೆಯನ ಗುರುಗಳು ಏಳು –

**ಧನೇಶ್ವರಸ್ಯ ಗುರವಃ ಸಪ್ತೈತೇ ಉತ್ತರಾಶ್ರಿತಾಃ**

ಅತ್ರಿ, ವಸಿಷ್ಠ, ಕಶ್ಯಪ, ಗೌತಮ, ಭರದ್ವಾಜ, ವಿಶ್ವಾಮಿತ್ರ ಮತ್ತು ಜಮದಗ್ನಿ.

### ೧೮೬ ಮೂಡುದಿಕ್ಕಿನ ಒಡೆಯನ ಗುರುಗಳು ಏಳು –

**ಮಹೇಂದ್ರಗುರವಃ ಸಪ್ತ ಪ್ರಾಚೀಂ ವೈ ದಿಶಮಾಶ್ರಿತಾಃ**

ಯವಕ್ರೀತ, ರೈಭ್ಯ, ಅರ್ವಾವಸು, ಪರಾವಸು, ಕಕ್ಷೀವಾನ್, ಬಲ ಮತ್ತು ಬರ್ಹಿಷದ.

### ೧೮೭ ನೆಲವನ್ನು ಹೊತ್ತವರಿವರು –

ಶೇಷನ ಜೊತೆಗೆ ವಾಸುಕಿ ಈ ನೆಲವನ್ನು ಹೊರಲು ಸೇರಿದ್ದಾನೆ. ಕಪಿಲ ಋಷಿ ಭಗವಂತನೂ ನೆಲದ ಅಡಿಯಲ್ಲಿರುವನು. ನೆಲವನ್ನು ರಕ್ಷಿಸುವಲ್ಲಿ ಧರ್ಮದೇವತೆ, ಕಾಮದೇವ, ಕಾಲಪುರುಷ ಮತ್ತು ಸಂಪತ್ತಿನೊಡೆಯ ಇದ್ದಾನೆ.

**ಧರ್ಮಃ ಕಾಮಶ್ಚ ಕಾಲಶ್ಚ ವಸುರ್ವಾಸುಕಿರೇವ ಚ ।**
**ಅನಂತಃ ಕಪಿಲಶ್ಚೈವ ಸಪ್ತೈತೇ ಧರಣೀಧರಾಃ ॥**

### ೧೮೮ ಭಾರೀ ತಪಸ್ವಿಗಳಿವರು –

ಸಂವರ್ತ, ಮೇರುಸಾವರ್ಣಿ, ಮಾರ್ಕಂಡೇಯ, ಸಾಂಖ್ಯ, ಯೋಗ, ನಾರದ ಮತ್ತು ದುರ್ವಾಸ.

**ಸಂವರ್ತೋ ಮೇರುಸಾವರ್ಣೋ ಮಾರ್ಕಂಡೇಯಶ್ಚ ಧಾರ್ಮಿಕಃ ।**
**ಸಾಂಖ್ಯಯೋಗೌ ನಾರದಶ್ಚ ದುರ್ವಾಸಾಶ್ಚ ಮಹಾನೃಷಿಃ ।**
**ಅತ್ಯಂತತಪಸೋ ದಾಂತಾಸ್ತ್ರಿಷು ಲೋಕೇಷು ವಿಶ್ರುತಾಃ ॥**

### ೧೮೯ ಗಾಯತ್ರೀ ಜಪಿಸಿದರೆ ಏಳರ ಭಯವಿರದು –

ರಾಜಭಯ, ಪಿಶಾಚಭಯ, ರಾಕ್ಷಸ ಭಯ, ಅಗ್ನಿಭಯ, ಜಲಭಯ, ವಾಯುಭಯ ಮತ್ತು ಸರ್ಪಭಯ.

**ನಚ ರಾಜಭಯಂ ತೇಷಾಂ ನ ಪಿಶಾಚಾನ್ನ ರಾಕ್ಷಸಾತ್ ।**
**ನಾಗ್ನ್ಯಂಬುಪವನವ್ಯಾಲಾಬ್ಧಯಂ ತಸ್ಯೋಪಜಾಯತೇ ॥**

**ಚತುರ್ಣಾಮಪಿ ವರ್ಣಾನಾಮಾಶ್ರಮಸ್ಯ ವಿಶೇಷತಃ ।**

**ಕರೋತಿ ಸತತಂ ಶಾಂತಿಂ ಸಾವಿತ್ರೀಮುತ್ತಮಾಂ ಪಠನ್ ॥**

## ೧೯೦ ರಾಜ ಏಳೇಳು ಜನರ ಜತೆ ಸೇರಬಾರದು –

ಕುಡಿದವ, ತಪ್ಪೆಸಗಿದವ, ಹುಡುಗ, ಹುಚ್ಚ, ನೀಚ, ಕೆಟ್ಟನಡೆಯವ, ವೈರಿ, ದುಷ್ಟಮಂತ್ರಿ, ಹೆಣ್ಣುಗಳು, ಕಡಿದಾದ ಬೆಟ್ಟ, ಪರ್ವತ, ಆನೆ, ಕುದುರೆ ಮತ್ತು ಹಾವು - ಇವುಗಳ ಜತೆ ರಾಜ ನಿತ್ಯಸೇರಬಾರದು -

**ಮತ್ತಾತ್ಪ್ರಮತ್ತಾತ್ ಪೌಗಂಡಾದುನ್ಮತ್ತಾಚ್ಚ ವಿಶೇಷತಃ ।**

**ನಿಂದಿತಾಚ್ಚಾಸದಾ ಚಾರಾತ್ ದುರ್ಹೃದಾಂ ಚಾಪಿ ಸೇವನಾತ್ ॥**

**ನಿಗೃಹೀತಾದಮಾತ್ಯಾಚ್ಚ ಸ್ತ್ರೀಭ್ಯಶ್ಚೈವ ವಿಶೇಷತಃ ।**

**ಪರ್ವತಾದ್ವಿಷಮಾದ್ದುರ್ಗಾತ್ ಹಸ್ತಿನೋಽಶ್ವಾತ್ಸರೀಸೃಪಾತ್ ॥**

## ೧೯೧ ಭಾರೀ ಆಪತ್ತಿನಿಂದ ಪಾರಾಗುವರು –

ನಾರಾಯಣ ಭಕ್ತರು, ಕರ್ಮಗಳನ್ನೆಲ್ಲ ಕೃಷ್ಣನಿಗೆ ಅರ್ಪಿಸುವವರು, ಲೋಕರಕ್ಷಕನಾದ ಹರಿಯನ್ನು ನೆನೆಯುವವರು, ಸೃಷ್ಟಿಕರ್ತನಾದ ವಿಧಿಯನ್ನು ನಮಿಸುವವರು, ಹರನನ್ನು ಪೂಜಿಸುವವರು, ಅನಧ್ಯಾಯದಿನಗಳಲ್ಲಿ ಸ್ವಾಧ್ಯಾಯಮಾಡದವರು ಮತ್ತು ಸಚ್ಚಿಂತನೆಯಲ್ಲಿ ನಿತ್ಯರತರು.

**ಅನಾಧ್ಯಾಯೇಷು ಯೇ ವಿಪ್ರಾಃ ಸ್ವಾಧ್ಯಾಯಂ ನೈವ ಕುರ್ವತೇ ।**

**ತಪೋನಿಷ್ಠಾಃ ಸುತಪಸೋ ದುರ್ಗಾಣ್ಯತಿತರಂತಿ ತೇ ॥**

**ಈಶ್ವರಂ ಸರ್ವಭೂತಾನಾಂ ಜಗತಃ ಪ್ರಭವಾಪ್ಯಯಮ್ ।**

**ಭಕ್ತಾ ನಾರಾಯಣಂ ದೇವಂ ದುರ್ಗಾಣ್ಯತಿ ತರಂತಿ ತೇ ॥**

**ಅಸ್ಮಿನ್ನರ್ಪಿತಕರ್ಮಾಣಃ ಸರ್ವಭಾವೇನ ಭಾರತ ।**

**ಕೃಷ್ಣೇ ಕಮಲಪತ್ರಾಕ್ಷೇ ದುರ್ಗಾಣ್ಯಾತಿತರಂತಿ ತೇ ॥**

**ಲೋಕರಕ್ಷಾರ್ಥಮುತ್ಪನ್ನ ಮದಿತ್ಯಾಂ ಕಶ್ಯಪಾತ್ಮಜಮ್ ।**

**ದೇವಮಿಂದ್ರಂ ನಮಸ್ಯಂತಿ ದುರ್ಗಾಣ್ಯತಿ ತರಂತಿ ತೇ ॥**

**ಬ್ರಹ್ಮಾಣಂ ಲೋಕಕರ್ತಾರಂ ಯೇ ನಮಸ್ಯಂತಿ ಸತ್ಪತಿಮ್ ।**

**ಯಷ್ಟವ್ಯಂ ಕ್ರತುಭಿರ್ದೇವಂ ದುರ್ಗಾಣ್ಯತಿತರಂತಿ ತೇ ॥**

**ಸ್ತುವಂತಿ ವಿವಿಧೈಃ ಸ್ತೋತ್ರೈರ್ದೇವದೇವಂ ಮಹೇಶ್ವರಮ್ ।**

**ಸಮರ್ಚಯಂತಿ ಯೇ ಶಶ್ವದ್ದುರ್ಗಾಣ್ಯತಿತರಂತಿ ತೇ ॥**

(ಮುಂದುವರಿಯುವುದು)

# ಆಹಾರ - ಹಿಂಸೆ

ಎ. ಬಿ. ಕುಂಜಾರ್, ಬೆಂಗಳೂರು

ಆಹಾರದ ಅಗತ್ಯತೆ ಜೀವ - ಪ್ರಪಂಚದ ಒಂದು ಅನಿವಾರ್ಯತೆ. ಸ್ಥಾವರ ಜೀವಿಗಳಾದ ಸಸ್ಯ ವರ್ಗಗಳು ಜೀವಿಗಳ ಆಹಾರದ ಮೂಲ. ಪಂಚಭೂತಗಳನ್ನು ಬಳಸಿಕೊಂಡು ಆಹಾರ ಸಂಸ್ಕರಿಸುವ ಚೈತನ್ಯವಿರುವುದು ಸಸ್ಯವರ್ಗಕ್ಕೆ ಮಾತ್ರ. ಸಂಶ್ಲೇಷಿತವಾದ ಈ ಜೈವಿಕ ಪದಾರ್ಥವೇ ಸಮಸ್ತ ಜೀವ ಪ್ರಪಂಚದ ಪ್ರತ್ಯಕ್ಷ ಯಾ ಪರೋಕ್ಷ ಆಹಾರ. ಅನ್ಯ ವ್ಯವಹಾರ ಜೀವ ಪ್ರಪಂಚಕ್ಕೆ ನಕಾರ.

ಜೀವ ಜಾತಗಳ ಆಹಾರ ಕ್ರಮದಲ್ಲಿ ಇಬ್ಬಗೆ ಇದೆ - ಶಾಖಾಹಾರ ಮತ್ತು ಫಲಾಹಾರ (ಮಾಂಸಾಹಾರ) ಇವೆರಡನ್ನು ಒಟ್ಟಾಗಿ ಜೀವಾಹಾರ ಎನ್ನುವುದು. ಜಂಗಮ ಜೀವಿಗಳೆಲ್ಲ ಜೀವಾಹಾರಿಗಳು. ಸಸ್ಯಪ್ರಪಂಚದಲ್ಲೂ ಜೀವಾಹಾರಿ (ಕೀಟಾಹಾರಿ) ಗಳಿರುವುದು ಗಮನಿಸಬೇಕಾದ ಒಂದು ಅಂಶ.

**‘ಜೀವೋ ಜೀವಸ್ಯ ಜೀವನಮ್’** ಅರ್ಥಾತ್ ಒಂದು ಜೀವಿಯ ಬದುಕಿನ ಅನ್ನ ಇನ್ನೊಂದು ಜೀವಿ. ಇದು ಜಂಗಮ ಜೀವ ಪ್ರಪಂಚದ ಅನಿವಾರ್ಯತೆ. ಪಾರಮಾರ್ಥಿಕ ವಾಸ್ತವತೆ. ಜೀವಿಗಳ ಜೀವನ ಧರ್ಮ ಎಂದರೂ ಸರಿ. ಜೀವಜಾತಗಳ ಸಂತುಲನದ ರಕ್ಷಾಕವಚವೂ ಕೂಡ. ಜೀವ ವರ್ಗವೊಂದರ ಪಾರಮ್ಯ ಸಾಧನೆಗೆ ಅಡ್ಡಿಯಾಗುವ ತಡೆಗೋಡೆಯೂ ಹೌದು.

ಪರಸ್ಪರಾವಲಂಬನೆಯೇ ಪ್ರಕೃತಿಯೊಡಲಿನಲ್ಲಿ ಇರುವ ಗೂಢ ತತ್ವ. ಜೀವ ಪ್ರಾಕಾರಗಳೆಲ್ಲ ಪರಸ್ಪರಾವಲಂಬಿಗಳು. ಪ್ರತಿಯೊಂದು ಜೀವವರ್ಗದ ಅಳಿವು - ಉಳಿವು ಇತರ ಜೀವ ವರ್ಗಗಳನ್ನು ಅವಲಂಬಿಸಿರುವುದು ನಿಚ್ಚಳ. ಯಾವುದೇ ಒಂದು ವರ್ಗದ ಪಾರಮ್ಯ ಅಥವಾ ಸರ್ವನಾಶ ಇನ್ನೊಂದು ವರ್ಗದ ವಿನಾಶಕ್ಕೆ ಪಾಶವಾಗಬಹುದು. ಇದು ಸರಪಣಿ ಕ್ರಿಯೆಯಾಗಲೂಬಹುದು. ಹೀಗಾದರೆ ಎಲ್ಲ ಜೀವವರ್ಗಗಳೂ ಬಂಧಿಸಲ್ಪಡುವ ಸಾಧ್ಯತೆ ಅಧಿಕ. ಇವೇ ಸಮತೋಲನ ಕುಸಿಯುವ ಸಂದರ್ಭ. ಸಮತೋಲನ ಕಾಪಿಡುವಲ್ಲಿ ಪ್ರಕೃತಿ ಅದ್ಭುತ ಕಾಳಜಿ ವಹಿಸುತ್ತಿರುತ್ತದೆ. ಸಮತೋಲನಕ್ಕೆ ಧಕ್ಕೆ ತರುವುದೇ ಮಾನವನ ಪರಮ ದಿನಚರಿಯಾಗಿರುವುದು ಒಂದು ದುರಂತ.

**ಆಹಾರ ಸೇವನೆಯು ಎರಡು ನೆಲಗಟ್ಟುಗಳನ್ನು ಹೊಂದಿದೆ. ಅಗತ್ಯತೆಯ ನೆಲೆ ಒಂದಾದರೆ ಭೋಗ ಬಯಕೆಯ ನೆಲೆ ಇನ್ನೊಂದು. ಬದುಕಲು ಉಣ್ಣಲೇ ಬೇಕು. ಉಣ್ಣುವುದಕ್ಕಾಗಿಯೇ ಬದುಕು ಇರುವುದಿಲ್ಲ. ಮನುಷ್ಯೇತರ ಜೀವಿಗಳು ಬದುಕಿನ ಅಗತ್ಯತೆಗೆ ತಕ್ಕಷ್ಟೆ ಉಣ್ಣುತ್ತವೆ. ಅಗತ್ಯತೆಯ ಬಯಕೆ ತಣಿಯುತ್ತಲೇ ತೆಪ್ಪಗಿರುವುದು ಅವುಗಳ ಪ್ರಕೃತಿ. ಜೀವನ ಧರ್ಮದ ಗಡಿದಾಟದ ನಿಲುವು ಅವುಗಳದು. ಹೀಗಾಗಿ ಸಮತೋಲನ ಕೆಡುವ ಕಾರ್ಯ ಮನುಷ್ಯೇತರ ಜೀವಿಗಳಿಂದ ನಡೆಯದು.**

‘ಶ್ರೀಭಾಗವತಮ್’, ಮ. ನಂ. 1-146, ಮುಚ್ಲುಕೋಡು, ಉಡುಪಿ

ವಿಕೃತಿ ಮಾನವನ ಮೂಲ ಪ್ರಕೃತಿ. ಅವನ ದಿನಚರಿ ಕೂಡ. ಎಣಿಸಿದಂತೆ ಸುಲಭವಾಗಿ ಮಣಿಸಲಾಗದ ಪಾಶವೀ ಪ್ರವೃತ್ತಿ ಇದು. ಅನೇಕರ ವ್ಯಕ್ತಿತ್ವ ಈ ವಿಕೃತಿಯ ಕೈವಶ. ಹೀಗಾಗಿ ಅಗತ್ಯತೆಯ ಆಚೆ ಸರಿಯುವ ಭೋಗ ಬಯಕೆಯೇ ಅವನ ಜಾಯಮಾನ. ಪಾರಮಾರ್ಥಿಕ ಜೀವನ ಧರ್ಮಕ್ಕೆ ವಿರುದ್ಧವಾದ ಅವಾಸ್ತವ ನಿಲುವು ಅವನದು. ಸರ್ವಜೀವ ಶ್ರೇಷ್ಠತೆ ಮಾನವನ ಸ್ವಯಂ ಘೋಷಿತ ಉಪಾಧಿ. ಆದರೂ ಸರ್ವಜೀವ ಪೀಡೆಯಲ್ಲೇ ಅವನಿಗೆ ನಿರಂತರ ಒಲವು.

ಬದುಕುವ ಹಕ್ಕು ಎಲ್ಲ ಜೀವಿಗಳಿಗೂ ಸಮಾನ. ಉಳಿದೆಲ್ಲ ಜೀವಿಗಳಿಗಿಂತಲೂ ತನ್ನ ಬದುಕುವ ಹಕ್ಕು ಹೆಚ್ಚಿನದು ಎನ್ನುವುದು ಮಾನವನು ಇರಿಸಿಕೊಂಡಿರುವ ಪರಮ ಮೌಲ್ಯ. ಈ ಮೌಲ್ಯ ಸಾಧನೆಗಾಗಿ ಜೀವ ಹಿಂಸೆಯ ದಾರಿ ತುಳಿಯುವುದೇ ಅವನ ಪರಿ.

ಇತರ ಜೀವಿಗಳಂತೆ ಅಗತ್ಯತೆಗಳು ಈಡೇರಿದಾಗ ಮಾನವನಿಗೆ ತೃಪ್ತಿನಾಸ್ತಿ. ಅದು ಮರೀಚಿಕೆಯಾಗಿ ಅವನನ್ನು ಕಾಡುತ್ತಲಿರುತ್ತದೆ. ಹೀಗಾಗಿ ನಿರಂತರ ಪ್ರಾಣಿ ಹಿಂಸೆಯೇ ಅವನ ಮೀಮಾಂಸೆ - ಬದುಕಿನ ಆಹಾರಕ್ಕಾಗಿ ಹಿಂಸೆ, ಭೋಗದ ಭೋಜನಕ್ಕಾಗಿ ಪೀಡೆ. ನವೋನವೀನ ಆಹಾರದ ಚಪಲಕ್ಕಾಗಿ ಪ್ರಾಣಿ ಹತ್ಯೆ. ಭೋಜನ ಪೂರ್ವದಲ್ಲಿ ತನ್ನ ಇಷ್ಟಾರ್ಥ ಸಿದ್ಧಿಗಾಗಿ ಜೀವ ಬಲಿ ಅರ್ಪಿಸುವ ಕೈಂಕರ್ಯ ಇನ್ನೊಂದೆಡೆ. ಭೋಗ ಬಯಕೆಗಳನ್ನು ತಣಿಸುವಲ್ಲಿ ಅವನಿಗೆ ದಕ್ಕುವುದು ದಣಿವು ಮಾತ್ರ. ಅಗತ್ಯತೆಗಳು ಈಡೇರಿದಾಗ ಇತರ ಜೀವಿಗಳು ಅನುಭವಿಸುವ ಸುಖಾನುಭವದ ಶಾಂತತೆ ಮಾನವನಿಗೆ ದೊರಕುವುದೇ ಇಲ್ಲ. ಪರಿಣಾಮವಾಗಿ ಇತರ ಜೀವಿಗಳ ಬದುಕು ಮೊಟಕಾಗುತ್ತಲೇ ಇರುತ್ತದೆ.

**ಶಾಖಾಹಾರ - ಫಲಾಹಾರ = ಜೀವಾಹಾರ ± ಹಿಂಸೆ.** ಒಂದು ನೆಲೆಯ ಆಹಾರ ಸಮೀಕರಣ ಇದು. ಜೀವಾಹಾರ ವ್ಯವಸ್ಥೆಯಲ್ಲಿ ಹಿಂಸೆ ಅನಿವಾರ್ಯ. ಒಂದು ಜೀವಿಯ ಖಾದ್ಯವಾಗುವ ಇನ್ನೊಂದು ಜೀವಿ ವೇದನೆಗೆ ಒಳಗಾಗುವುದು ಸ್ವಾಭಾವಿಕ. ಆಹಾರದ ಅಗತ್ಯತೆಯ ನೆಲೆಯಲ್ಲಿ ನಡೆಯುವ ಪೀಡೆಯನ್ನು ಹಿಂಸೆ ಎನ್ನಲಾಗುವುದು - ಪ್ರಕೃತಿಧರ್ಮದ

*With Best Compliments From :* ESTD : 1930



Grams : "HANUMANCO"

**THE HANUMAN TRANSPORT COMPANY PVT. LTD.**

P. B. No. 27, Chitpadi, Udupi - 576 101

Phone office : 520319 Managing Director : 521239

ಚೌಕಟ್ಟಿನೊಳಗಿನ ವಿಚಾರವಿದು. ಆದರೆ ಭೋಗ- ಬಯಕೆಯ ನೆಲೆಯ ಜೀವ ಪೀಡೆಯನ್ನು ಹಿಂಸೆ ಎನ್ನದೆ ವಿಧಿ ಇಲ್ಲ. ಹೀಗಾಗಿ ಮಾನವೇತರ ಜೀವಿಗಳಿಗೆ ಹಿಂಸೆಯ ಪಾಪದ ಲೇಪ ಇರದು. ಆದರೆ ಮಾನವನನ್ನು ಪರಮ ಪಾಪಿಯೆಂದು ತಿಳಿಯಬೇಕಾದುದು ಅನಿವಾರ್ಯ.

ಆಹಾರ ಕ್ರಮಗಳಲ್ಲಿ ಶಾಖಾಹಾರ ಶ್ರೇಷ್ಠ ಎಂಬ ಅಭಿಪ್ರಾಯವಿದೆ. ಇಲ್ಲಿ ಹಿಂಸೆಯ ಪ್ರಮಾಣ ಕನಿಷ್ಟ. ಶಾಖಾಹಾರ ಸಂಪಾದಿಸುವಲ್ಲಿ ಜೀವಿಗೆ ಉಂಟಾಗುವ ಹಿಂಸೆಯನ್ನು ಮಾಂಸಾಹಾರ ಸಂಪಾದನೆ ಸಂದರ್ಭಕ್ಕೆ ಸಮಾನ ಎನ್ನಲಾಗದು. ಶಾಖಾಹಾರ ಸಂಪಾದನೆಯಿಂದಾಗಿ ಒಂದು ಜೀವಿಯ ಜೀವನ ನಡೆಯಲ್ಲಿ ತುಸು ತಡೆಕಾಣಿಸಿಕೊಳ್ಳಬಹುದು. ಅದು ನಿಂತೇ ಹೋಗುತ್ತದೆ ಎಂದೇನೂ ಅಲ್ಲ. ಮಾಂಸಾಹಾರ ಸಂಪಾದನೆ ಕಾರ್ಯದಿಂದ ಒಂದು ಜೀವಿಯ ಬದುಕುವ ಹಕ್ಕೇ ಸಂಪೂರ್ಣವಾಗಿ ನಿರಾಕರಣೆಯಾಗುವ ಸಂಭವವೇ ಅಧಿಕ. ಸಸ್ಯಭಾಗವೊಂದು ಕತ್ತರಿಸಲ್ಪಟ್ಟಾಗ ಅಲ್ಲಿ ತಿರುಗಿ ಅಂತಹುದೇ ಭಾಗ(ಗಳು) ಬೆಳೆಯುವುದು ಕಂಡು ಬರುತ್ತದೆ. ಜಂಗಮ ಪ್ರಾಣಿಗಳಲ್ಲಿ ಹೀಗಾಗುವ ಸಾಧ್ಯತೆ ಇಲ್ಲವೇ ಇಲ್ಲ.

ದವಸ - ಧಾನ್ಯ ಮೊದಲಾದವುಗಳನ್ನು ಜೀವಿಯ ಜೀವನಾಂತ್ಯದಲ್ಲೂ ಪಡೆಯಬಹುದು. ಹಣ್ಣು - ಹಂಪಲುಗಳನ್ನು ತಮ್ಮಷ್ಟಕ್ಕೆ ಉದುರಿದ ಮೇಲೂ ಸಂಗ್ರಹಿಸಬಹುದು. ಪ್ರಾಣಿಮೂಲದ ಆಹಾರವಾದ ಹಾಲನ್ನು ಕನಿಷ್ಠತಮ ಹಿಂಸೆಯಿಂದ ಗಳಿಸಬಹುದು ಹೀಗಾಗಿ ಶಾಖಾಹಾರಕ್ಕೆ ಸಮನಾಗಿ ಹಾಲನ್ನು ಸ್ವೀಕರಿಸಲಾಗುತ್ತಿದೆ.

ಅಂಡಾಹಾರವೂ ಶಾಖಾಹಾರದಂತೆ ಎನ್ನುವ ವಾದವಿದೆ. ಪಾತವಾಗುವ ಫಲದಂತೆ ಹಿಂಸೆ ಇಲ್ಲವೆ ಅದನ್ನು ಸಂಗ್ರಹಿಸಬಹುದೆಂಬ ತರ್ಕವಿದೆ. ಈಗಾಗಲೇ ಪಾತವಾದ ಅಂಡದಲ್ಲಿ ಧಾನ್ಯದಂತೆಯೇ ಜೀವಾಂಕುರಕ್ಕೆಬೇಕಾದ ಸಾಮಗ್ರಿ ಸಿದ್ಧತೆ ಇದೆ; ಜೀವಾಂಕುರಿತ ಸ್ಥಿತಿ ಇಲ್ಲ ಎಂಬ ಸಾದೃಶ್ಯತೆಯನ್ನು ಮುಂದಿಡಲಾಗುತ್ತಿದೆ. ಆದರೆ ಅಂಡ ಮತ್ತು ಧಾನ್ಯದ ಈ ಸಾದೃಶ್ಯತೆ ಜೊತೆಗೆ ವೈರುಧ್ಯದ ವಿಚಾರಗಳಿರುವುದನ್ನು ಅಲ್ಲಗಳೆಯುವಂತಿಲ್ಲ. ಹೀಗಾಗಿ 'ಇದಮಿತ್ಥಂ' ಎನ್ನುವಲ್ಲಿ ಸಾಮಾಜಿಕ ಸಹಮತವಿಲ್ಲ. ಅಲ್ಲದೆ ಸಾಮಾಜಿಕ 'ಒಪ್ಪಿಗೆ'ಯು 'ವರ್ಜ್ಯ' ಎನ್ನುವೆಡೆಗೆ ಹೆಚ್ಚು ವಾಲಿರುವುದು ಇಂದಿನ ಸತ್ಯ. ಭವಿಷ್ಯದ ಸಾಮಾಜಿಕ ತೀರ್ಮಾನವನ್ನು ಇಂದೇ ಹೇಳಲಾಗುವುದು.

[ಲೇಖನದ ವ್ಯಾಪ್ತಿ ಆಹಾರ ಮತ್ತು ಹಿಂಸೆಯ ವಿಮರ್ಶೆಗೆ ಸೀಮಿತ. ಜಿಜ್ಞಾಸೆಗೆ ಸಾಕಷ್ಟು ಅವಕಾಶಗಳಿರುವುದನ್ನು ಅಲ್ಲಗಳೆದಿಲ್ಲ. ಯಾವ ತೀರ್ಮಾನಕ್ಕೂ ಬದಲಾಗಿಲ್ಲ. -ಲೇ.]

ಸ್ಥಾಪನೆ : 1977 ದೂರವಾಣಿ : 2521607

**ಜನತಾ ಕೋ - ಆಪರೇಟಿವ್ ಬ್ಯಾಂಕ್ ಲಿ. ಉಡುಪಿ**

★ ಸಂಜೆ ಮತ್ತು ಭಾನುವಾರ ಬ್ಯಾಂಕಿಂಗ್ ಸೇವೆ
★ ಠೇವಣಿಗಳಿಗೆ 1% ಅಧಿಕ ಬಡ್ಡಿ

**ಸ್ನೇಹಮಯ ಸೌಹಾರ್ದ ಸೇವೆಯೇ ಬ್ಯಾಂಕಿನ ಧ್ಯೇಯ**

ವಿಚಾರ ಜ್ಯೋತಿ



# ಯಕ್ಷಪ್ರಶ್ನೆ - 29

ಅರವಿಂದ ದೇಶಪಾಂಡೆ, ಬೆಳಗಾಂ

ಪ್ರ. 66 : ರಾಜಾಯುಧಿಷ್ಠಿರನೇ, ಬ್ರಾಹ್ಮಣ್ಯವೆಂಬುದು ಕುಲ, ನಡತೆ, ಶಾಸ್ತ್ರಾಭ್ಯಾಸ ಮತ್ತು ವಿದ್ವತ್ತೆ ಇವುಗಳಲ್ಲಿ ಯಾವುದರ ಮೇಲೆ ನಿಜವಾಗಿಯೂ ಅವಲಂಬಿಸಿದೆ ಎಂಬುದನ್ನು ಹೇಳು.

ಉತ್ತರ : ಧರ್ಮರಾಜ ಹೇಳುತ್ತಾನೆ, "ಯಕ್ಷನೇ ಕೇಳು. ಬ್ರಾಹ್ಮಣ್ಯ ಪ್ರಾಪ್ತಿ ಇದು ಕುಲದಿಂದಾಗಲೀ, ಶಾಸ್ತ್ರಾಭ್ಯಾಸದಿಂದಾಗಲೀ ಅಥವಾ ವಿದ್ವತ್ತೆಯಿಂದಾಗಲೀ ಪ್ರಾಪ್ತವಾಗುವುದಿಲ್ಲ. ಅದು ಸದ್ವರ್ತನೆಯ ಮೇಲೆ ಅವಲಂಬಿಸಿದೆ. ಮನುಷ್ಯ ಯಾವುದೇ ವರ್ಣದವನಾಗಿದ್ದರೂ ವರ್ತನೆ ಒಳ್ಳೆಯದಾಗಿರಬೇಕು. ಬ್ರಾಹ್ಮಣನಂತೂ ಸದ್ವರ್ತನೆಯನ್ನು ಪೂರ್ತಿ ಎಚ್ಚರಿಕೆಯಿಂದ ಪಾಲಿಸಬೇಕು. ಯಾರ ವರ್ತನೆಯಲ್ಲಿ ನ್ಯೂನತೆ ಇಲ್ಲವೋ ಅವನು ದುರ್ಬಲ ಅಥವಾ ದರಿದ್ರಿಯಾಗಲು ಸಾಧ್ಯವೇ ಇಲ್ಲ. ಅದೇ ಯಾವನ ವರ್ತನೆ ಸರಿ ಇಲ್ಲವೋ ಅವನು ಸತ್ತಂತೆಯೇ ಸರಿ. ನಾಲ್ಕು ವೇದಗಳಲ್ಲಿ ಪಾರಂಗತನಾಗಿಯೂ ದುರ್ವರ್ತನಿಯಾಗಿದ್ದರೆ ಅವನು ಕೀಳರಲ್ಲಿ ಕೀಳನೆಂದು ತಿಳಿಯಬೇಕು".

ಯಕ್ಷನು ಕೇಳಿದ ಪ್ರಶ್ನೆ ಮತ್ತು ಅದಕ್ಕೆ ಧರ್ಮರಾಜ ಕೊಟ್ಟ ಉತ್ತರ ಇವೆರಡೂ ಇತ್ತೀಚಿನ ಜ್ವಲಂತ ಪರಿಸ್ಥಿತಿಯಲ್ಲಿ ಅತ್ಯಂತ ಮಹತ್ವದ್ದಾಗಿರುವುದರಿಂದ ಹೆಚ್ಚು ಗನ ಕೊಡಬೇಕಾಗಿದೆ.

**ಬಡಾಯಿಕೊಚ್ಚುವ ಬಾಯಿಬಡುಕ ಸುಧಾರಕರು ಮತ್ತು ಜಾತೀಯ ಸಂಘರ್ಷಗಳನ್ನು ಪ್ರೇರೇಪಿಸುವುದರ ಮೂಲಕ ವೈಯಕ್ತಿಕ ಸ್ವಾರ್ಥವನ್ನು ಸಾಧಿಸುವುದರಲ್ಲಿ ತೊಡಗಿರುವ ಪುಢಾರಿಗಳು ಬ್ರಾಹ್ಮಣರನ್ನು ಸಾಧ್ಯವಿದ್ದಷ್ಟು ಸಲತೆಗಳಿದ್ದಾರೆ, ಮೂದಲಿಸಿದ್ದಾರೆ. ಸಮಾಜದ ಎಲ್ಲ ದುಃಸ್ಥಿತಿಗೂ ಬ್ರಾಹ್ಮಣರೇ ಕಾರಣರೆಂದು ಅವರ ತಲೆಗೇ ಹೊರಸಿದ್ದಾರೆ. ಇದು ಆಯೋಗ್ಯ ಆರೋಪವಾಗಿದೆ. ಯಾಕೆಂದರೆ ಇದು ಅತಿಶಯೋಕ್ತಿಯಾಗಿದೆ. ಹಾಗಿದ್ದರೂನೂ ಇನ್ನೊಬ್ಬರಿಗೆ ದೋಷ ಕೊಡುವ ಮುನ್ನ ಬ್ರಾಹ್ಮಣರೂ ಕೂಡ ಅಂತರ್ಮುಖರಾಗಿ ತಮ್ಮ ವರ್ತನೆಯನ್ನು ಅವಲೋಕಿಸಬೇಕು. ಯಾವನಲ್ಲಿ ಬ್ರಾಹ್ಮಣ್ಯವಿಲ್ಲವೋ ಅವನು ಕೇವಲ ಬ್ರಾಹ್ಮಣ ಕುಲದಲ್ಲಿ ಹುಟ್ಟಿದವನೆಂದು ಆದರಣೀಯನೂ, ಸನ್ಮಾನಕ್ಕೆ ಪಾತ್ರನೆಂದು ತಿಳಿಯುವ ಕಾರಣ ಎಲ್ಲ ಚಾರಿತ್ರ್ಯಹೀನ ಬ್ರಾಹ್ಮಣಕ್ಕಿಂತ ಚಾಂಡಾಲ ಎಷ್ಟೋ ಸೈ.** (ಶ್ವಪಚೋ ವರಿಷ್ಠಃ).

'ಅನಂತ ಪದ್ಮ', ನಂ. 531, 7ನೇ ಅಡ್ಡರಸ್ತೆ, ಭಾಗ್ಯನಗರ ಬೆಳಗಾಂ - 6

ಆದರೆ ಇದನ್ನು ಬ್ರಾಹ್ಮಣರು ಗಮನಿಸಿದಂತಿಲ್ಲ. ವಿಶೇಷತಃ ಪೇಶವೇ ರಾಜ್ಯದ ಉತ್ತರಾರ್ಧದಲ್ಲಿ ಬ್ರಾಹ್ಮಣರ ಅಧಃಪತನವಾಯಿತು. ಅವರು ಬ್ರಾಹ್ಮಣ್ಯದಿಂದ ದೂರಾದರು. ಬ್ರಾಹ್ಮಣ ಅಧಿಕಾರಿಗಳಿಗಿಂತ ಮೊಗಲರು ಒಳ್ಳೆಯವರಂತೆ ಕಾಣಲಾರಂಭಿಸಿದರು. ಪರಕೀಯರಾದ ಇಂಗ್ರಜೀ ಧೂರ್ತರ ಆಡಳಿತವೂ ಕೂಡ ಇದೇ ಕಾರಣದಿಂದಾಗಿ ಪ್ರಾರಂಭದಲ್ಲಿ ಸಹನೀಯವೆನಿಸಲಾರಂಭಿಸಿತು. ಚಾರಿತ್ರ್ಯ ಸಂಪನ್ನರಾದ ಬ್ರಾಹ್ಮಣರನ್ನು ಇಂದೂ ಕೂಡ ಸಮಾಜ ಆದರಿಸುತ್ತದೆ.

ಬ್ರಾಹ್ಮಣೇತರರು ಚಾರಿತ್ರ್ಯ ಸಂಪನ್ನರಾದಾಗ ಅವರನ್ನೂ ಸತ್ಪುರುಷರೆಂದೇ ವಂದಿಸುವ ಪರಂಪರೆ ನಮ್ಮದಾಗಿದೆ. ರಾಮೇಶ್ವರ ಭಟ್ಟನಂತಹ ವಿದ್ವಾನ್ ಬ್ರಾಹ್ಮಣ ಶ್ರೀ ತುಕಾರಾಮರ ಪಾದದ ಬಳಿ ನಮ್ರನಾಗಿ ಕುಳಿತ ಮತ್ತು ತುಕಾರಾಮರನ್ನು ಬ್ರಹ್ಮಸ್ವರೂಪರೆಂದು ಮನ್ನಿಸಿದ ಸಂಗತಿ ಸರ್ವರಿಗೂ ವಿದಿತವಾಗಿದೆ.

ಇಂದು ಕಾಲ ಬದಲಾಗಿದೆ. ಪರಿಸ್ಥಿತಿ ಕಠಿಣವಾಗಿದೆ. ಹಾಗಿರುವಾಗ ಬ್ರಾಹ್ಮಣರಿಗೆ ತಮ್ಮ ಚಾರಿತ್ರ್ಯವನ್ನು ಹೇಗೆ ಉಳಿಸಿಕೊಳ್ಳಬೇಕೆಂಬ ಸಮಸ್ಯೆ ಎದ್ದು ನಿಂತಿದೆ. ಆದರೆ ಇದು ಎಷ್ಟರ ಮಟ್ಟಿಗೆ ನಿಜವಾದ ದ್ರವ್ಯ ಸಂಪಾದನೆ ಮಾಡಲು, ಬ್ರಾಹ್ಮಣನು ಅವಲಂಬಿಸಬಹುದಾದ ಉದ್ಯೋಗಾವಕಾಶಗಳನ್ನು ಶಾಸ್ತ್ರವು ಸೂಚಿಸಿದೆ. ಆ ಶಾಸ್ತ್ರಗಳಲ್ಲಿ ಸೂಚಿಸಲಾದ ನಿಯಮಗಳನ್ನು ಪಾಲಿಸುವುದು ಮಾತ್ರ ಅತ್ಯಂತ ಕಠಿಣವಾಗಿದೆಯೆಂಬುದರಲ್ಲಿ ಮಾತ್ರ ಎಷ್ಟೂ ಸಂಶಯವಿಲ್ಲ.

ಬ್ರಾಹ್ಮಣ್ಯವು ಆ ವ್ಯಕ್ತಿಯ ಉದ್ಯೋಗದ ಮೇಲೆ ಅವಲಂಬಿಸಿಲ್ಲ. ಅದು ಅವನ ವರ್ತನೆಗೆ ಸಂಬಂಧಿಸಿದ್ದು. ಭಗವದ್ಗೀತೆ, ಬ್ರಾಹ್ಮಣನ ಕರ್ಮಗಳನ್ನು ಹೇಳುವಾಗ ಬ್ರಾಹ್ಮಣನ ಸ್ವಭಾವ ಮತ್ತು ವರ್ತನೆಗೆ ಸಂಬಂಧಿಸಿದ ಗುಣಗಳನ್ನು ಉಲ್ಲೇಖಿಸಿದೆ. ಅಲ್ಲಿ ಉದ್ಯೋಗ ವೃತ್ತಿಗಳ ಉಲ್ಲೇಖವಿಲ್ಲ. ಆದ್ದರಿಂದ ಅಪದ್ಧರ್ಮವೆಂದು ಬ್ರಾಹ್ಮಣ ಕೂಡ ಯಾವುದೇ ಉದ್ಯೋಗವನ್ನು ಅವಲಂಬಿಸಬಹುದು. ಆದರೆ ಯಾವುದೇ ಪರಿಸ್ಥಿತಿಯಲ್ಲೂ ಕೋಳಿಸಾಕಾಣಿಕೆ, ಮದ್ಯನಿರ್ಮಿತಿ ಅಥವಾ ಮಾರಾಟ ಮತ್ತು ಮಾಂಸದ ವ್ಯಾಪಾರವನ್ನು ಬ್ರಾಹ್ಮಣನಾದವನು ಮಾಡಬಾರದು.

ಮಾಡಬಾರದ ಅನೇಕ ವ್ಯವಸಾಯಗಳನ್ನು ಶಾಸ್ತ್ರವು ಹೇಳಿದೆ - ಉದಾಹರಣೆಗೆ ಹಾಲು-ತುಪ್ಪ ಮಾರುವುದು, ರಾಜನಸೇವೆ, ಶಾಸಕೀಯ ನೌಕರಿ ಇತ್ಯಾದಿ ಮಾಡಬಾರದೆಂದೂ ಹೇಳಿದೆ. ಆದರೆ ಈಗಿನ ಕಾಲದಲ್ಲಿ ಅದು ಶಕ್ಯವಾದೀತೆಂದು ಕಾಣುವುದಿಲ್ಲ. ಸರಕಾರೀ ನೌಕರಿಯನ್ನು ಸಂಪಾದಿಸುವುದೇ ಅಥವಾ ಅದಕ್ಕೆ ಪ್ರಯತ್ನಿಸುವುದೇ ಈಗಿನ ಬ್ರಾಹ್ಮಣರ ಉದ್ಯೋಗವೆನಿಸಿದೆ. ಹಾಲು ಮಾರುವ, ದಿನಸಿ ವ್ಯಾಪಾರ ಮಾಡುವ ಬ್ರಾಹ್ಮಣರು ಸಾಕಷ್ಟು

ಸಂಖ್ಯೆಯಲ್ಲಿ ಇದ್ದಾರೆ. ಇಂದಿನ ಪರಿಸ್ಥಿತಿಗೆ ಅದನ್ನು ಒಪ್ಪಲೂ ಬೇಕಾಗುವುದು. ಹಾಗಿದ್ದಾಗ, ಆ ಅಧಿಕಾರಿ ಬ್ರಾಹ್ಮಣನಾಗಿದ್ದು ಅವನು ಭ್ರಷ್ಟನಾಗಿಲ್ಲ, ಲಂಚ ತಿನ್ನುವುದಿಲ್ಲ.

ಅನ್ಯಾಯದ ಕೆಲಸಗಳನ್ನು ಮಾಡುವುದಿಲ್ಲವೆಂದಿಷ್ಟಾದರೂ ಅವನ ಬಗ್ಗೆ ಸಮಾಜಕ್ಕೆ ವಿಶ್ವಾಸವೆನ್ನಿಸಬೇಕು. ಈ ಹಾಲು ಬ್ರಾಹ್ಮಣನ ಕಡೆಯಿಂದ ತಂದುದಾಗಿದೆ. ಅದರಲ್ಲಿ ನೀರು ಕೂಡಿಸಿಲ್ಲ, ಸ್ನಿಗ್ಧಾಂಶವನ್ನು ತೆಗೆಸಿಲ್ಲ, ಈ ವಸ್ತು ಬ್ರಾಹ್ಮಣನ ಅಂಗಡಿಯಿಂದ ತಂದುದಾಗಿದೆ. ಅದರಲ್ಲಿ ಕಲಬೆರಕೆ ಇಲ್ಲ, ತೂಕದಲ್ಲಿ ವ್ಯತ್ಯಾಸವಿಲ್ಲವೆಂಬ ವಿಶ್ವಾಸ ಹುಟ್ಟುವಂತಿರಬೇಕು. ಹಾಗಾದಲ್ಲಿ ಇದೂ ಒಂದು ರೀತಿ, ಬ್ರಾಹ್ಮಣ್ಯ ಸಂರಕ್ಷಣೆ ಮಾಡಿದಂತೇನೇ.

**ಮಾನ - ಮರ್ಯಾದೆ ಸಾಮಾಜಿಕ ಪ್ರತಿಷ್ಠೆ ಇವು ಕೇವಲ ಬ್ರಾಹ್ಮಣ ಕುಲದಲ್ಲಿ ಜನ್ಮ ಪಡೆದುದರಿಂದ ಲಭಿಸಬೇಕೆಂಬ ವಾದ ಯೋಗ್ಯವಲ್ಲ. ಅವು ವ್ಯಕ್ತಿಯ ಚಾರಿತ್ರ್ಯ ಮತ್ತು ಸದಾಚರಣೆ ನೋಡಿಯೇ ತಿಳಿಯಬೇಕು. ಆದರೂ ವಿವಾಹ ವಿಷಯದಲ್ಲಿ ಮಾತ್ರ ಸಂಬಂಧ ಕುದುರಿಸುವಾಗ ಕುಲದ ವಿಚಾರ ಮಾಡಲೇಬೇಕು. ಇದನ್ನು ಮರೆಯಬಾರದು. ಅನುವಂಶಿಕತೆಗೆ ವಿಶಿಷ್ಟವಾದ ಮಹತ್ವವಿದೆ.**

ಅನೇಕ ಗುಣಗಳು ವಂಶಪರಂಪರೆಯಿಂದ ಇಳಿದು ಬರುವ ಗುಣಗಳ ಮೇಲೆ ಅವಲಂಬಿಸಿರುತ್ತವೆ. ಸ್ಪರ್ಧೆಯಲ್ಲಿ ಓಡುವ ಕುದುರೆಗಳು, ವಾಸನೆಯಿಂದ ಗುರುತಿಸುವ ನಾಯಿಗಳು ಇವುಗಳ ವಿಷಯದಲ್ಲಿಯ ಅನುವಂಶಿಕತೆಯ ಬಗ್ಗೆ ಇನ್ನೂ ಇಂದಿಗು ಪೂರ್ಣವಾಗಿ ನಂಬುತ್ತೇವೆ. ಮನುಷ್ಯರ ವಿಷಯದಲ್ಲಿ ಕೂಡ ಅದು ಅಷ್ಟೇ ಅಥವಾ ಅದಕ್ಕಿಂತಲೂ ಹೆಚ್ಚು ಮಹತ್ವದ್ದಾಗಿದೆ. ಇಂಥ ವಿಷಯದಲ್ಲಿ ಮಾತ್ರ ಬುದ್ಧಿವಾದದ ಹೆಸರಿನಲ್ಲಿ ದುರ್ಲಕ್ಷ್ಯ ಮಾಡಲಾಗಿದೆ. ಅದಕ್ಕೆ ವಿಪರೀತವಾಗಿ ಅಂತರ ಜಾತೀಯ ವಿವಾಹ ಪದ್ಧತಿಗೆ ಹೆಚ್ಚು ಪ್ರೋತ್ಸಾಹನ ಕೊಡುತ್ತೇವೆ. ಆದರೆ ಅದು ಸರಿಯಲ್ಲ.

ನಮ್ಮಲ್ಲಿಯ ಕೆಲವು ಸುಧಾರಕರಾದ ಬುದ್ಧಿವಾದಿಗಳು, 'ನಮ್ಮ ವಿರೋಧ ಬ್ರಾಹ್ಮಣರಿಗೆ ಸಂಬಂಧವಾದುದಲ್ಲ, ಬ್ರಾಹ್ಮಣ್ಯದ ವಿರುದ್ಧವಾಗಿದೆ' ಎಂದು ಅನ್ನುತ್ತಾರೆ. ಬ್ರಾಹ್ಮಣ್ಯ ಈ ಶಬ್ದ ಶುದ್ಧ ಚಾರಿತ್ರ್ಯಕ್ಕೂ ಸದಾಚರಣಕ್ಕೂ ಸಮಾನಾರ್ಥಕ - ಪರ್ಯಾಯ ಶಬ್ದವಾಗಿದೆ. ಅದನ್ನು ವಿರೋಧಿಸಿದರೆ ಹೇಗೆ ಸರಿಯಾದೀತು. ಸುಧಾರಕರು ಇದನ್ನು ಗಮನದಲ್ಲಿ ಇಡಬೇಕೆಂದು ವಿನಂತಿ.

ಈ ಪ್ರಶ್ನೋತ್ತರದಿಂದ, ನಮ್ಮ ಧರ್ಮಶಾಸ್ತ್ರ ಎಷ್ಟೊಂದು ಸಮತೋಲವಾಗಿ ವಿಚಾರ ಮಾಡುತ್ತದೆಂಬುದರ ಅರಿವು ಆಗುತ್ತದೆ.

ವರ್ಣ ವ್ಯವಸ್ಥೆ ಇದು ಜನ್ಮದ ಮೇಲೇನೇ ಅವಲಂಬಿಸಿದೆ ಮತ್ತು ಅದು ಹಾಗಿದ್ದರೇನೇ ಸರಿ. ಆದರೆ ಮಾನ - ಸನ್ಮಾನ - ಪ್ರತಿಷ್ಠೆಗಳು ಮಾತ್ರ ಜನ್ಮದ ಮೇಲೆ ಅವಲಂಬಿಸಿರಬಾರದು ಅದಕ್ಕಾಗಿ ಶೀಲ, ಚಾರಿತ್ರ್ಯ ಮತ್ತು ಆಚರಣೆಗಳನ್ನೇ ಪರಿಶೀಲಿಸಬೇಕು.



**ಪ್ರ. 67 : ಯಾರನ್ನು ಪಂಡಿತರೆಂದು ಪರಿಗಣಿಸಬೇಕು?**

**ಉತ್ತರ : ಯಾರು ಕ್ರಿಯಾಶೀಲರೋ ಅವರೇ ಪಂಡಿತರು.**

ಯಾರ ಬಳಿ 'ಪಂಡಾ' ಅಂದರೆ ಆತ್ಮಜ್ಞಾನ, ತನ್ನ ಬಗ್ಗೆ ಅರಿವು ಇದ್ದು ಅದು ಅವನ ನಡತೆಯಲ್ಲಿ ಕಂಡು ಬರುವುದೋ ಅವನು ನಿಜವಾದ ಪಂಡಿತನೆಂದು ತಿಳಿಯಬೇಕು. ಆದರೆ ನಾವು ವ್ಯವಹಾರದಲ್ಲಿ ಪಂಡಿತನೆಂದರೆ ಪುಸ್ತಕ ಜ್ಞಾನವಿರುವ ವ್ಯಕ್ತಿಯೆಂದು ತಿಳಿದಿದ್ದೇವೆ. ಅದು ಸರಿಯಲ್ಲ. ಭಾಷಣ ಮಾಡುವುದು, ಕೀರ್ತನೆ ಪ್ರವಚನ ವಿದ್ವತ್ತಿನಿಂದ ತುಂಬಿರುವುದು, ಆಕರ್ಷಕನಾಗಿರುವುದು, ದೊಡ್ಡ ಶ್ರೋತೃವರ್ಗವನ್ನು ಆಕರ್ಷಿಸುವುದು ಮತ್ತು ಅನೇಕ ಗ್ರಂಥಗಳನ್ನು ನಿರ್ಮಿಸುವುದು ಇವು ಕೂಡ ನಿಜವಾದ ಪಾಂಡಿತ್ಯದ ಲಕ್ಷಣಗಳಲ್ಲ. ಇದು ಕೇವಲ ಶಬ್ದಜ್ಞಾನ. ಕೆಲವು ಮಟ್ಟಿಗೆ ಇದೂ ಕೂಡ ಅವಶ್ಯವೇನೋ ಹೌದು. ಆದರೆ ಅಷ್ಟೇ ಸಾಲದು. ದಾಸರು ಹೇಳುವಂತೆ, 'ನುಡಿದಂತೆ ನಡೆವವರ ಪಾದ ಹಿಡಿಯಲು ಬೇಕು' ಇದು ಕೂಡ ಯುಧಿಷ್ಠಿರ ಹೇಳಿದ ಮಾತಿಗೆ ಸರಿ ಹೋಗುತ್ತದೆ.

ಭಗವದ್ಗೀತೆ ಪಂಡಿತನಿಗೆ ಸಮದರ್ಶಿಯಂತಲೂ ಹೇಳಿದೆ. ಗೀತೆ ಮತ್ತು ಧರ್ಮರಾಜ ಇಬ್ಬರ ವ್ಯಾಖ್ಯೆಯಲ್ಲಿ ಏನೂ ವ್ಯತ್ಯಾಸವಿಲ್ಲ. ಆತ್ಮಜ್ಞಾನದ ಅನುಭವ ಮತ್ತು ಅದು ಕೃತಿರೂಪಕ್ಕೆ ಇಳಿಯುವುದು ಇದು ಎರಡರಲ್ಲೂ ಸಮಾನವಾಗಿದೆ.

**ಪ್ರ. 68 : ವಿಚಾರ ಪೂರ್ವಕ ಕಾರ್ಯ ಮಾಡುವವನಿಗೆ ಏನು ಲಭಿಸುತ್ತದೆ?**

**ಉತ್ತರ : ವಿಚಾರ ಪೂರ್ವಕ ಕಾರ್ಯ ಮಾಡುವವನಿಗೆ ಹೆಚ್ಚಿನ ಯಶ ಲಭಿಸುತ್ತದೆ.**

ಸಂಸ್ಕೃತ ಸುಭಾಷಿತಗಳಲ್ಲಿ ಭಾರವಿಕವಿಯ ಸುಭಾಷಿತ ಒಂದು ಇದೆ.

**ಸಹಸಾವಿದಧೀತನ ಕ್ರಿಯಾಂ, ಅವಿವೇಕಃ ಪರಮಾಪದಾಂ ಪದಂ ।**
**ವೃಣುತೇಹಿ ವಿಮರ್ಶಕರಿಣಂ ಗುಣಲುಬ್ಧಾಃ ಸ್ವಯಮೇವ ಸಂಪದಃ ॥**

ಯಾವುದೇ ಕಾರ್ಯವನ್ನು ಮಾಡಲು ಒಮ್ಮೆಲೇ ಪ್ರವೃತ್ತರಾಗಬಾರದು. ಹಾಗೆ ಮಾಡುವರು ಅವಿವೇಕದ ಲಕ್ಷಣ ಅವಿಚಾರತೆಯ ಲಕ್ಷಣ. ಅವಿವೇಕದಿಂದ ಕಾರ್ಯಮಾಡುವುದೆಂದರೆ ಆಪತ್ತಿಗೆ ಆಮಂತ್ರಣ ಕೊಟ್ಟಂತೇನೇ ಯಾರು, ಯಾವುದೇ ಕಾರ್ಯವನ್ನು ಅತ್ಯಂತ ವಿಚಾರಪೂರ್ವಕ ಮಾಡುವರೋ ಅವರು ವಿವೇಕ ಸಂಪನ್ನರಾಗುವರು.

ಮನುಷ್ಯ ಅನೇಕ ಸಲ ವಿವಿಧ ಪರಿಸ್ಥಿತಿಗಳಲ್ಲಿ ಸಿಕ್ಕು ಬೀಳುತ್ತಾನೆ ಮತ್ತು ಆ ಪ್ರಸಂಗದಿಂದ ಪಾರಾಗಲು ಅನೇಕ ಉಪಾಯ ಮಾಡಬೇಕಾಗುತ್ತದೆ. ಆಗ ಅವನು ಮಾಡಬೇಕು, ಹೇಗೆ ಮಾಡಬೇಕು ಅದರ ಪರಿಣಾಮ ಏನಾದೀತು, ಅದಕ್ಕಾಗಿ ಯಾವ ಮುನ್ನೆಚ್ಚರಿಕೆಯನ್ನು ತೆಗೆದುಕೊಳ್ಳಬೇಕು ಎಂದು ವಿಚಾರಮಾಡಿ ನಿರ್ಣಯ ತೆಗೆದುಕೊಂಡರೆ ಮಾತ್ರ ಅದರಂತೆ ಅವನಿಗೆ ಒಳ್ಳೇ ಫಲ ಲಭಿಸುವುದರಲ್ಲಿ ಸಂಶಯವೇ ಇಲ್ಲ.

# ಪುರುಷೋತ್ತಮ ಮಾಸದ ಏಕಾದಶಿಗಳು

**ಅಚಿಂಜ್ಯೋ**

ಏಕಾದಶಿ ಮಹಿಮೆ

ಶ್ರೀಕೃಷ್ಣನು ಯುಧಿಷ್ಠಿರನ ಅಪೇಕ್ಷೆಗೆ ಸುಗುಣವಾಗಿ ಪುರುಷೋತ್ತಮ ಮಾಸದ ಏಕಾದಶಿಗಳ ಮಹಿಮೆಯನ್ನು ತಿಳಿಸುತ್ತಾನೆ. ಅಧಿಕಮಾಸದ ಶುಕ್ಲ ಪಕ್ಷದ ಏಕಾದಶಿಗೆ ಕಮಲಾ ಎಂದು ಹೆಸರು. ಇದು ಉತ್ತಮ ತಿಥಿಯಾಗಿದ್ದು ಈ ವ್ರತದ ಪ್ರಭಾವದಿಂದ ಲಕ್ಷ್ಮೀಯ ಅನುಕೂಲ್ಯ ವುಂಟಾಗುತ್ತದೆ. ಈ ದಿನ ಬ್ರಾಹ್ಮೀ ಮುಹೂರ್ತದಲ್ಲಿ ಎದ್ದು ಶ್ರೀ ಪುರುಷೋತ್ತಮ ಭಗವಂತನನ್ನು ನೆನೆಸಬೇಕು. ವಿಧಿಯುಕ್ತವಾಗಿ ಸ್ನಾನ ನಿಯಮಗ್ರಹಣ ಮಾಡಬೇಕು. ಮನೆಯಲ್ಲಿ ಜಪ ಮಾಡಿದರೆ ಒಂದು ಪಟ್ಟು ನದಿ ತಟದಲ್ಲಿ ಜಪಮಾಡಿದರೆ ಎರಡು ಪಟ್ಟು ಗೋಶಾಲೆಯಲ್ಲಿ ಸಹಸ್ರಪಟ್ಟು ಅಗ್ನಿ ಹೋತ್ರ ಮನೆಯಲ್ಲಿ ಸಾವಿರದ ನೂರು ಪಟ್ಟು ಶಿವಕ್ಷೇತ್ರದಲ್ಲಿ ತೀರ್ಥದಲ್ಲಿ ದೇವತೆಗಳ ಸನ್ನಿಧಿಯಲ್ಲಿ ಹಾಗೂ ತುಲಸಿಯ ಹತ್ತಿರ ಲಕ್ಷ ಪಟ್ಟು ಶ್ರೀ ಭಗವಾನ್ ಹತ್ತಿರದಲ್ಲಿ ಅನಂತ ಗುಣ ಫಲ ಲಭಿಸುತ್ತದೆ.

ಆವಂತಿಪುರದಲ್ಲಿ ಶಿವಶರ್ಮನೆಂಬ ಬ್ರಾಹ್ಮಣನಿಗೆ ಐವರು ಮಕ್ಕಳಿದ್ದು ಅವರೊಳಗೆ ಅತಿ ಕಿರಿಯನು ಪಾಪಾಚಾರಿಯಾಗಿದ್ದು ತಂದೆ ಹಾಗೂ ಸ್ವಜನರನ್ನು ತ್ಯಜಿಸುತ್ತ ಬಹುದೂರದ ಕಾಡಿಗೆ ಹೋದನು. ದೈವಯೋಗದಿಂದ ತೀರ್ಥರಾಜ ಪ್ರಯಾಗಕ್ಕೆ ಹೋಗಿ ತಲುಪಿದನು. ಹಸಿವಿನಿಂದ ದುರ್ಬಲದೇಹ ದೀನಮುಖಿಯೂ ಆದ ಆತನು ತ್ರಿವೇಣಿಯಲ್ಲಿ ಸ್ನಾನ ಮಾಡಿ ಶುಚೀರ್ಭೂತ ನಾದನು. ಹಸಿವಿನಿಂದ ಪೀಡಿತನಾಗಿ ಆತನು ಮುನಿಗಳ ಆಶ್ರಮದ ಅನ್ವೇಷಣೆಯಲ್ಲಿದ್ದಾಗ ಒಂದು ಆಶ್ರಮ ಕಣ್ಣಿಗೆ ಬಿದ್ದಿತು. ಅಲ್ಲಿ ಪುರುಷೋತ್ತಮ ಮಾಸದ ನಿಮಿತ್ತ ಬಹುಜನರು ನೆರೆದಿದ್ದರು.

ಆಶ್ರಮದಲ್ಲಿ ಪಾಪನಾಶಕ ಕಥೆಯನ್ನು ಹೇಳುವ ಬ್ರಾಹ್ಮಣರ ಮುಖದಿಂದ ಕಮಲಾ ಏಕಾದಶಿಯ ಮಹಿಮೆಯನ್ನು ಕೇಳಿದನು. ಈ ಏಕಾದಶಿಯು ಪರಮ ಪುಣ್ಯ ಹಾಗೂ ಮೋಕ್ಷದಾಯಕ ವಾಗಿದೆ ಅವರೆಲ್ಲರ ಜೊತೆಗೆ ಮುನಿಯ ಆಶ್ರಮದಲ್ಲಿ ವ್ರತವನ್ನು ಆಚರಿಸಿದನು. ಅದೇ ದಿನ ಅರ್ಧ ರಾತ್ರೆ ಕಳೆದ ನಂತರ ಭಗವತಿ ಲಕ್ಷ್ಮೀಯು ಬ್ರಾಹ್ಮಣನ ಬಳಿಗೆ ಬಂದು ಕಮಲಾ ಏಕಾದಶಿಯಿಂದ ನಿನ್ನ ಮೇಲೆ ಪ್ರಸನ್ನಳಾಗಿ ವರವನ್ನು ಕೊಡುತ್ತೇನೆ ಎಂದಾಗ ಬ್ರಾಹ್ಮಣನು ಅಮ್ಮಾ ನೀನು ವ್ರತ ಮಹಾತ್ಮೆಯನ್ನು ತಿಳಿಸು ಎಂದಾಗ ಲಕ್ಷ್ಮೀಯು ಈ ಏಕಾದಶಿಯು ಪವಿತ್ರವೂ ಉತ್ತಮವೂ ಆಗಿದೆ. ಪುಣ್ಯಪ್ರದವೂ ದುಃಸ್ವಪ್ನ ನಾಶವೂ ಆಗಿರುವ ಈ ಏಕಾದಶಿ ಮಹಾತ್ಮೆಯ ಒಂದು ಅರ್ಧ ಶ್ಲೋಕವನ್ನು ಶ್ರದ್ಧೆಯಿಂದ ಪಠಿಸಿದರೆ ಕೋಟಿ ಮಹಾಪಾಪಗಳಿಂದ ತತ್ಕಾಲದಲ್ಲಿ ಮುಕ್ತನಾಗುವನು. ಮಾಸಗಳಲ್ಲಿ ಪುರುಷೋತ್ತಮ ಮಾಸವೂ ನದಿಗಳಲ್ಲಿ ಗಂಗೆಯು ಪಕ್ಷಿಗಳಲ್ಲಿ ಗರುಡ ಶ್ರೇಷ್ಠರು. ತಿಥಿಗಳಲ್ಲಿ ದ್ವಾದಶಿ ತಿಥಿಯು ಶ್ರೇಷ್ಠ. ಸಮಸ್ತ ದೇವತೆಯರು ಇಂದಿಗೂ ಏಕಾದಶಿ ವ್ರತಕ್ಕಾಗಿ ಭಾರತದಲ್ಲಿ ಜನ್ಮ ನೀಡುತ್ತಿದ್ದಾರೆ. ದೇವಗಣ ಕೂಡ ರೋಗಶೋಕರಹಿತರಾಗಿರಲು ಶ್ರೀ ಹರಿಯನ್ನು ಅರ್ಚಿಸುತ್ತಾರೆ. ಶ್ರೀ ಮನ್ನಾರಾಯಣನ ಹೆಸರನ್ನು ಭಕ್ತಿಪೂರ್ವಕ ಜಪಿಸಬೇಕು. ಯಾವನು ಶ್ರೀ ಹರಿಯ ನಾಮಜಪನಿರತನೋ ಲೀಲಾಕಥಾಕೀರ್ತನೆಯಲ್ಲಿ ತತ್ಪರನೂ ಹರಿಪೂಜಾದಿನಿರತನೂ ಅವನು ಕಲಿಯುಗದಲ್ಲಿ ಕೃತಾರ್ಥರಾಗುವನು.

ಅನಂತ ಚಿಂತಾಮಣಿ ಜ್ಯೋತಿಷಿ, ಅಂಚೆ ಬಿಣಗಾ – 581 364, ಕಾರವಾರ, ಉತ್ತರ ಕನ್ನಡ ಜಿಲ್ಲೆ.



ಹಗಲಿಗೆ ಏಕಾದಶಿ ಮತ್ತು ದ್ವಾದಶಿ ಇದ್ದು ರಾತ್ರೆ ಕಳೆಯುವಾಗ ತ್ರಯೋದಶಿ ಬಂದರೆ ಆ ತ್ರಯೋದಶಿ ಪಾರಾಗೆ ಶ್ರೀವಿಷ್ಣು ಮಂತ್ರ ಜಪಿಸಿ ಭಕ್ತಿ ಶ್ರದ್ಧೆಯಿಂದ ಉಪವಾಸ ಮಾಡಿ ಮನ ಹಾಗೂ ಇಂದ್ರಿಯಗಳನ್ನು ವಶದಲ್ಲಿಟ್ಟುಕೊಂಡು ಗೀತವಾದ್ಯನೃತ್ಯ ಪುರಾಣಾದಿಗಳಿಂದ ರಾತ್ರೆಯನ್ನು ಭಗವಂತನೆದುರು ಜಾಗರಣೆ ಮಾಡಬೇಕು. ದ್ವಾದಶಿ ದಿನ ಎದ್ದು ಸ್ನಾನಗೈದು ಜಿತೇಂದ್ರಿಯನಾಗಿ ಶ್ರೀವಿಷ್ಣು ಪೂಜೆ ನಡೆಸಬೇಕು. ಏಕಾದಶಿಯಂದು ಪಂಚಾಮೃತವನ್ನರ್ಪಿಸಿ ದ್ವಾದಶಿ ದಿನ ಕೇವಲ ಹಾಲಿನಿಂದ ಅಭಿಷೇಕ ಮಾಡಿದರೆ ಶ್ರೀ ಹರಿಯ ಸಾಯುಜ್ಯವು ಪ್ರಾಪ್ತವಾಗುತ್ತದೆ. ಆಮೇಲೆ ಪ್ರಾರ್ಥಿಸಿ ನಿವೇದನೆ ಮಾಡಿ ಭಕ್ತಿಯಿಂದ ಬ್ರಾಹ್ಮಣ ಭೋಜನ ಮಾಡಿಸಿ ಅವರಿಗೆ ದಕ್ಷಿಣೆ ಕೊಟ್ಟು ತೃಪ್ತಿಗೊಳಿಸಬೇಕು. ತದನಂತರ ನಾರಾಯಣನಿಗೆ ಶರಣಾಗತನಾಗಿ ಬಲಿವೈಶ್ವದೇವ ವಿಧಿಯಿಂದ ಪಂಚಮಹಾಯಜ್ಞಗೈದು ಸ್ವಯಂಮೌನಿಯಾಗಿ ತನ್ನ ಬಂಧುಬಳಗದವರೊಡನೆ ಊಟ ಮಾಡ ಬೇಕು. ಈ ಪ್ರಕಾರ ಶುದ್ಧಭಾವದಿಂದ ಪುಣ್ಯಪ್ರದ ಏಕಾದಶಿವ್ರತ ಮಾಡುವವ ಪುನರಾವೃತ್ತಿರಹಿತನಾಗಿ ವೈಕುಂಠ ಧಾಮವನ್ನು ಹೊಂದುತ್ತಾನೆ. ಹೀಗೆ ಲಕ್ಷ್ಮೀಯು ಬ್ರಾಹ್ಮಣನಿಗೆ ವರದಾನ ಮಾಡಿ ಅದೃಶ್ಯಳಾದಳು. ಬಳಿಕ ಬ್ರಾಹ್ಮಣನು ಕೂಡ ಶ್ರೀಮಂತನಾಗಿ ತಂದೆಯಿರುವ ಮನೆಗೆ ಬಂದನು. ಕಮಲಾಏಕಾದಶಿ ವ್ರತಾಚರಣೆಯಿಂದ, ವ್ರತಫಲಶ್ರವಣದಿಂದ ಸರ್ವಪಾಪ ಮುಕ್ತವಾಗುತ್ತದೆ.

## ಪುರುಷೋತ್ತಮ ಮಾಸದ ಕೃಷ್ಣ ಪಕ್ಷ ಏಕಾದಶಿ

ಶ್ರೀ ಕೃಷ್ಣನು ಇದರ ಕಥೆಯನ್ನು ಮುಂದುವರಿಸುವುದು ಶುಕ್ಲ ಇರಲಿ, ಕೃಷ್ಣ ಪಕ್ಷ ಇರಲಿ ಏಕಾದಶಿ ವ್ರತಪಾಲನೆ ಮಾಡಲೇಬೇಕು. ಕಾರಣ ಇವು ಮೋಕ್ಷ ರೂಪಿಸುಖವನ್ನು ಹೆಚ್ಚಿಸುತ್ತದೆ. ಕಲಿಯುಗದಲ್ಲಿ ಏಕಾದಶಿಯು ಭವಬಂಧನದಿಂದ ಮುಕ್ತಗೊಳಿಸುವ ಮನೋವಾಂಛೆ ಪೂರ್ತಿಗೊಳಿಸುವ ಪಾಪನಾಶಕತ್ವದ ಸಾಧನೆಯಾಗಿದೆ. ಏಕಾದಶಿಯು ರವಿವಾರ, ಮಂಗಲ ಪರ್ವದಿನ ಸಂಕ್ರಾಂತಿದಿನ ಬಂದರೆ ಪುಣ್ಯ ಪ್ರದವು ವಿಷ್ಣು ಭಕ್ತರು ಅದನ್ನು ತ್ಯಜಿಸಕೂಡದು.

ಯಾವನು ವಿಧಿಯುಕ್ತ ಏಕಾದಶಿ ವ್ರತ ಮಾಡುವವನೋ ಅವನಿಗೆ ಮೋಕ್ಷ ಮತ್ತು ಜೀವನ್ಮುಕ್ತತೆ ಉಂಟಾಗುವವನು ಎಂದು ಕೃಷ್ಣನು ಹೇಳಿದಾಗ ಯುಧಿಷ್ಠಿರನು ಜೀವನ್ಮುಕ್ತತೆಯ ಕುರಿತು ವಿವರಿಸಲು ವಿನಂತಿಸುವನು. ಆಗ ಶ್ರೀಕೃಷ್ಣನು ಹೀಗೆ ಉತ್ತರಿಸುವನು - ಯಾವನು ಕಲಿಯುಗದಲ್ಲಿ ಭಕ್ತಿಯುಕ್ತನಾಗಿ ಶಾಸ್ತ್ರೋಕ್ತವಾಗಿ ಏಕಾದಶಿ ವ್ರತವನ್ನು ಮಾಡುವವನೋ ಏಕಾದಶಿಯಂತೆ ಪಾಪಹರಣ ಮಾಡುವ ಮತ್ತು ಮಾನವರ ಸರ್ವಮನೋಕಾಮನೆ ಪೂರ್ತಿಗೊಳಿಸುವ ಪವಿತ್ರ ವ್ರತ ಇನ್ನೊಂದಿಲ್ಲ ದಶಮಿಯಂದು ಒಂದು ಬಾರಿ ಊಟ ಮಾಡಿ ನಿರ್ಜಲವ್ರತ ದ್ವಾದಶಿಯಂದು ಪಾರಣೆ ಮಾಡಿದರೆ ಶ್ರೀ ವಿಷ್ಣು ಸಮಾನನಾಗುವನು. ಪುರುಷೋತ್ತಮ ಮಾಸದ ದ್ವಿತೀಯ ಪಕ್ಷ ಏಕಾದಶಿ ವ್ರತ ಗ್ರಹಣದಿಂದ ಇಹ-ಪರಗಳ ಸುಖ ಲಾಭವುಂಟಾಗುವುದು. ಪವಿತ್ರ ಪಾಪ ನಾಶಕ ಈ ವ್ರತವು ಭೋಗ ಮೋಕ್ಷದಾಯಕವಾಗಿದೆ. ಈ ಏಕಾದಶಿಗೆ ಕಾಮದಾ ಕಮಲಾ ಏಕಾದಶಿ ಹೆಸರಿದ್ದು ವಿಧಿಯುಕ್ತವಾಗಿ ಪುಷ್ಪ ಧೂಪ ನೈವೇದ್ಯಾದಿಗಳಿಂದ ಪುರುಷೋತ್ತಮನನ್ನು ಅರ್ಚಿಸಬೇಕು. ಹತ್ತು ಸಂಗಗಳನ್ನು, ಹನ್ನೊಂದು ದೋಷಗಳನ್ನು ತ್ಯಜಿಸಬೇಕು. ದ್ವಾದಶಿ ದಿನದಂದು ಹನ್ನೆರಡು ವಸ್ತುಗಳನ್ನು ತ್ಯಜಿಸಿ ವ್ರತವನ್ನಾಚರಿಸಬೇಕು. ವ್ರತದ ರಾತ್ರೆಗೆ ಜಾಗರಣೆ ಮಾಡಿ ಪುರುಷೋತ್ತಮ ಪೂಜೆಯನ್ನು ಮಾಡುವವನು ಪಾಪಗಳಿಂದ ಬಿಡುಗಡೆಹೊಂದಿ ಪರಮಗತಿಯನ್ನು ಹೊಂದುವನು. ಇದರ ಪಠಣ - ಶ್ರವಣದಿಂದ ಸಹಸ್ರ ಗೋದಾನ ಫಲ ಲಭಿಸುತ್ತದೆ. ★

# ಚರಿತಂ ಜ್ಞಾಪಯ ಮೇ ತೇ



ಸಗ್ರಿ ರಾಘವೇಂದ್ರ ಉಪಾಧ್ಯಾಯ

ಪ್ರತಿನಿತ್ಯ ಬದುಕಿನಲ್ಲಿ ಅನುಸಂಧಾನ ನಡೆಸುತ್ತಿರಬೇಕಾದ ಭಗವಂತನ ಪ್ರಮುಖ ಮಹಿಮೆಗಳನ್ನು ಸರಳ ಮಾತುಗಳಲ್ಲಿ ನಿರೂಪಿಸಿರುವುದು ಶ್ರೀ ಮಧ್ವರ ದ್ವಾದಶ ಸ್ತೋತ್ರಗಳಲ್ಲಿಯ ವೈಶಿಷ್ಟ್ಯಗಳಲ್ಲಿ ಒಂದು.

## ಹತ್ತನೇ ಸ್ತೋತ್ರದಲ್ಲಿ

'ಅವನ ಶ್ರೀಪತಿಃ...' ಇತ್ಯಾದಿಯಾಗಿ ಆರಂಭವಾಗುವ ದ್ವಾದಶಸ್ತೋತ್ರದ ಹತ್ತನೆ ಸ್ತೋತ್ರದಲ್ಲಿ ಭಗವಂತನ ರಕ್ಷಣೆಯ ವೈಖರಿಯೇ ಮುಂತಾದ ಅವನ ಮಹಿಮೆಗಳನ್ನು ಪ್ರತಿಪದ್ಯದ ಪೂರ್ವಾರ್ಧದಲ್ಲಿ ತಿಳಿಸಿ, ಉತ್ತರಾರ್ಧದಲ್ಲಿ ಫಲನಿರೂಪದಲ್ಲಿ **'ಕರುಣಾಪೂರ್ಣ ವರಪ್ರದ ಚರಿತಂ ಜ್ಞಾಪಯ ಮೇ ತೇ'** ಎಂದು ಪರಮಾತ್ಮನಲ್ಲಿ ಪ್ರಾರ್ಥಿಸಲಾಗುವುದು. ಹೇ ಕರುಣಾ ಪೂರ್ಣ - ಕರುಣೆಯಿಂದ ತುಂಬಿ ತುಳುಕುತ್ತಿರುವವನೇ, ಹೇ ವರಪ್ರದ - ಭಕ್ತರಿಗೆಲ್ಲ ಅವರವರ ಸಾಧನಾನುಷ್ಠಾನಕ್ಕನುಗುಣವಾಗಿ ವರಗಳನ್ನು ನೀಡುವವನೇ, ನನ್ನ ಚರಿತೆಯನ್ನು ಜ್ಞಾಪಯ ಮೇ ತೇ - ಚೆನ್ನಾಗಿ ತಿಳಿಸಿಕೊಡು.

### ಅರ್ಥಗಾಂಭೀರ್ಯ :

ಹೀಗೆ ಸರಳವಾಗಿ ತೆರೆದುಕೊಳ್ಳುವ ನಿವೇದನೆಯ ಈ ಮಾತನ್ನು ಆಳವಾಗಿ ಚಿಂತಿಸುತ್ತ ಹೋದಲ್ಲಿ ಆ ಮಾತಿನಿಂದ ಅನುಸಂಧಾನಕ್ಕೆ ಉಪಯುಕ್ತಗಳಾಗುವ ಅರ್ಥಗಳನ್ನು ಹೊರಡಿಸಬಹುದಾಗಿದೆ.

ನಿನ್ನ ಚರಿತ್ರೆಯನ್ನು ಜ್ಞಾಪಿಸಿಕೊಡು ಎಂದು ಕೇಳಿಕೊಳ್ಳಲಾಗುವ ಭಗವಂತನನ್ನು 'ಕರುಣಾ ಪೂರ್ಣ' ಹಾಗೂ 'ವರಪ್ರದ' - ಎಂಬ ಎರಡು ಸಂಬೋಧನೆಗಳಿಂದ ಸಂಬೋಧಿಸುವ ಮೂಲಕ ಚರಿತ್ರೆಯನ್ನು ಜ್ಞಾಪಿಸಿಕೊಡಲು ಕೇಳಿಕೊಳ್ಳುವಲ್ಲಿ ಔಚಿತ್ಯವನ್ನು ಸೂಚಿಸಿಕೊಡಲಾಗಿದೆ. ನಿನ್ನ ಚರಿತ್ರೆಯನ್ನು ನನಗೆ ಜ್ಞಾಪಿಸಿಕೊಡುವುದರಲ್ಲಿ ನಿನಗೆ ವೈಯಕ್ತಿಕವಾಗಿ ಏನೂ ಪ್ರಯೋಜನವಿಲ್ಲ. ಆದರೂ ನೀನು ಕರುಣಾಪೂರ್ಣನಾಗಿರುವವನು. ಭಕ್ತವತ್ಸಲನಾದ ನಿನ್ನಲ್ಲಿ ಭಕ್ತರ ಬಗ್ಗೆ ಕರುಣೆಯ ಪ್ರವಾಹವೇ ಹರಿಯುತ್ತಿದೆ. ಅಂತಹ ಕರುಣೆಯ ಪರಿಣಾಮವಾಗಿ, ಭಕ್ತನಾದ ನನ್ನ ಉದ್ಧಾರಕ್ಕಾಗಿ ನಿನ್ನ ಚರಿತೆಯನ್ನು ಜ್ಞಾಪಿಸಿಕೊಡಬೇಕು. ಬೇರೆ ಬೇರೆ ಭಕ್ತರಿಗೆ ಬೇರೆ ಬೇರೆ ಬಗೆಯ ವರಗಳನ್ನು ನೀಡಿ ನಿನ್ನ ಕರುಣೆಯ ಪರಾಕಾಷ್ಠೆಯನ್ನು ತೋರಿಸಿಕೊಟ್ಟಿರುವವನು ನೀನು. ನನಗೂ ನಿನ್ನ ಚರಿತೆಯನ್ನು ತಿಳಿದುಕೊಳ್ಳುವಂತೆ 'ವರ'ವನ್ನು ನೀಡು ಎಂಬ ಧ್ವನಿ ಹೊರಡುವಂತೆ 'ವರಪ್ರದ' ಎಂಬ ಮತ್ತೊಂದು ಸಂಬೋಧನೆಯನ್ನೂ ಬಳಸಲಾಗಿದೆ.

ವೇದಾಂತ ಉಪನ್ಯಾಸಕರು, ಸಂಸ್ಕೃತ ಕಾಲೇಜು, ಉಡುಪಿ



### ಚರಿತೆಗೇ ವಿಶೇಷಣಗಳು :

ಅಥವಾ 'ಕರುಣಾಪೂರ್ಣ' ಹಾಗೂ 'ವರಪ್ರದ' - ಎಂಬ ಎರಡೂ ವಿಶೇಷಣಗಳನ್ನು ಚರಿತ್ರೆಗೆ ಅನ್ವಯಿಸುವಂತೆ ಸಂಯೋಜಿಸಬಹುದು - 'ಕರುಣಾಪೂರ್ಣ - ವರಪ್ರದ - ಚರಿತಂ ಜ್ಞಾಪಯ ಮೇ ತೇ' - ಎಂಬುದಾಗಿ ನನ್ನ ಕರುಣಾಪೂರ್ಣವಾದ, ಭಕ್ತರಿಗೆ ವರಗಳನ್ನು ನೀಡುವ ನಿನ್ನ ಚರಿತ್ರೆಯನ್ನು ತಿಳಿಸಿಕೊಡು - ಎಂಬ ಅರ್ಥ ಹೊರಡುವುದು.

**'ಸೋಽಯಂ ವಿಹಾರ ಇಹ ಮೇ ತನುಭೃತ್‌ಸ್ವಭಾವಸಂ ಭೂತಯೇ'** - ಎಂದಿರುವಂತೆ ಭಗವಂತನು ಸಜ್ಜೀವರ ಬಗೆಗಿನ ಕರುಣೆಗೆ ಒಳಗಾಗಿ ಅವರ ಸುಪ್ತವಾದ ಸ್ವಭಾವದ ಅಭಿವ್ಯಕ್ತಿಗೆ ಪೂರಕವಾಗಿ ಹೇಗೆ ಜಗತ್‌ಸೃಷ್ಟಿಯನ್ನು ಆಟದ ರೀತಿಯಲ್ಲಿ ನಡೆಸುವನೋ ಹಾಗೆಯೇ ನಿಯಮನವೇ ಮುಂತಾದ ಪ್ರತಿಯೊಂದು ಚಟುವಟಿಕೆಯನ್ನು ಸಜ್ಜೀವರ ಮೇಲಿನ ಕರುಣೆಗೆ ಒಳಗಾಗಿ, ಅವರಿಗೆ ಸ್ವರೂಪಾನಂದದ ವರ ದೊರಕುವಂತೆ ನಡೆಸುವನು. ಅವನ ಪ್ರತಿಯೊಂದು ಚಟುವಟಿಕೆಯ ಹಿನ್ನೆಲೆಯಲ್ಲೂ ಇದನ್ನು ನಾವು ವಿಶ್ಲೇಷಿಸಿಕೊಳ್ಳಬೇಕು. ನಮ್ಮಿಂದ ಅಷ್ಟೊಂದು ಸೂಕ್ಷ್ಮವಾದ ಅನುಸಂಧಾನ ಶಕ್ಯವಿಲ್ಲ ಎಂಬುದಕ್ಕಾಗಿಯೇ ಅವನಲ್ಲೇ ಜ್ಞಾಪಿಸಿಕೊಡಲು ಮೊರೆಹೊಕ್ಕುವುದು - ಕರುಣಾಪೂರ್ಣ - ವರಪ್ರದ - ಚರಿತಂ ಜ್ಞಾಪಯ ಮೇ ತೇ ನಿನ್ನ ಚರಿತೆ, ಚರಿತೆಯ ಒಂದೊಂದು ಅಂಶವೂ ಭಕ್ತರ ಬಗೆಗಿನ ಕರುಣೆಯಿಂದ ತುಂಬಿರುವಂತಹದ್ದು; ಆದುದರಿಂದಲೇ ಭಕ್ತರ ಪಾಲಿಗೆ 'ವರಪ್ರದ'ವಾದುದು. ನಿನ್ನ ಚರಿತೆಯಲ್ಲಿಯ ಈ ವೈಶಿಷ್ಟ್ಯವನ್ನು ಜ್ಞಾಪಿಸಿಕೊಡು ... ಎಂಬ ಬಿನ್ನಹ.

### ಚರಿತೆಯ ವ್ಯಾಪ್ತಿ :

**ರಾಮಾಯಣ, ಮಹಾಭಾರತಾದಿಗಳಲ್ಲಿ ನಿರೂಪಿತವಾಗಿರುವಂತಹದ್ದಷ್ಟೇ ಭಗವಂತನ ಚರಿತೆಯಲ್ಲ; ಪ್ರತಿಯೊಂದು ದೇಶದ, ಕಾಲದ ಪ್ರತಿಯೊಬ್ಬ ವ್ಯಕ್ತಿಯ ಮೂಲಕ ನಡೆಯುವ ಪ್ರತಿಯೊಂದು ಚಟುವಟಿಕೆಯೂ ಭಗವಂತನ ಚರಿತೆಯೇ ಆಗುವುದು. ಅದನ್ನು ಭಗವಂತನ ಚರಿತೆಯೆಂದು ಗುರುತಿಸಿಕೊಳ್ಳುವ ಆಧ್ಯಾತ್ಮಿಕ ದೃಷ್ಟಿಕೋನ ಬೇಕಷ್ಟೇ. ಅದಕ್ಕಾಗಿಯೇ ಅಂತಹ ದೃಷ್ಟಿಪ್ರದನಾದ ಭಗವಂತನಲ್ಲಿ ಪ್ರಾರ್ಥಿಸುವುದು '...ಚರಿತಂ ಜ್ಞಾಪಯ ಮೇ ತೇ' -ಎಲ್ಲರ ಮೂಲಕ ನಡೆಯುವ ಪ್ರತಿಯೊಂದು ಸಂಗತಿಯೂ ನಿನ್ನ ಚರಿತವೇ ಆಗಿದೆ ಎಂದು ತಿಳಿಸಿಕೊಡು ಎಂಬ ನಿವೇದನೆ.**

### ಜ್ಞಾಪಯ ಶಬ್ದದ ಅರ್ಥ ವಿಸ್ತಾರ :

ರಾಮಾಯಣಾದಿ ಪುಸ್ತಕಗಳನ್ನೋದಿದರೂ ಭಗವಂತನ ಚರಿತೆಯ ತಿಳುವಳಿಕೆ ಬಂದೇ ಬರುವುದು. ಹೀಗಾದರೂ ಪುನಃ 'ಚರಿತಂ ಜ್ಞಾಪಯ'-ಎಂದು ಬಿನ್ನವಿಸಿಕೊಳ್ಳುವ ಔಚಿತ್ಯವೇನು? 'ಜ್ಞಾಪಯ'-ಎಂಬುದಕ್ಕೆ ಬರೇ ತಿಳಿಸಿಕೊಡು ಎಂಬ ಅರ್ಥವಲ್ಲ. ಪುಸ್ತಕ ಓದಿಯೋ, ಉಪದೇಶ ಕೇಳಿಯೋ ತಿಳಿದ ನಿನ್ನ ಚರಿತೆಯನ್ನು ಮನವರಿಕೆಯಾಗುವಂತೆ ಮಾಡು - ಎಂಬ ಅರ್ಥ. ಹಾಗೆಯೇ '.....ವಿಷ್ಣುಃ ಸರ್ವತ್ರ ಗೀಯತೇ' - ಎಂದು ಹರಿವಂಶ ಸಾರುತ್ತಿರುವಂತೆ ವೇದವೇ ಮುಂತಾದ ಸಚ್ಛಾಸ್ತ್ರಗಳೆಲ್ಲ ನಿನ್ನ ಲೀಲೆಗಳನ್ನೇ, ಮಹಿಮೆಗಳನ್ನೇ ಪ್ರತಿಪಾದಿಸುವ ನಿನ್ನ ಚರಿತೆಯೇ - ಎಂಬ ಅನುಸಂಧಾನವನ್ನು ತಂದುಕೊಳ್ಳುವಂತೆ ಮಾಡು - ಎಂಬ ಅರ್ಥವೂ ಹೊರಡುವುದು. ಈ ಬಗೆಯ ಅರ್ಥಗಾಂಭೀರ್ಯವನ್ನು ವಿವೇಚಿಸಿಕೊಂಡು ಭಗವಂತನ 'ಕರುಣಾಪೂರ್ಣ ವರಪ್ರದ ಚರಿತಂ ಜ್ಞಾಪಯ ಮೇ ತೇ' - ಎಂದು ಪ್ರಾರ್ಥಿಸುತ್ತಿರಬೇಕು.



# ಪ್ರಾಚೀನ ಗುರುಕುಲ ವ್ಯವಸ್ಥೆ - ವಿದ್ಯಾದಾನ

**ಕೋಟೇಶ್ವರ ಸೂರ್ಯನಾರಾಯಣ ರಾವ್**

ಪ್ರಾಚೀನ ಕಾಲದಲ್ಲಿ ವಿದ್ಯಾರ್ಜನೆಯೆನ್ನುವುದನ್ನು ತಪಸ್ಸು ರೂಪದಲ್ಲಿ ಆಚರಣೆಗೆ ತರುತ್ತಿದ್ದರು. ಗುರು ಶಿಷ್ಯರಲ್ಲಿನ ಮಧುರ ಬಾಂಧವ್ಯ, ಶಿಷ್ಯನು ಗುರುಗಳಲ್ಲಿಡುವ ಅಪ್ರತಿಮ ಭಕ್ತಿ. ವಿದ್ಯಾರ್ಜನೆಗಾಗಿ ಗುರುನಿವಾಸದಲ್ಲಿದ್ದು ಅಲ್ಲಿ ಆತನು ಆ ಮನೆಯ ಸರ್ವಕಾರ್ಯದಲ್ಲೂ ಭಾಗಿಯಾಗಿ ಗುರುಪತ್ನಿಗೂ ಮೆಚ್ಚಿನ ಶಿಷ್ಯನಾಗಿ ವಿದ್ಯೆಯನ್ನು ಪಡೆಯುವ ರೀತಿ ಅನೂಹ್ಯ. ಇಂದಿನ ವಿದ್ಯಾರ್ಜನೆಯ ರೀತಿಗೆ ಹೋಲಿಸಲಾರದ ರೀತಿಯಲ್ಲಿ ಅಂದಿನ ಶಿಕ್ಷಣ ಕ್ರಮವಿತ್ತು. ವಿದ್ಯೆಯೆಂದರೆ ಸಂಪೂರ್ಣ ಭಾರತೀಯ ಸಂಸ್ಕೃತಿಯ ಪರಿಧಿಯಲ್ಲಿ ಸಂಸ್ಕೃತವನ್ನೇ ಉಚ್ಚ ಶಿಕ್ಷಣದ ಭಾಷೆಯಾಗಿ ಬಳಸುವ ತನ್ಮೂಲಕ ವಿದ್ಯಾರ್ಜನೆ ಮಾಡುವ ಕ್ರಮ. ಕ್ರಿ. ಶ. 1930ರವರೆಗೂ ಚಾಲನೆಯಲ್ಲಿತ್ತು. ಅಂದಿನ ಶಿಕ್ಷಣ ಕ್ರಮ – ವಿದ್ಯಾಕೇಂದ್ರಗಳ ಉಚ್ಚ ಧರ್ಮನೀತಿ ಇಂದು ನಾವು ನೋಡುವುದು ಸಾಧ್ಯವಿಲ್ಲ. ಭಾರತೀಯತೆ ಹಾಗೂ ಭಾರತೀಯ ಸಂಸ್ಕೃತಿಯ ಕೈಗನ್ನಡಿಯಾಗಿ ಅಂದಿನ ಶಿಕ್ಷಣ ಕ್ರಮವಿತ್ತು. ಸುಗುಣಾಮಾಲಾ ಓದುಗರಿಗಾಗಿ ಈ ವಿಶೇಷ ಲೇಖನ.

ಕನ್ನಡ ನಾಡಿನ ಸುಂದರ ಇತಿಹಾಸ ಎರಡು ಸಾವಿರ ವರ್ಷಕ್ಕೂ ಹಿಂದಿನಿಂದ ನಾಡಿನ ಉದ್ದಗಲದಲ್ಲಿ ಅಲ್ಲಲ್ಲಿ ಶಾಸನದ ಮೂಲಕ ದಾಖಲಿಸಲ್ಪಟ್ಟಿದೆ. ಸಾಧಾರಣ ಕದಂಬ ರಾಜ ಮನೆತನದಿಂದ ಆರಂಭವಾಗುವ - ಮುಂದೆ ವಿವಿಧ ರಾಜಮನೆತನಗಳು ಸರದಿಯಂತೆ ಈ ನಾಡನ್ನಾಳಿದುದು ಹಾಗೂ ಆಡಳಿತ ನಡೆಸಿದ ರಾಜರು ಜನತೆಗೆ ವಿದ್ಯೆ ನೀಡುವಲ್ಲಿ ಕನ್ನಡಕ್ಕೆ ಪ್ರಧಾನ ಸ್ಥಾನ ನೀಡಿದುದು ಉಲ್ಲೇಖನೀಯ. ಸಂಸ್ಕೃತವನ್ನು ಮೇಲ್ದರ್ಜೆ ತರಗತಿಗಾಗಿ, ವಿದ್ವಾಂಸರಿಗಾಗಿ ಬೋಧಿಸುವಕ್ರಮ ಗುರುಕುಲ ಮಾದರಿಯಲ್ಲಿ ವಿಜೃಂಭಿಸಿತ್ತು.

## ಗುರುಕುಲ ಪದ್ಧತಿಯ ಆರಂಭ

ಪ್ರಾಚೀನ ಭಾರತದ ಸಂಪೂರ್ಣ ದೇಶದ ಕಲ್ಪನೆಯನ್ನು ನಾವು ವಿಶ್ಲೇಷಿಸುವುದಾದರೆ ವೈದಿಕ ಪದ್ಧತಿಯಲ್ಲಿ ಗುರುಕುಲಗಳನ್ನು ಋಷಿಮುನಿಗಳು ನಡೆಸುತ್ತಿದ್ದು ಉತ್ತಮ ವನದ ಪರಿಸರದಲ್ಲಿ ನದಿತೀರದ ಆಯ್ದ ಪ್ರದೇಶದಲ್ಲಿ ಆಶ್ರಮ ನಿರ್ಮಿಸಿಕೊಂಡು ಶಿಷ್ಯರನ್ನು ತಮ್ಮ ಆಶ್ರಮದಲ್ಲಿಯೇ ಇರಿಸಿಕೊಂಡು ವಿದ್ಯಾದಾನ ಮಾಡಿರುವ ವಿಧಾನವು ಪ್ರಚಲಿತವಿತ್ತು.

ಈ ವಿಧಾನದಲ್ಲಿ ವಿದ್ಯಾದಾನ ನೀಡುವ ಕ್ರಮವು ಕದಂಬರ ಕಾಲದಿಂದ ಆರಂಭವಾಗಿ 10ನೇ ಶತಮಾನದ ವರೆಗೂ ಆಚರಣೆಯಲ್ಲಿತ್ತು. ಮುಂದಿನ ದಿನಗಳಲ್ಲಿ ಅಲ್ಪಸ್ವಲ್ಪ ಬದಲಾವಣೆಗಳೊಡನೆ ಗುರುಕುಲ ವಿದ್ಯೆಯು ಮುಂದುವರಿದಿತ್ತು. ಆಂಗ್ಲರು ಭಾರತಕ್ಕೆ ಕಾಲಿಟ್ಟನಂತರ ವಿದ್ಯಾದಾನದ ಕಾರ್ಯದಲ್ಲಿ ಬದಲಾವಣೆಗಳು ಕಂಡು ಬರುವುದರೊಂದಿಗೆ ಇಂದಿನ ವಿದ್ಯಾಭ್ಯಾಸದ ವ್ಯವಸ್ಥೆಗೆ ಮಾರ್ಪಾಡುಗೊಂಡಿರುವುದು ಕಂಡು ಬರುತ್ತದೆ.

'ಮಹಾಲಕ್ಷ್ಮೀಕೃಪಾ', 25/1, ಡಿ.ವಿ.ಜಿ. ರಸ್ತೆ, ಬಸವನಗುಡಿ, ಬೆಂಗಳೂರು – 560 004.



ವೈದಿಕ ಪದ್ಧತಿಯಲ್ಲಿ ಗುರುಕುಲಗಳು ಶಾಲೆಗಳಾಗಿದ್ದವು. ಕೆಲವೊಂದು ಗುರುಕುಲಗಳು ಒಂದು ಸಾವಿರದ ವರೆಗಿನ ವಿದ್ಯಾರ್ಥಿಗಳನ್ನು ಹೊಂದಿದ್ದವು.

ಮಹಾಭಾರತದಲ್ಲಿ ಉಲ್ಲೇಖಗೊಂಡಂತೆ ಶೌನಕರು - ಕಣ್ವರು ಕುಲಪತಿಗಳಾಗಿದ್ದ ಗುರುಕುಲಗಳಲ್ಲಿ ವಿದ್ಯಾಭ್ಯಾಸ ಪಡೆಯುವ ವ್ಯವಸ್ಥೆ ಉಲ್ಲೇಖಗೊಂಡಿರುವುದನ್ನು ಗಮನಿಸಬಹುದು.

ಸಾಮೂಹಿಕ ನೆಲೆಯಲ್ಲಿ ಗುರುಕುಲ ಸ್ಥಾಪಿಸಲ್ಪಟ್ಟ ದಾಖಲೆಯನ್ನು ಪರಿಶೀಲಿಸಿದರೆ ಇಂದಿನ ಬಳ್ಳಾರಿ ಜಿಲ್ಲೆಯ ಕುಡುತಿನಿ ಮತ್ತು ಕೊಳಗಲ್ಲುಗಳ ನಡುವೆ ಇದ್ದಿತ್ತು. ಅದರ ಹೆಸರು 'ಕಾರ್ತಿಕೇಯ ತಪೋವನ'ವೆಂದಿತ್ತು.

ರಾಷ್ಟ್ರಕೂಟ ಅರಸರ ಆಳ್ವಿಕೆಯ ಕೊನೆಗಾಲದಲ್ಲಿ ಸ್ಥಾಪಿತವಾದ ಈ ಬೃಹತ್ ವಿದ್ಯಾಲಯ ಚಾಲುಕ್ಯರು ಮುಂದೆ ಹೊಯ್ಸಳರ ಕಾಲದವರೆಗೂ ಉಚ್ಛ್ರಾಯಸ್ಥಿತಿಯಲ್ಲಿತ್ತು.

**ಇನ್ನೊಂದು ಪ್ರಧಾನ ಗುರುಕುಲ 'ಸುವರ್ಣಾಕ್ಷಿ ತಪೋವನ'ವೆಂಬ ಹೆಸರಿನಿಂದ ಪ್ರಸಿದ್ಧವಾಗಿತ್ತು. ಇದರ ಸ್ಥಾಪಕಿ 'ಕಂಚಿಕಬ್ಬೆ' ಎಂಬಾಕೆ. ಈ ತಪೋವನದ ವರ್ಣನೆಯನ್ನು ಗಮನಿಸಿದರೆ, ಮೂಕ ಪ್ರಾಣಿಗಳೂ ಪ್ರಾಸಬದ್ಧವಾಗಿ ಸಂಸ್ಕೃತ ಶ್ಲೋಕ-ಪದ್ಯಗಳನ್ನು ಹೇಳುತ್ತಿರುವಾಗ ಕಿವಿನಿಮಿರಿಸಿ ನಿಂತು ಆಲೈಸುತ್ತಿದ್ದುವಂತೆ. ಗಿಳಿಗಳು ಕೆಲವನ್ನು ಗಮನಿಸಿ ಅದನ್ನೇ ಗಿಳಿಪಾಠ ಒಪ್ಪಿಸುತ್ತಿದ್ದುವಂತೆ.**

ಅಂದಿನಕಾಲದ ವ್ಯವಸ್ಥೆಯಂತೆ ಗುರುಗಳ ನಿವಾಸದಲ್ಲಿ ವಿದ್ಯಾರ್ಥಿಯಾದವನು ವಾಸಮಾಡಿ ಗುರುಸೇವೆ ಮಾಡಿ ಗುರುವನ್ನು ಮೆಚ್ಚಿಸಿಕೊಂಡು ವಿದ್ಯೆಯನ್ನು ಪಡೆಯುತ್ತಿದ್ದ ವ್ಯವಸ್ಥೆಯಿತ್ತು. ಇದು 18ನೇ ಶತಮಾನದಲ್ಲೂ **ಐಗಳ ಮಠ**ವೆಂಬ ಹೆಸರಿನಲ್ಲಿ ಚಲಾವಣೆಯಲ್ಲಿತ್ತು.

ಶಾತವಾಹನರ ಕಾಲದಿಂದ ಚಾಲುಕ್ಯರ ಕಾಲದವರೆಗೂ ಬೌದ್ಧವಿಹಾರಗಳ ಹಿಡಿತದಲ್ಲಿ ಶಿಕ್ಷಣ ವ್ಯವಸ್ಥೆಯಿತ್ತು. ವೈದಿಕ ಶಿಕ್ಷಣವು ಚಾಲನೆಯಲ್ಲಿದ್ದರೂ ಪ್ರಬಲ ವ್ಯವಸ್ಥೆ ಬೌದ್ಧ ವಿಹಾರದ ಮೂಲಕವಿರುತ್ತಿತ್ತು. ಎರಡನೆ ಪುಲಕೇಶಿಯ ಕಾಲದಲ್ಲಿ ಕರ್ನಾಟಕ ರಾಜ್ಯದಾದ್ಯಂತ ಒಂದು ನೂರು ಬೌದ್ಧವಿಹಾರಗಳು ಚಾಲನೆಯಲ್ಲಿದ್ದವು ಎನ್ನುವುದನ್ನು ಚೀನಿ ಪ್ರವಾಸಿ ಹ್ಯೂಯೆನ್‌ತ್ಸಾಂಗ್ ತನ್ನ ಬರಹದಲ್ಲಿ ಉಲ್ಲೇಖಿಸಿದ್ದ.

ಕ್ರಿ. ಶ. 10ನೇ ಶತಮಾನದ ನಂತರದ ದಿವಸಗಳಲ್ಲಿ ಬೌದ್ಧವಿಹಾರಗಳು ಕ್ಷೀಣಿಸಿದ ನಂತರ ರಾಜರ ಕೃಪಾಪೋಷಿತ ವೈದಿಕ ಧರ್ಮದ ವಿದ್ಯಾಕೇಂದ್ರಗಳು ಅಸ್ತಿತ್ವಕ್ಕೆ ಬಂದವು. ಈ ವಿಷಯಗಳು ಶಿವಮೊಗ್ಗ ಜಿಲ್ಲೆಯ ಬಳ್ಳಿಗಾವೆಯ ಶಾಸನದಲ್ಲಿ ಉಲ್ಲೇಖಿಸಲ್ಪಟ್ಟಿತ್ತು.

ಮುಂದಿನ ದಿನಗಳಲ್ಲಿ ಪ್ರಾಥಮಿಕ ಶಾಲೆಗಳು ಉದಿಸಿದವು. ಇಲ್ಲಿ ಸಂಪೂರ್ಣ ಕನ್ನಡದಲ್ಲಿಯೇ ಶಿಕ್ಷಣ ನೀಡಲ್ಪಡುತ್ತಿತ್ತು. ಉಚ್ಚ ಶಿಕ್ಷಣಕ್ಕೆ ಕೇಂದ್ರಗಳಾಗಿ ಅಗ್ರಹಾರಗಳು, ಮಠ, ಬ್ರಹ್ಮಪುರಿ ಹಾಗೂ ಘಟಿಕಾಸ್ಥಾನಗಳು ಕಾರ್ಯನಿರ್ವಹಿಸುತ್ತಿದ್ದವು. ಉಚ್ಚ ಶಿಕ್ಷಣ ಸಂಸ್ಕೃತದಲ್ಲಿ ನೀಡಲಾಗುತ್ತಿತ್ತು.

ಶಾಸನಗಳಲ್ಲಿ ಉಲ್ಲೇಖಿಸಲ್ಪಟ್ಟಂತೆ ಪ್ರಾಥಮಿಕ ಶಿಕ್ಷಣಕ್ಕೆ ವಿವಿಧ ಹೆಸರುಗಳಿದ್ದವು. ಕರ್ನಾಟಕ ಶಿಕ್ಷೆ, ಬಾಲಶಿಕ್ಷೆ, ಕರ್ನಾಟಕ ಬಾಲಶಿಕ್ಷೆ ಎಂಬ ಹೆಸರುಗಳಿರುವುದು ಶಾಸನಗಳ ಮೂಲಕ ತಿಳಿದು ಬರುತ್ತದೆ.

ಬಾಲಕರಿಗೆ ಐದನೆ ವರ್ಷದಲ್ಲಿ ಅಕ್ಷರಾಭ್ಯಾಸ - 'ಓಂ ನಮಃ' ಎನ್ನುವ ಶಬ್ದದಿಂದ ಆರಂಭಿಸಲಾಗುತ್ತಿತ್ತು. ವಿದ್ಯಾಭ್ಯಾಸದ ಪೂರ್ವ ಉಪನಯನ ಎಂಬ ಸಂಸ್ಕಾರ ನೀಡಿ ಗುರುವಿನಡೆಗೆ ಕಳಿಸುವುದು. ಪ್ರಾರಂಭದಲ್ಲಿ ಕನ್ನಡ ಉಪಾಧ್ಯಾಯರು ಕನ್ನಡ ಅಕ್ಷರಗಳನ್ನೂ, ಋಗ್ವೇದದ ಮಂತ್ರಗಳನ್ನೂ ಬಾಯಿಪಾಠ ಮಾಡಿಸುತ್ತಿದ್ದರು. ನರಸಿಂಹರಾಜಪುರ ಹಾಗೂ ತಾಳಗುಂದದಲ್ಲಿ ಪ್ರಾಥಮಿಕ ಶಿಕ್ಷಣಕೇಂದ್ರಗಳಿದ್ದವು.

## ರಾಜ ಕೃಪಾಪೋಷಿತ ಅಗ್ರಹಾರಗಳು

ಅಂದಿನ ಕಾಲದಲ್ಲಿ ಉಚ್ಚಶಿಕ್ಷಣವನ್ನು ಅಗ್ರಹಾರಗಳಲ್ಲಿ ಬ್ರಾಹ್ಮಣರು ನೀಡುತ್ತಿದ್ದರು. ಅವರಿಗೆ ಊರುಗಳನ್ನು 'ದತ್ತಿ' ಮೂಲಕ ಕೊಡಲಾಗುತ್ತಿತ್ತು. ಅದರ ಆದಾಯದಿಂದ ಶಿಕ್ಷಣಕೇಂದ್ರಗಳನ್ನು ನಡೆಸಬೇಕಾಗಿತ್ತು. ದತ್ತಿ ಮತ್ತು ಅಗ್ರಹಾರದ ವಿಷಯವು ಕ್ರಿ. ಶ. 420ರಲ್ಲಿ ತಾಮ್ರಪಟದಲ್ಲಿ ಉಲ್ಲೇಖಿಸಲ್ಪಟ್ಟಿರುವುದು ಕಂಡು ಬರುತ್ತದೆ. ಅಗ್ರಹಾರವನ್ನು ದತ್ತಿಯಾಗಿ ಪಡೆದ ವೈದಿಕ ಬ್ರಾಹ್ಮಣರು ಮಹಾಜನರೆಂಬ ಹೆಸರಿನಲ್ಲಿ ಕರೆಯಲ್ಪಡುತ್ತಿದ್ದರು. ಶಾಸನಗಳಲ್ಲಿ ಉಲ್ಲೇಖಿಸಲ್ಪಟ್ಟಂತೆ ಅವರ ಸರ್ವಶಾಸ್ತ್ರ ಪಾರಂಗತರಾಗಿರುತ್ತಿದ್ದರು.

ಅಗ್ರಹಾರಗಳಲ್ಲಿ ಪಾಠಗಳನ್ನು ಆರಂಭಿಸುವ ಮೊದಲು 'ಉಪಾಕರ್ಮ'ವೆಂಬ ಅಧ್ಯಯನದ ಆರಂಭ ದಿನವನ್ನು ಆಚರಿಸುತ್ತಿದ್ದರು. ಕೆಲವೊಮ್ಮೆ ಅಧ್ಯಯನವು ಗೃಹಸ್ಥಾಶ್ರಮಿಯಾದ ನಂತರವೂ ಮುಂದುವರಿಯುತ್ತಿತ್ತು.

ಕರ್ನಾಟಕದ ವ್ಯವಸ್ಥಿತ ಅಗ್ರಹಾರವಾಗಿ ಶಿವಮೊಗ್ಗ ಜಿಲ್ಲೆಯ ತಾಳಗುಂದ ಎಂಬಲ್ಲಿತ್ತು. (ಸ್ಥಾನಕುಂದೂರು) ಮುಂದೆ ಮಯೂರವರ್ಮನೆಂದು ಪ್ರಸಿದ್ಧಿಪಡೆದ ಕದಂಬರಾಜನ ಪೂರ್ವಜ ಮುಕ್ಕಣ್ಣ ಕದಂಬನೆನ್ನುವವನು ಅದನ್ನು ಸ್ಥಾಪಿಸಿದ್ದನು.

ಆಗ ಶಾಸನದಲ್ಲಿ ಉಲ್ಲೇಖಗೊಂಡಂತೆ. ಸೂಕ್ತ ವಿದ್ಯಾಸಂಪತ್ತನ್ನ ಬ್ರಾಹ್ಮಣರು ಸಿಗದಿದ್ದುದರಿಂದ ಈಗಿನ ಉತ್ತರ ಪ್ರದೇಶದ ಅಹಿಚ್ಛತ್ರದಿಂದ ಮೂವತ್ತೆರಡು ಬ್ರಾಹ್ಮಣ ಕುಟುಂಬಗಳನ್ನು ಕರೆತಂದು ಸ್ಥಿತ ಗೊಳಿಸಿದನೆಂದೂ, ಮುಂದೆ ಕದಂಬರಾಜ ಮಯೂರವರ್ಮನು ಈ ಅಗ್ರಹಾರಕ್ಕೆ 144ಹಳ್ಳಿಗಳನ್ನು ದಾನ ಮಾಡಿದ್ದನೆಂದು ಕ್ರಿ. ಶ. 1091ರ ಶಾಸನವೊಂದರಲ್ಲಿ ಉಲ್ಲೇಖಗೊಂಡಿತ್ತು.

ಚಾಲುಕ್ಯರ ಕಾಲದಲ್ಲಿ ಬಾದಾಮಿಯಲ್ಲಿಯೂ ಒಂದು ವಿದ್ಯಾಕೇಂದ್ರ ಅಗ್ರಹಾರವಿತ್ತು ಎನ್ನುವುದನ್ನು ಕ್ರಿ. ಶ. 699ರ ಶಾಸನದಲ್ಲಿ ಉಲ್ಲೇಖಗೊಂಡಿದೆ. ಇನ್ನೊಂದು ಶಾಸನದಲ್ಲಿ ಕಂಡು ಬಂದಂತೆ (ಕ್ರಿ. ಶ. 759) ಬಾದಾಮಿಯಲ್ಲಿ 14 ವಿದ್ಯೆಗಳನ್ನು ಬಲ್ಲ ಎರಡು ಸಾವಿರ ಬ್ರಾಹ್ಮಣರು ಇದ್ದಿದ್ದರೆಂದು ತಿಳಿದು ಬರುತ್ತದೆ.



ರಾಷ್ಟ್ರಕೂಟರ ಪ್ರಮುಖ ಅಗ್ರಹಾರ ಐಹೊಳೆ (ಆರ್ಯಪುರ) ಯಲ್ಲಿ 500 ಮಂದಿ ಚತುರ್ವೇದಿ ಬ್ರಾಹ್ಮಣ ಸಮುದಾಯವಿದ್ದಿತ್ತೆಂದು ತಿಳಿದು ಬರುತ್ತದೆ. ಮತ್ತೊಂದು ಶಾಸನದಲ್ಲಿ ಉಲ್ಲೇಖಗೊಂಡಂತೆ ಉತ್ತರಕರ್ನಾಟಕದ ವಿಜಾಪುರದಿಂದ ಆರಂಭಿಸಿ ದಕ್ಷಿಣದ ಹಲವಾರು ಪಟ್ಟಣಗಳಲ್ಲಿ ಒಂದೊಂದು ಅಗ್ರಹಾರದಂತೆ ಕಾರ್ಯಪ್ರವೃತ್ತರಾಗಿರುವುದು ಕಂಡು ಬರುತ್ತದೆ. ಇಲ್ಲಿ ವಿದ್ವಾಂಸ ಬ್ರಾಹ್ಮಣರು ವೇದ, ವೇದಾಂಗ, ಸ್ಮೃತಿ, ಇತಿಹಾಸ, ಪುರಾಣ, ಜ್ಯೋತಿಷ್ಯ, ಖಗೋಳ ಶಾಸ್ತ್ರ, ನ್ಯಾಯಮೀಮಾಂಸ, ಸಾಂಖ್ಯಯೋಗ ಇವುಗಳ ಪಠ್ಯಕ್ರಮವನ್ನು ಪಾಲಿಸುತ್ತಿದ್ದರು. ಆ ಬ್ರಾಹ್ಮಣರಿಗೆ ವೇತನ ರೂಪವಾಗಿ 'ವೃತ್ತಿ' - (ಹಣ) ಎನ್ನುವ ಹೆಸರಿನಲ್ಲಿ ಕೆಲವೊಮ್ಮೆ ನಗದು ಅಥವಾ ಭೂಮಿ ಕೊಡಲ್ಪಡುತ್ತಿತ್ತು.

**ಅಂದಿನ ಕಾಲದಲ್ಲಿ ರಾಜರು ಈ ರೂಪದಲ್ಲಿ ವಿದ್ಯಾದಾನ ಮಾಡಲು ಪ್ರಬಲ ಕಾರಣವೆಂದರೆ ತಮಗೆ ಪುಣ್ಯಲಭಿಸುವುದೆಂದು ಭಾವಿಸುತ್ತಿದ್ದರು. ಒಂದು ಶಾಸನದಲ್ಲಿ ಕಂಡ ಬಂದ ಒಕ್ಕಣೆ ಈ ರೀತಿಯಿದೆ - "ಪುಣ್ಯನದಿಗಳಲ್ಲಿ ಸ್ನಾನ ಮಾಡುವ ಸಲುವಾಗಿ ತೀರ್ಥಯಾತ್ರೆಗೈದರೆ ಬರುವ ಪುಣ್ಯಕ್ಕಿಂತ ಕೋಟಿಯಷ್ಟು ಪುಣ್ಯ ವಿದ್ಯಾದಾನ ಮಾಡಿದರೆ ಬರುತ್ತದೆಂದು" ಉಲ್ಲೇಖಿಸಲ್ಪಟ್ಟಿದೆ.**

ಪ್ರಾಚೀನ ಕರ್ನಾಟಕದಲ್ಲಿ ಶೈವ ಯತಿಗಳು ದೇವಸ್ಥಾನಗಳಲ್ಲಿ ನೆಲೆನಿಂತು ವಿದ್ಯಾದಾನ ಮಾಡುವ ವ್ಯವಸ್ಥೆಯೂ ಚಾಲನೆಯಲ್ಲಿತ್ತು. ಉದಾಹರಣೆಗೆ ಹರಿಹರದ ಹರಿಹರೇಶ್ವರ ದೇವಾಲಯದಲ್ಲಿ ಆರು ಜನ ಪಂಡಿತರು ನೆಲೆನಿಂತು ಋಗ್ವೇದ, ಯಜುರ್ವೇದ, ವ್ಯಾಕರಣ, ಮೀಮಾಂಸ, ಸಿದ್ಧಾಂತ ಮತ್ತು ಅಕ್ಷರ ಶಿಕ್ಷೆ ಬೋಧಿಸುತ್ತಿದ್ದರೆಂದು ಉಲ್ಲೇಖಗೊಂಡಿದೆ.

ಶಿಕ್ಷಣದಲ್ಲಿ ಅತ್ಯುಚ್ಚ ಶಿಕ್ಷಣವನ್ನು ಬೋಧಿಸುತ್ತಿದ್ದ 'ಘಟಿಕಾ' ಶಿಕ್ಷಣ ಸಂಸ್ಥೆ ಹಲವಾರು ನೂರು ವರ್ಷ ಶಿಕ್ಷಣದಾನ ನೀಡಿದುದು ಉಲ್ಲೇಖವಿದೆ.

ಘಟಿಕಾಸ್ಥಾನಗಳಲ್ಲಿ ಹಿಂದೂ ವೈದಿಕ ಧರ್ಮದ ಚರ್ಚೆಗಳು, ವಾದ, ಪ್ರತಿವಾದ, ವಿದ್ವಾಂಸರಿಂದ ಶಾಸ್ತ್ರಾರ್ಥ ಇತ್ಯಾದಿ ನಿರಂತರವಿರುತ್ತಿತ್ತು. ಘಟಿಕಾ ಸ್ಥಾನದಲ್ಲಿ ವಿದ್ಯೆ ಪಡೆದವನು ಸಮಾಜದಲ್ಲಿ ಮೇಧಾವಿಯಾಗಿ ಗೌರವಿಸಲ್ಪಡುತ್ತಿದ್ದನು. ಪ್ರಾಯಶ ಇಂದು ಕಾಲೇಜುಗಳಲ್ಲಿ 'ಘಟಿಕೋತ್ಸವ' ಎಂಬ ಡಿಗ್ರಿ ನೀಡುವ ವಿಧಿಯ ಹೆಸರು ಈ ಘಟಿಕಾಸ್ಥಾನಗಳಿಂದ ಪ್ರಾಪ್ತವಾಯಿತೆನ್ನಬಹುದು.

## ತಾಂತ್ರಿಕ ಶಿಕ್ಷಣ

ಪಟ್ಟದಕಲ್ಲಿನ ಶಾಸನಗಳಿಂದ ತಿಳಿದು ಬರುವಂತೆ ವಾಸ್ತುಶಿಲ್ಪ, ಶಿಲ್ಪಕಲೆಯ ವ್ಯಾಪಾರದ ವಿಧಿ ವಿಧಾನಗಳು, ಕಬ್ಬಿಣದ ಕೆಲಸ, ಮರದ ಕೆಲಸ ಇತ್ಯಾದಿ ಶಿಕ್ಷಣದ ವಿಷಯವಾಗಿತ್ತು. ಔದ್ಯಮಿಕ ಶಿಕ್ಷಣದಲ್ಲಿ ಮೇಲುಗೈ ಪಡೆದವರು ವೀರ ಪಾಂಚಾಲರೆಂದೂ ಇವರು ಜನಿವಾರ ಧಾರಣೆ ಮಾಡಿ ವಿಶ್ವಕರ್ಮಬ್ರಾಹ್ಮಣರೆಂದೂ ಕರೆಯಲ್ಪಟ್ಟರು. ಆದರೆ ಅಂದಿನ ಶಿಕ್ಷಣ ವಿಧಾನವು ಇಂದಿಗಿಂತ ಭಿನ್ನವಾಗಿದ್ದು ಗುರುವಿನ ಸೇವೆ ಮಾಡಿ ಅವನ ಕೃಪೆಗೆ ಪಾತ್ರರಾಗಿ ಶಿಕ್ಷಣವನ್ನು ಪಡೆಯಬೇಕಾಗಿತ್ತು. ಕೆಲವೊಮ್ಮೆ ಗುರುಪತ್ನಿಯ ಕೃಪೆಗಾಗಿ ಮನೆಕೆಲಸದಲ್ಲೂ

ಶಿಷ್ಯರು ಸಹಾಯಮಾಡುತ್ತಿದ್ದರು. ಆದರೆ ಅದಕ್ಕಾಗಿ ಯಾವುದೇ ಹಿಂಜರಿಕೆಯಿಲ್ಲದೆ ಭಕ್ತಿಯಿಂದ ನಿರ್ವಹಿಸುತ್ತಿದ್ದರು.

### ಪಠ್ಯ ಪುಸ್ತಕಗಳು

ಘಟಿಕಾಸ್ಥಾನದಲ್ಲಿ ಚಾಲನೆಯಲ್ಲಿರುವ ಪಠ್ಯಪುಸ್ತಕಗಳು ಇಂತಿವೆ. ಕೌಮಾರ, ರೂಪಾವತಾರ ಪಾಣಿನಿಯ ಅಷ್ಟಾಧ್ಯಾಯಿ, ಲಕಲಿಶರ - ಲಾಕುಲಾಮ, ತತ್ವಾರ್ಥಸೂತ್ರ, ಭಾರವಿಯ ಕಿರಾತಾರ್ಜುನೀಯ, ಗಜಶಾಸ್ತ್ರ, ಗಣಿತ ಶಾಸ್ತ್ರ, ಖಗೋಳಶಾಸ್ತ್ರ, ಜ್ಯೋತಿಷ ಶಾಸ್ತ್ರ, ವೃಷ್ಟಿ ಶಾಸ್ತ್ರ, ವ್ಯವಹಾರ ಗಣಿತ, ಕ್ಷೇತ್ರಗಣಿತ, ವ್ಯವಹಾರ ರತ್ನ, ಲೀಲಾವತಿ ಜೈನ ಗಣಿತ ಸೂತ್ರ ಟೀಕೋದಾಹರಣೆ, ಜಾತಕ ತಿಲಕ - ಇವುಗಳಲ್ಲದೆ ವೈದ್ಯಶಾಸ್ತ್ರದ ನಲ್ಲಾಳ ಫಲಕ, ದೇವೇಂದ್ರ ಮುನಿಯ ಬಾಲಗ್ರಹ ಚಿಕಿತ್ಸೆ, ನಾಗಾರ್ಜುನ ಕಕ್ಷಾಪುಟ ಇವುಗಳು ಉಲ್ಲೇಖನೀಯ.

ಪಶುವೈದ್ಯಕ್ಕೆ ಗೋವೈದ್ಯ, ಗಜಾಷ್ಟಕ, ಮಾನಸೋಲ್ಲಾಸ ಮತ್ತು ವಿಶ್ವಕೋಶ ಇವುಗಳು ಪ್ರಮುಖ ಪುಸ್ತಕಗಳು. ಆದರೆ ಈ ಪುಸ್ತಕಗಳೆಲ್ಲವೂ ಒಂದರಿಂದ ಒಂದರಂತೆ ಹಸ್ತಪ್ರತಿಯಾಗಿ ಲಿಖಿತಗೊಂಡು ಪಡೆಯಬೇಕಾಗಿತ್ತು.

**ಅಂದಿನ ಕಾಲದ ಶಿಕ್ಷಕರ ಹೆಸರಿನೊಂದಿಗೆ ಭಟ್ಟ, ಭಟ್ಟಾಚಾರ್ಯ, ಭಟ್ಟೋಪಾಧ್ಯಾಯ ಎಂಬ ಹೆಸರುಗಳಿದ್ದು, ಅವರು ಭಟ್ಟ ವೃತ್ತಿಯವರೆಂದು ಗುರುತಿಸಲ್ಪಡುತ್ತಿದ್ದರು. ಆದರೆ ಆ ಹೆಸರುಗಳನ್ನು ಬಳಸಬೇಕಾದರೆ ಅವರು ನಿಜಅರ್ಥದಲ್ಲಿ ಮಹಾನ್ ವಿದ್ವಾಂಸರಾಗಿರಬೇಕಾಗಿತ್ತು.**

**ಅಂದಿನ ಕಾಲದಲ್ಲಿ ಕೆಲವೊಂದು ಪಂಡಿತರು ಎಂತಹ ಪ್ರವೀಣರಿರುತ್ತಾರೆಂದರೆ - ಉದಾಹರಣೆಗೆ ಕೋಡಿ ಮಠದ ವಾಮಶಕ್ತಿ ಪಂಡಿತನು - ಎಂತಹ ಮೇಧಾವಿಯಿರುವನೆನ್ನುವುದನ್ನು ಅವನ ಪ್ರಶಸ್ತಿಗಳಲ್ಲಿ ಕಾಣಬಹುದಾಗಿದೆ. ಆ ಪಂಡಿತನು ವ್ಯಾಕರಣದಲ್ಲಿ ಪಾಣಿನಿ, ತತ್ವಶಾಸ್ತ್ರದಲ್ಲಿ ಭೂಷಣಾಚಾರ್ಯ, ಕಾವ್ಯದಲ್ಲಿ ಸುಬಂಧು, ನಾಟ್ಯಾದಿ ಭರತ ಶಾಸ್ತ್ರಗಳಲ್ಲಿ ಸ್ವತಃ ಭರತ, ಶೈವ ಸಿದ್ಧಾಂತದಲ್ಲಿ ಲಕುಲೀಶ, ಶಿವಪದದಲ್ಲಿ ಸಾಕ್ಷಾತ್ ಸ್ಕಂದನೇ ಆಗಿದ್ದನು. ಇಂತಹ ಮೇಧಾವಿಗಳನ್ನು ಆಗಿನ ಮಹಾರಾಜರು ಗುರುತಿಸಿ ಅವರನ್ನು ಆ ಸ್ಥಾನ ವಿದ್ವಾಂಸರನ್ನಾಗಿಯೂ ಸಕಲವಿಧದ ದತ್ತಿ ನೀಡಿ ಗೌರವಿಸುತ್ತಿದ್ದರು.**

ಪ್ರಾಚೀನ ಕಾಲದಲ್ಲಿ ವಿದ್ಯಾಗುರುವನ್ನು ಸಕಲ ಸವಲತ್ತು ನೀಡಿ ಸಾಕುವ ವ್ಯವಸ್ಥೆಯನ್ನು ಸ್ವತಹ ಪ್ರಜೆಗಳೇ ಮಾಡುತ್ತಿದ್ದರು. ತಮ್ಮ ಮಕ್ಕಳಿಗೆ ವಿದ್ಯೆ ನೀಡುವ ಗುರುಗಳಿಗೆ ಹೊಟ್ಟೆ ಬಟ್ಟೆಗೆ ಕೊರತೆಯಾಗದಂತೆ ನೋಡಿಕೊಳ್ಳುವ ಹೊಣೆಯನ್ನು ನಾಗರಿಕರೇ ನಿರ್ವಹಿಸುತ್ತಿದ್ದರು.

ತಮ್ಮ ಊರಿಗೆ ಪರವೂರಿನಿಂದ ಕರೆಸಿಕೊಂಡ ಉಪಾಧ್ಯಾಯರಿಗೆ ಅವರ ಹೆಸರಿನಲ್ಲಿ ಮನೆ, ಜಮೀನು, ಭೋಜನ ಸೌಕರ್ಯ ನೀರಿನ ಪೂರೈಕೆ ಬಟ್ಟೆಗಳ ಏರ್ಪಾಡು, ವೈದ್ಯಕೀಯ ಸವಲತ್ತು, ಕಾವಲು, ಆಯುಷ್ಕರ್ಮ ವ್ಯವಸ್ಥೆಯನ್ನೂ ಉಚಿತವಾಗಿ ನೀಡುತ್ತಿದ್ದರು.

ನರಸಿಂಹಪುರ ಅಗ್ರಹಾರದಲ್ಲಿ "ಬೋಳೆಯ ಸೋವಿಯಣ್ಣ" ಎಂಬ ಉಪಾಧ್ಯಾಯರಿಗೆ



12 ಗದ್ಯಾಣಗಳ (ಚಿನ್ನದ ನಾಣ್ಯಗಳ) ವೇತನ ಮತ್ತು ಇತರ ಸವಲತ್ತು ನೀಡಿದ ಹಾಗೂ ತಾಳಗುಂದದ ಕನ್ನಡ ಪಂಡಿತನಿಗೆ 5 ಚಿನ್ನದ ನಾಣ್ಯದ ಸಂಬಳ ಮತ್ತು ಸವಲತ್ತು ನೀಡಲ್ಪಟ್ಟಿತ್ತು.

ಘಟಿಕೆಗಳಲ್ಲಿ ವಿದ್ಯಾಭ್ಯಾಸ ಮಾಡಿದವರಿಗೆ ಪರೀಕ್ಷೆ ವಿಧಾನವೂ ಅದ್ಭುತವಾಗಿತ್ತು. ಒಂದೊಂದು ವೇದಕ್ಕೆ ಒಂದೊಂದು ಘಟ (ಮಡಿಕೆ) ದಲ್ಲಿ ನೂರಾರು ಚೀಟಿಗಳನ್ನಿಡುತ್ತಿದ್ದರು. ವಿದ್ಯಾರ್ಥಿ ಆ ವೇದದ ಮಡಿಕೆಯಿಂದ ಚೀಟಿ ಎತ್ತಿ - ಅಲ್ಲಿರುವ ಮೊದಲಿನ ವಾಕ್ಯವನ್ನು ಪೂರ್ಣ ಮಾಡಬೇಕಾಗುತ್ತಿತ್ತು. ಈ ಪರೀಕ್ಷೆಯಲ್ಲಿ ಉತ್ತೀರ್ಣರಾದವರಿಗೆ 'ಘಟಿಕಾ ಸಾಹಸಿ' ಎಂಬ ಪದವಿ ನೀಡಲ್ಪಡುತ್ತಿತ್ತು.

ವಿದ್ಯಾಭ್ಯಾಸ ಮುಗಿಸಿದ ನಂತರ ಅವನು ಸ್ನಾತಕ ವಿದ್ಯಾರ್ಥಿಯಾಗುತ್ತಿದ್ದ, ಕೊನೆಯ ದಿನದಲ್ಲಿ ಸರ್ವಾಲಂಕಾರ ಭೂಷಿತನಾಗಿ ಘಟಿಕೋತ್ಸವ ಸಮಾರಂಭಕ್ಕೆ ಹೋಗುತ್ತಾನೆ. ಅಲ್ಲಿ ಅವನನ್ನು ಜನತೆಗೆ ಪರಿಚಯಿಸಿ ವಿದ್ವಾಂಸನಾದನೆಂದು ಘೋಷಿಸಿ ಪದವಿ ಪತ್ರ ನೀಡುತ್ತಿದ್ದರು. ಮುಂದೆ ಆತನು ಗೃಹಸ್ಥಾಶ್ರಮಿಯಾಗಬಹುದಾಗಿತ್ತು.

### ಪ್ರಾಚೀನ ಕಾಲದ ಪ್ರಮುಖ ವಿದ್ಯಾಕೇಂದ್ರಗಳು

**ಕಾರ್ತಿಕೇಯತಪೋವನ :**

ಕ್ರಿ. ಶ. 964ರಲ್ಲಿ ದಂಡಸಾನಿ ಗದಾಧರ ಎನ್ನುವ ಯತಿಯಿಂದ ಬಳ್ಳಾರಿ ಜಿಲ್ಲೆಯ ಕುಡುತಿನಿ ಗ್ರಾಮದಲ್ಲಿ ಸ್ಥಾಪಿತವಾಯಿತು. ಆ ಊರಿನಲ್ಲಿ ದಂಡಸಾನಿ ಗದಾಧರನು ಎರಡು ದೇವಸ್ಥಾನ ಒಂದು ಸತ್ರ - ಒಂದು ಕೆರೆ - ಒಂದು ಮಠ - ವಿದ್ಯಾದಾನಕ್ಕೆ ಒಂದು ಸತ್ರ ಕಟ್ಟಿಸಿದ - ಅದು ಮುಂದೆ ಉಜ್ವಲವಾದ ಪಟ್ಟಣವಾಗಿ ಬೆಳಗಿತು.

**ಸಾಲೋಜಗಿ :**

ವಿಜಾಪುರ ಜಿಲ್ಲೆಯಲ್ಲಿ 10ನೇ ಶತಮಾನದ ರಾಷ್ಟ್ರಕೂಟ ಚಕ್ರವರ್ತಿ ಕೃಷ್ಣನ ಪ್ರಧಾನ ನಾರಾಯಣನಿಂದ 60 ಎಕರೆ ಸ್ಥಳದಲ್ಲಿ ಇಪ್ಪತ್ತೇಳು ವಸತಿಗೃಹ ವಿಶಾಲವಾದ ಸಂಸ್ಕೃತ ಶಾಲೆ ಕಟ್ಟಲ್ಪಟ್ಟು 'ಪಾವಿಟ್ಟಿಗೆ' ಎಂಬ ಹೆಸರಿನಿಂದ ಪ್ರಸಿದ್ಧವಾಯಿತು. ಊರಿನ ಜನರು ತಮ್ಮ ಮನೆಯಲ್ಲಿ ಮದುವೆ ಮುಂಜಿ ಇತ್ಯಾದಿಯಾದಾಗ ದೇಣಿಗೆ ರೂಪದಲ್ಲಿ ಶಾಲೆಗೆ ಕಾಣಿಕೆ ನೀಡುವುದಲ್ಲದೆ ಸಮಾರಂಭಕ್ಕೆ ಅಧ್ಯಾಪಕರನ್ನು ಆಮಂತ್ರಿಸಿ ಗೌರವಿಸುತ್ತಿದ್ದರು.

**ಸ್ಥಾನ ಕುಂದೂರ :**

ಶಿವಮೊಗ್ಗ ಜಿಲ್ಲೆಯ ತಾಳಗುಂದ ಅಗ್ರಹಾರದಲ್ಲಿ ಪ್ರಣವೇಶ್ವರ ದೇವಾಲಯದ ಪಕ್ಕದಲ್ಲಿ ನಿರ್ಮಿಸಲಾಗಿತ್ತು. ಆರು ಜನ ಪಂಡಿತರು ಕನ್ನಡ ಮತ್ತು ಸಂಸ್ಕೃತದಲ್ಲಿ ಬೋಧತತ್ವ ನಿರ್ವಹಿಸುತ್ತಿದ್ದರು.

**ಕೋಡಿಯ ಮಠ :**

ಬಳ್ಳಿಗಾವೆಯಲ್ಲಿ ಸ್ಥಾಪಿಸಲಾದ ಕೋಡಿಮಠ. 11 ನೇ ಶತಮಾನದಲ್ಲಿ ಪ್ರವರ್ಧಮಾನಕ್ಕೆ ಬಂತು. ಕೇದಾರೇಶ್ವರನಿಂದ ಆರಂಭಿಸಲ್ಪಟ್ಟು ಇದು ಅವನ ಶಿಷ್ಯ

ಸೋಮೇಶ್ವರನಿಂದ ಶಿಷ್ಯ ಪರಂಪರೆ ದೊಡ್ಡದಾಗಿ ಬೆಳೆಯಿತು. ಈ ಕೋಡಿಯ ಮಠದಲ್ಲಿ ವ್ಯಾಸಂಗಕ್ಕೆ ಎಲ್ಲಾ ಶಾಸ್ತ್ರಗಳೂ, ಕನ್ನಡ - ಸಂಸ್ಕೃತ ಇತ್ಯಾದಿ ಷಡ್ದರ್ಶನ, ಹದಿನೆಂಟು ಪುರಾಣಗಳು, ಧರ್ಮಶಾಸ್ತ್ರ, ಕಾವ್ಯ, ನಾಟಕಗಳಿಗೆ ಸರ್ವೋನ್ನತಕೇಂದ್ರವಾಗಿತ್ತು. ಈ ಎಲ್ಲಾ ಕಾರಣಗಳಿಂದಾಗಿ ಕೋಡಿಯ ಮಠವು ದಕ್ಷಿಣದ ಕೇದಾರವೆಂದು ಪ್ರಸಿದ್ಧವಾಗಿರುವುದು ಶಾಸನಗಳಲ್ಲಿ ಉಲ್ಲೇಖಿಸಲ್ಪಟ್ಟಿದೆ.

**ಬನವಾಸಿಯ ಬ್ರಹ್ಮಪುರಿ :**

ಇಲ್ಲಿನ ಪ್ರಾಂತಾಧಿಕಾರಿಯಾಗಿದ್ದ ಕೇಶವ ದೇವನಿಂದ ಸ್ಥಾಪಿಸಲ್ಪಟ್ಟು ಈ ವಿದ್ಯಾಕೇಂದ್ರ 38 ಬ್ರಾಹ್ಮಣ ಪಂಡಿತರಿಂದ ಕಂಗೊಳಿಸುತ್ತಿತ್ತು. ಆತನಿಂದ ನಿರ್ಮಾಣವಾದ ಕೇಶವ ದೇವಾಲಯ ಇತ್ಯಾದಿಯಿಂದಾಗಿ ಇದು ವೀರಕೇಶವಪುರವೆಂಬ ಅಭಿದಾನದಿಂದ ಪ್ರಸಿದ್ಧಪಟ್ಟಣವಾಯಿತು.

ನಾಗಾಯಿ (ನಾಗಾವಿ) ಗುಲ್ಬರ್ಗ ಜಿಲ್ಲೆಯ ಈ ಪ್ರಸಿದ್ಧ ಘಟಿಕಾಸ್ಥಾನ ಇಲ್ಲಿನ ರಾಮೇಶ್ವರ ದೇವಾಲಯದ ಪಕ್ಕದಲ್ಲಿತ್ತು. ಪ್ರಾಥಮಿಕ ವಿದ್ಯಾಭ್ಯಾಸದಿಂದ ಉಚ್ಚ ಶಿಕ್ಷಣದವರೆಗೆ ಇಲ್ಲಿ ವ್ಯವಸ್ಥೆಯಿತ್ತು. ಇಲ್ಲಿ ನಿರಂತರವಾಗಿ ತಪಸ್ವಿಗಳೂ ಯತಿಗಳೂ ಆಗಮಿಸಿ ವಿಶೇಷ ಅಭ್ಯಾಸಗಳಲ್ಲಿ ತೊಡಗುತ್ತಿದ್ದರು. ಭವ್ಯ ಸಭಾಂಗಣ ಮೂರಂತಸ್ತಿನ ದ್ವಾರ, ಗೋಪುರ, ಮುಖಮಂಟಪಗಳಿಂದ ಕಂಗೊಳಿಸುವ ಈ ವಿದ್ಯಾಕೇಂದ್ರ ಈ ಭಾಗದ ಅತ್ಯುಚ್ಚ ವಿದ್ಯಾಕೇಂದ್ರವಾಗಿತ್ತು.

**ಉಪಸಂಹಾರ**

ಎರಡು ಸಾವಿರ ವರ್ಷಗಳಲ್ಲಿ ವಿವಿಧ ರಾಜ ಪರಂಪರೆಯಿಂದ ಪೋಷಿಸಲ್ಪಟ್ಟ ಕನ್ನಡದ ವಿದ್ಯಾಕೇಂದ್ರಗಳು ಸಂಸ್ಕೃತವನ್ನು ಉಚ್ಚ ಶಿಕ್ಷಣಕ್ಕೆ ಬಳಸಿಕೊಂಡು ವಿದ್ಯಾದೇಗುಲಗಳ ಪರಂಪರೆಯನ್ನು ಸೃಷ್ಟಿಸಿದ ದಾಖಲೆಗಳು ಅಲ್ಲಲ್ಲಿ ದೊರಕಿದ ಶಾಸನಗಳಿಂದ ವೇದ್ಯವಾಗುತ್ತದೆ. ಪಂಡಿತರು, ವೇದ ವಿದ್ವಾಂಸರಲ್ಲಿ ಹೆಚ್ಚಿನವರು, ಸಚ್ಚಾರಿತ್ರ್ಯವುಳ್ಳ ಬ್ರಾಹ್ಮಣರಾಗಿದ್ದು, ಅವರು ನಿರ್ವಂಚನೆಯಿಂದ ಶಿಷ್ಯರಿಗೆ ವಿದ್ಯೆಯನ್ನು ನೀಡುತ್ತಿದ್ದರು. ಅಂದಿನ ಪ್ರಜೆಗಳಲ್ಲಿ ರಾಜರ ಮೇಲೆ ವಿಶೇಷವಾದ ಅಭಿಮಾನವಿರುತ್ತಿತ್ತು. ರಾಜನಿಗೆ ಪ್ರಜೆಗಳೆಂದರೆ ತನ್ನ ಮಕ್ಕಳ ಸಮಾನ ನೋಡಿಕೊಳ್ಳುವ ಹೃದಯ ವೈಶಾಲ್ಯವಿತ್ತು. ಸರ್ವಪ್ರಜೆಗಳೂ ತಮಗೆ ಸಿಕ್ಕಿದರಲ್ಲಿಯೇ ಸಂತುಷ್ಟರಾಗಿ ಉತ್ತಮ ಮಟ್ಟದ ಜೀವನವನ್ನು ತಮ್ಮದಾಗಿಸಿಕೊಂಡಿದ್ದರು. ವಿದ್ಯೆಯನ್ನು ಹೊಂದಿದವನಿಗೆ ಸಮಾಜದಲ್ಲಿ ಅತ್ಯುನ್ನತ ಸ್ಥಾನವಿತ್ತು.

**ಚಾತುರ್ವರ್ಣವು ಚಾಲನೆಯಲ್ಲಿದ್ದು ಕೆಳವರ್ಣದವರು ಮೇಲ್ವರ್ಗವನ್ನು ದ್ವೇಷಿಸುತ್ತಿರಲಿಲ್ಲ. ತಮ್ಮ ತಮ್ಮ ಧರ್ಮ - ನಡೆಯಂತೆ ಕೂಡಿ ಬಾಳುತ್ತಿದ್ದರು. ಇಂದಿನ ಮೋಸ - ದಗಾ - ದುಷ್ಕರ್ಮಗಳ ಪ್ರಪಂಚಕ್ಕಿಂತ ಭಿನ್ನವಾಗಿದ್ದ ಕಾಲವಾಗಿ ಪ್ರಜೆಗಳು ಸಂತುಷ್ಟರಾಗಿ ಜೀವನವನ್ನು ನಿಭಾಯಿಸುತ್ತಿದ್ದರು.**

# ಎತ್ತು ಗೀತೆ ಕೇಳಿದಾಗ

**ಕೆ. ಹಯವದನ ಪುರಾಣಿಕರು**

ಶ್ರೀಹರಿ ಕ್ಷೀರಸಾಗರದಲ್ಲಿ ಮಹಾಲಕ್ಷ್ಮಿಗೆ ಹೇಳಿದ -

ಒಬ್ಬ ಬ್ರಾಹ್ಮಣ. ಹೆಸರು ಸುಶರ್ಮ. ಪಾಪ ಮಾಡುವುದರಲ್ಲಿ ನಿಸ್ಸೀಮ.

ಪಾಪದ ಕೊಡ ತುಂಬಿತು. ಕಾಳಸರ್ಪ ಕಚ್ಚಿತು. ಎತ್ತಾಗಿ ಹುಟ್ಟಿದ, ಗಾಣವೆಳೆದ.

ಎಳೆದೆಳೆದು ಬಸವಳಿದು ಬಿದ್ದ. ಬಿದ್ದವ ಏಳಲೂ ಇಲ್ಲ. ಸಾಯಲೂ ಇಲ್ಲ. ಸಾವಿಲ್ಲದೆ ಬದುಕು ಇಲ್ಲದೆ ತ್ರಿಶಂಕು ಸ್ಥಿತಿ ಕಂಡ.

ಕಂಡವರಿಗೆಲ್ಲ ಕನಿಕರ. ಎಲ್ಲ ತಮ್ಮ ತಮ್ಮ ಪುಣ್ಯ ಧಾರೆ ಎರೆದರು. ಓರ್ವ ಸೂಳೆಯೂ ಹಾಗೆ ಮಾಡಿದಳು. ಎತ್ತು ಹಾಯಾಗಿ ಕಣ್ಮುಚ್ಚಿತು. ಅಸುನೀಗಿತು.

ಯಮಲೋಕದಲ್ಲಿ ವಿಚಾರಿಸಿದಾಗ ತಿಳಿಯಿತು. ಸೂಳೆ ನೀಡಿದ ಪುಣ್ಯದಿಂದಲೆ ಎತ್ತಿಗೆ ಸುಖ ಮರಣವಾಗಿತ್ತು!

ಸತ್ತ ಎತ್ತು ಒಳ್ಳೆ ಬ್ರಾಹ್ಮಣನಾಗಿ ಹುಟ್ಟಿತು. ಈ ಬ್ರಾಹ್ಮಣನಿಗೆ ಪೂರ್ವ ಜನ್ಮ ಸ್ಮರಣೆ. ಸೂಳೆ ಅದೇನು ಪುಣ್ಯ ಮಾಡಿದ್ದಳು ಎನ್ನುವ ಕುತೂಹಲ. ಹೋಗಿ ಕೇಳಿದ. ಆಕೆ ಅಂದಳು. 'ಒಂದು ಪಂಜರದ ಗಿಣಿ ಮುದ್ದಾಗಿ ಗೀತೆಯ ಪ್ರಥಮಾಧ್ಯಾಯ ಹೇಳಿತು. ನಾನು ಆಲಿಸಿದೆನಷ್ಟೆ!' 'ಅರೆ, ಈ ಗಿಳಿಗೆ ಎಲ್ಲಿಂದ ಗೀತೆಯ ಭಾಗ್ಯ?' ಇಬ್ಬರೂ ಕೇಳಿದರು.

ಗಿಳಿ ಹೇಳಿತು - 'ನಾನೊಬ್ಬ ದೊಡ್ಡ ಪಂಡಿತನಾಗಿದ್ದೆ. ಜ್ಞಾನಿಗಳಲ್ಲಿ ಮತ್ಸರಿಸುತ್ತಿದ್ದೆ. ಸತ್ತು ಈಗ ಗಿಳಿಯಾಗಿದ್ದೇನೆ. ಎಳೆ ಮರಿಯಾಗಿದ್ದಾಗಲೆ ತಂದೆ ತಾಯಿಗಳನ್ನು ಕಳಕೊಂಡೆ. ತಬ್ಬಲಿಯಾದೆ. ಬೇಸಗೆಯ ಬಿಸಿಲಲ್ಲಿ ಬೆಂದು ನೆಲದ ಮೇಲೊರಗಿದೆ. ಋಷಿ ಕುಮಾರನೊಬ್ಬ ಎತ್ತಿ ಪಂಜರದಲ್ಲಿಟ್ಟ. ಮುದ್ದು ಮಾಡಿದ. ಅವನ ಬಾಯಿಯಿಂದ ಗೀತಾ ಪ್ರಥಮಾಧ್ಯಾಯ ಕೇಳಿ ಕಲಿತೆ. ಒಬ್ಬ ಬೇಡನ ಬಲೆಯಲ್ಲಿ ಸಿಕ್ಕಿದೆ. ಈ ಸೂಳೆಯ ಮನೆ ಸೇರಿದೆ. ಇಲ್ಲಿಯೂ ಗೀತೆಯನ್ನು ಪಠಿಸಿದೆ.

*** *** ***

ಇದು ಪದ್ಮ ಪುರಾಣದ ಉತ್ತರ ಖಂಡದಲ್ಲಿ ಶಿವನಾಡಿದ ಮಾತು. ಕೇಳಿ ಆನಂದಿಸಿದವಳು ದೇವಿ ಪಾರ್ವತಿ.

ನಮಗೇನೂ ಇದರಲ್ಲಿ ಆನಂದ ಕಾಣುತ್ತಿಲ್ಲವಲ್ಲ! ಇದೇ ಏನು ಗೀತೆಯ ಮಹತ್ವ? ಇದೇ ಏನು ಗೀತೆಯನ್ನು ನೋಡುವ ದೃಷ್ಟಿ? ಕಾಗಕ್ಕ ಗುಬ್ಬಕ್ಕರ ಕಥೆ ಕೇಳಿ ಪುರಾಣ ಗೀತೆಯನ್ನು ಹೀಗೂ ಅವಮಾನಿಸಬಹುದೆ? ಅಥವಾ ಹುಟ್ಟು ಕುರುಡ ಆನೆಯ ಕಾಲು ಮುಟ್ಟಿ 'ಆನೆ' ಎಂದರೆ ಕಂಬವೆಂದನಂತೆ! ಪುರಾಣಕಾರರೂ ಹೀಗೇ ಕುರುಡಾಗಿರಬಹುದೆ?

ವಸ್ತುತಃ ಸ್ವಲ್ಪ ಕಣ್ಣು ಬಿಟ್ಟು ನೋಡಿದರೆ ಸಮಸ್ಯೆ ಇಲ್ಲ.

ಗಾಣದೆತ್ತು ಬಸವಳಿದು ಬಿದ್ದು ಸಾಯಲಾರದ ಬದುಕಲಾರದ ಸಂದಿಗ್ಧ ಸ್ಥಿತಿಯಲ್ಲಿದೆ. ಅರ್ಜುನನೂ ಪ್ರಥಮಾಧ್ಯಾಯದಲ್ಲಿ ಬಂಧು ಮೋಹಕ್ಕೊಳಗಾಗಿ ಥರಥರನೆ ನಡುಗಿದ್ದಾನೆ. ಬಿಲ್ಲೆತ್ತಿ ನಿಂತಿರಲಾರ. ಹಾಯಾಗಿಯೂ ಕುಳಿತಿರಲಾರ. ಕೃಷ್ಣ 'ಅರ್ಜುನ ಸೈರಿಸಿಕೊ' ಎಂದು ಗೀತೋಪದೇಶ ಮಾಡಿದ. ಸೂತನಾದ ಕೃಷ್ಣನ ಬಾಯಿಯಿಂದ ಅರ್ಜುನನಿಗೆ ಗೀತೆಯ ಉಪದೇಶ. ಸೂಳೆಯ ಬಾಯಿಯಿಂದ ಬಸವನಿಗೆ ಆಧ್ಯಾತ್ಮಾರ್ಥಗರ್ಭಿತನಾದ ಗೀತಾ ಪ್ರಥಮಾಧ್ಯಾಯೋಪದೇಶ. ಸೂತನಾದರೇನು, ಸೂಳೆಯಾದರೇನು, ತತ್ವಜ್ಞಾನದ ಖನಿ ಗೀತೆ.

ಎತ್ತು ಮರಣ ಸಂಕಟದಲ್ಲಿ ಆರ್ತನಾಗಿ ಗೀತೆಯನ್ನಾಲಿಸಿತು. ಅರ್ಜುನನೂ ಆರ್ತನಾಗಿ ಗೀತೆಯನ್ನಾಲಿಸಿದ.

ಸೂಳೆ ಗಿಣಿಯ ಮುದ್ದು ಮಾತಿನಲ್ಲಿ ಜಿಜ್ಞಾಸುವಾಗಿ ಗೀತೆಯನ್ನು ಕಲಿತಳು. ಧೃತರಾಷ್ಟ್ರ ಜಿಜ್ಞಾಸುವಾಗಿ ಸಂಜಯನ ಮಾತಿನಲ್ಲಿ ಗೀತೆ ಕೇಳಿದ.

ಗಿಳಿ ಅರ್ಥಾರ್ಥಿ. ಋಷಿಕುಮಾರರು ಹಾಲು ಹಣ್ಣು ನೀಡುವರೆಂದು ಅವರನ್ನು ಮೆಚ್ಚಿಸಲು ಗೀತೆಯನ್ನು ಕಲಿತಿತ್ತು. ಸಂಜಯನೂ ಧೃತರಾಷ್ಟ್ರ ವೇದವ್ಯಾಸರ ಆಣತಿಯಂತೆ ಅವರ ಸಂತೋಷ ಬಯಸಿ ರಣರಂಗದ ಗೀತಾಧ್ವನಿಯನ್ನು ಅರಮನೆಯಲ್ಲಿ ಕುಳಿತು ಆಲಿಸಿದ.

ಆದರೆ ಗೀತೆಯ ಧ್ವನಿಯಿಂದಲೇ ಎತ್ತಿಗೆ ಮೋಕ್ಷವಾಯಿತೆಂದರೆ ಸರಿಯೆ? ತತ್ವಜ್ಞಾನದ ಸೆಲೆ ಎನಿಸಿದ ಗೀತೆಗೆ ಇದೊಂದು ರೀತಿಯಿಂದ ಅವಮಾನವಲ್ಲವೆ? ಕನಕನಿಗೆ ವ್ಯಾಸರಾಜರು 'ಕೋಣ' ಎಂದಿದ್ದಕ್ಕೆ ಯಮನ ಕೋಣವೇ ಬಂದಿತಂತೆ! ಬೇಡ ವಾಲ್ಮೀಕಿ 'ಮರಾ ಮರಾ' ಎನ್ನುತ್ತಿದ್ದಂತೆ 'ರಾಮ ರಾಮ' ಎಂದಂತಾಗಿ ರಾಮಾಯಣ ಕಾವ್ಯ ಹುಟ್ಟಿತಂತೆ! ಇಂಥ ಕಥೆಗಳ ಬಗ್ಗೆಯೇ ಹೇಳುವುದು, ಕಥೆಗೆ ಕಾಲಿಲ್ಲವೆಂದು!

ವಸ್ತುತಃ ಈ ಆಕ್ಷೇಪವೂ ಹುರುಳಿಲ್ಲದ್ದು. 'ಕೋಣ'ವೆಂದೊಡನೆ ಯಮನ ಕೋಣವನ್ನೇ ನೆನೆದು ಯಮಾಂಶನಾದ ಕನಕ ಕರೆದ. ಆಗ ಯಮನ ಕೋಣವೆ ಓಡಿ ಬಂದಿತ್ತು. 'ಮರ ಮರ' ಎಂದರೂ ಸಂಸ್ಕೃತದಲ್ಲಿ 'ಕೊಲ್ಲು ಕೊಲ್ಲು' ಎಂದರ್ಥ. ರಾವಣನಂಥ ಕೋಟಿ ರಾಕ್ಷಸರನ್ನು ಕೊಲ್ಲುವ ರಾಮನ ಬಗ್ಗೆಯೆ ಸಪ್ತರ್ಷಿಗಳು ಬೇಡನಿಗೆ ಹೀಗೆ ಉಪದೇಶಿಸಿದ್ದರು.

ಅಥವಾ 'ಆಮರ ಈಮರ ಧ್ಯಾನಿಸುತ್ತಿರುವಾಗ' ಎಂದು ಪುರಂದರದಾಸರೆನ್ನುವಂತೆ ಅಶೋಕವನದ 'ಆ ಮರ' 'ವೈದೇಹೀ ಸಹಿತಂ ಸುರದ್ರುಮತಲೇ' ಎನ್ನುವ 'ಈ ಮರ'ಗಳ ಬಗ್ಗೇ ಉಪದೇಶಿಸಿದ್ದರು. ಅದನ್ನು ಧ್ಯಾನಿಸಿಯೆ ವಾಲ್ಮೀಕಿ ಮುನಿ ರಾಮಾಯಣ ಬರೆದ. ಇವೆಲ್ಲ ಅಜ್ಞಾನದ ಕಲ್ಪನೆಗಳಲ್ಲ. ಪ್ರಕೃತ ಗಿಳಿಯೂ ಕೇವಲ 'ಗಿಳಿ ಪಾಠ' ಮಾಡಲಿಲ್ಲ. ಬ್ರಾಹ್ಮಣ ಮತ್ತು ಸೂಳೆಯರ ಮುಂದೆ ತನ್ನ ಪೂರ್ವಜನ್ಮಗಳ ಇತಿಹಾಸವನ್ನೆ ಹೇಳುವ ಗಿಳಿ ಹಿಂದೆ ಬ್ರಾಹ್ಮಣನಾಗಿ ಸಂಪಾದಿಸಿದ ಪಾಂಡಿತ್ಯವನ್ನು ಮರೆತಿಲ್ಲ. ಅರ್ಥ ಸಹಿತವಾಗೇ ಗೀತಾ ಪಾಠ ಕಲಿತಿತ್ತು. ಅರ್ಥ ಸಹಿತವಾಗಿಯೇ ಸೂಳೆಗೆ ಉಪದೇಶಿಸಿತ್ತು. ಸೂಳೆಯೂ ಪೂರ್ವಜನ್ಮ ಸ್ಮರಣೆಯಿಂದ ಅರ್ಥ ಸಹಿತವಾಗೇ ಕಲಿತಿದ್ದಳು. ಎತ್ತೂ ಹಾಗೆಯೆ.

ಇದೆಲ್ಲ ಬರಿ ಕಲ್ಪನೆ ಎನ್ನುವುದಾದರೆ 'ಯಾವುದೋ ಒಂದು ಗಿಳಿ ಗೀತಾ ಪಾಠ ಹೇಳಿತು. ಯಾವುದೋ ಒಂದು ಎತ್ತು ಕೇಳಿ ಮುಕ್ತಿ ಹೊಂದಿತು'ಎಂದು ಕತೆ ಹೇಳಿ ಮುಗಿಸಬಹುದಾಗಿತ್ತು. ಪೂರ್ವ ಜನ್ಮಗಳ ಇತಿಹಾಸ ಬೇಕಾಗಿರಲಿಲ್ಲ.

ಪುರಾಣ ಕೊನೆಯಲ್ಲಿ, ಬ್ರಾಹ್ಮಣನಾಗಿ ಹುಟ್ಟಿದ ಎತ್ತೂ ಸೂಳೆಯೂ ಗಿಳಿಯೂ ಧೀರರಾಗಿ ಗೀತಾ ಪ್ರಥಮಾಧ್ಯಾಯದ ಮಹಾತ್ಮೆಯ ಬಗ್ಗೆ ಹೀಗೆ ಮಾತನಾಡಿಕೊಂಡು, ಅದನ್ನು ಜಪಿಸಿ ಮುಕ್ತಿ ಹೊಂದಿದರೆನ್ನುತ್ತ ಮುಕ್ತಾಯ ಮಾಡಿದೆ -

## ಅಮೃತ ನುಡಿಗಳು

**ಅರಳು ಮಲ್ಲಿಗೆ ಪಾರ್ಥಸಾರಥಿ**

★ ಪುಣ್ಯ ಪಾಪಗಳು ಕಾಣದ ವಸ್ತುಗಳಲ್ಲ. ನಾವು ಮಾಡಿಕೊಳ್ಳುವ ಕೋಪವೇ ಪಾಪ. ನಮ್ಮ ಪ್ರಸನ್ನ ಮುಖ, ಪ್ರಶಾಂತ ಮನಸ್ಸು, ಸಮಾಧಾನದ ಮಾತುಗಳೇ ಪುಣ್ಯ.

★ ಮನ ಎನ್ನುವುದು ವನ ಇದ್ದಾಂಗೆ. ಅಲ್ಲಿ ತುಳಸಿಯೂ ಇರಬಹುದು, ಬೇಲಿಯೂ ಇರಬಹುದು.

★ ಈ ದೇಹದ ಮೇಲೆ ಏಕಿಷ್ಟು ಮಮಕಾರ. ಈ ದೇಹವನ್ನು, ಅದರ ಸೌಂದರ್ಯವನ್ನು ನೋಡಿ ಬೆರಗಾಗಿ, ಮರುಳಾಗಿ ಹಿರಿಹಿರಿ ಹಿಗ್ಗುವ ಜನರೇ, ಯಾಕೆ ಬೀಗುತ್ತೀರಿ, ಯಾಕೆ ಹಿಗ್ಗುತ್ತಿದ್ದೀರಿ. ಇದು ಹಿಗ್ಗುವ, ಬಗ್ಗುವ, ತಗ್ಗುವ, ನೆಗ್ಗುವ, ಕುಗ್ಗುವ, ಮುಗ್ಗುವ, ಕಡೆಗೆ ಅಗ್ನಿಯೊಳಗೆ ಬಿದ್ದು ಧಗ್ದವಾಗುವ ದೇಹ.

★ ಸೌಂದರ್ಯ, ರೂಪ, ಕುಲ, ಸಂಪತ್ತು ಎಲ್ಲವೂ ವಿದ್ಯೆಯಿದ್ದಾಗಲೇ ಶೋಭಿಸುವುದು. ವಿದ್ಯೆ ವಿನಯದಿಂದ ಶೋಭಿಸುವುದು.



**ಏವಮನ್ಯೋನ್ಯಮಾಭಾಷ್ಯ ತನ್ಮಾಹಾತ್ಮ್ಯಂ ಪ್ರಶಸ್ಯ ಚ ।**
**ತೇ ಜಪಂತೋಽನಿಶಂ ಧೀರಾಃ ಮುಕ್ತಿಮಾಹೋ ಪ್ರಪೇದಿರೇ ॥**

ಇಲ್ಲಿ 'ಜಪಂತಃ' 'ಧೀರಾಃ' ಎಂಬ ಎರಡು ಶಬ್ದಗಳು ಗಮನಾರ್ಹ. ಜಪವೆಂದರೆ ಅರ್ಥಧ್ಯಾನಪೂರ್ವಕವಾಗಿಯೆ ಇರುತ್ತದೆ. ಬರೀ ಶಬ್ದೋಚ್ಚಾರಣೆಯಲ್ಲ. 'ಧೀರ'ರೆಂದರೂ ಧೈರ್ಯವುಳ್ಳವರೆಂದಲ್ಲ. 'ಧಿಯಾ ರಮಂತೇ' ಗೀತಾರ್ಥ ತತ್ವಜ್ಞಾನದಲ್ಲಿ ಆಸಕ್ತರಾದವರೆಂದರ್ಥ.

ಆದ್ದರಿಂದ ಗೀತಾ ಪ್ರಥಮಾಧ್ಯಾಯದಲ್ಲಿ ಗರ್ಭಿತವಾದ ಅಧ್ಯಾತ್ಮಾದಿ ಬಹು ರಹಸ್ಯಾರ್ಥಗಳನ್ನು ತಿಳಿದೇ ಮುಕ್ತರಾದವರ ಬಗ್ಗೆ ಪದ್ಮಪುರಾಣ ಈ ಕಥೆ ಹೇಳಿದೆ ಎನ್ನುವುದು ಸೂಕ್ತ.

ಮರಣಕಾಲದಲ್ಲಿ ಗೀತಾ ಪಠನ ಮಾಡುವ ಸಂಪ್ರದಾಯಕ್ಕೆ ಈ ಕಥೆಯೇ ಮೂಲವಾಗಿದೆ ಎನ್ನಬಹುದು.

ಪುರಾಣೋಕ್ತಫಲ ಪೂರ್ಣ ದೊರೆಯಬೇಕಾದರೆ ಪುರಾಣವೇ ಹೇಳುವಂತೆ 'ಧೀರ'ರೇ ಆಗಿರಬೇಕಾಗುತ್ತದೆ ಗಾಣದ ಎತ್ತಿನಂತೆ ಬರೀ ದೈಹಿಕ ಶ್ರಮ ಮಾಡಿದರೆ ಏನೂ ಸಾಧನೆಯಾಗದು ಎನ್ನುವುದನ್ನು ಮರೆಯಲಾಗದು. ★


॥ ಶ್ರೀ ವಾದಿರಾಜ ಗುರುಭ್ಯೋನಮಃ ॥

**ಕೇಂದ್ರ ಹಾಗೂ ರಾಜ್ಯ ಸರ್ಕಾರಿ ನೌಕರರುಗಳಿಗೆ ಗುಜರಾತ್ ಟೂರಿಸಂ LTCನಿಂದ ಸೌಲಭ್ಯವಿರುತ್ತದೆ.**

**ಉತ್ತರ ಭಾರತ ಪ್ರವಾಸ**

**3-9-04, 29-9-04, 13-10-04, 27-10-04, 25 ದಿನಗಳು ಸುಖೀ ಬಸ್ಸಿನಲ್ಲಿ ಹೈದರಾಬಾದ್ ಪ್ರಯಾಗ, ಕಾಶಿ, ಗಯಾ, ನೈಮಿಷಾರಣ್ಯ, ಅಯೋಧ್ಯ, ಹರಿದ್ವಾರ, ಹೃಷಿಕೇಶ, ಶ್ರೀ ಬದರೀನಾಥ, ಕುರುಕ್ಷೇತ್ರ, ದೆಹಲಿ, ಮಥುರಾ, ಆಗ್ರಾ, ಜೈಪುರ, ಪುಷ್ಕರ, ಮಾತೃಗಯಾ, ಮೋಳಿ ನಾರಾಯಣ, ದ್ವಾರಕಾ, ಬೇಟ್ ದ್ವಾರಕ, ಪ್ರಭಾಸ್ ಕ್ಷೇತ್ರ, ಸೋಮನಾಥ್, ನಾಸಿಕ್, ಪಂಡರಾಪುರ ಇತ್ಯಾದಿ.**

ಪ್ರವಾಸದಲ್ಲಿ ಶುದ್ಧ ಮಡಿ ಅಡಿಗೆ, ತೀರ್ಥಪ್ರಸಾದದ ಏರ್ಪಾಡು ಇರುತ್ತದೆ.

**25-8-04, 3-9-04, 29-9-04, 2-10-04, 13-10-04ರಿಂದ ರೈಲು / ಬಸ್ಸಿನಲ್ಲಿ 16 / 22 / 26 ದಿನಗಳ ಬದರೀನಾಥ್, ಕೇದಾರ್ ನಾಥ್, ಕಾಶಿ, ಗಯಾ, ನೇಪಾಳ, ಜೈಪುರ, ಪುಷ್ಕರ, ಡೆಲ್ಲಿ ಇತ್ಯಾದಿ.**

**ಶ್ರೀ ಸುಧಾ ಟ್ರಾವಲ್ಸ್**

ನಂ. 1. ವ್ಯಾಸರಾಜಮಠದ ಬಿಲ್ಡಿಂಗ್ಸ್, ಗಾಂಧಿ ಬಜಾರ್, ಬೆಂಗಳೂರು – 560 004
ದೂರವಾಣಿ : 080 - 26528867 / 26529289 ಮೊಬೈಲ್ : 9448119290



# ಕೋಮುಶಾಂತಿ

ಗ್ರಹರು ಪಲ್ಲಟರಾದಾಗ ಬಾಧೆ ಪರಿಹಾರಕ್ಕಾಗಿ ಹೋಮ ಶಾಂತಿಗಳು ಮಾಡಲ್ಪಡುತ್ತವೆ. ಅಂತೆಯೇ ಅಧಿಕಾರಗ್ರಹಗಳು ತಲ್ಲಣಗೊಂಡಾಗ ವಿಚಲಿತಗಳಾದಾಗ ಕೋಮುಬಾಧೆ, ಜಾತಿಬಾಧೆಗಳು ಉದ್ರಿಕ್ತಗೊಳ್ಳಲ್ಪಟ್ಟವುಗಳಾಗುವುದ ರಿಂದ ಕನಿಷ್ಠಪಕ್ಷ ಚುನಾವಣೆಕ್ಕಿಂತ ಆರು ತಿಂಗಳು ಮೊದಲಾದರೂ ಜಾತಿಶಾಂತಿಗಳು ಕೋಮುಶಾಂತಿಗಳು ಮಾಡಲ್ಪಡುವುದು ಉತ್ತಮ. ಅತ್ಯುತ್ತಮ.

ವಸ್ತುತಃ ರಾಜಕೀಯದಲ್ಲಿ ಅಲೆಗಳು ಎಬ್ಬಿಸಲ್ಪಡುವಾಗ ಕೋಮು ಗಳು, ಜಾತಿಗಳು ಉದ್ರಿಕ್ತಗೊಳ್ಳದಿರಲಿಕ್ಕಾಗದಿರುವುದೇ ಮತ್ತು ಅದು ರಾಜಕೀಯಕ್ಕೆ ಚೆನ್ನಾಗಿ ತಿಳಿದಿರುವುದೇ ಕೋಮುಬಾಧೆ, ಜಾತಿಬಾಧೆ, ಈತಿಬಾಧೆಗಳು ನಿರಂತರವಾಗಲು ಮರುಕಳಿಸುತ್ತಿರಲು ಮುಖ್ಯಕಾರಣ.

ಅಷ್ಟಲ್ಲದೆ ಇತ್ತೀಚೆಗೆ ಚುನಾವಣಾಗ್ರಹಣಗಳು ಪದೇ ಪದೇ ಕಾಣಿಸುವುದು ಲೋಕಕ್ಕೂ, ಮುಖ್ಯವಾಗಿ ರಾಜಕಾರಣಿಗಳಿಗೂ ಮಹಾರಿಷ್ಟ ಮಾತ್ರವಲ್ಲದೇ ಅದರಿಂದ ಈ ಕೋಮುಬಾಧೆ, ಜಾತಿಬಾಧೆಗಳು ಮತ್ತಷ್ಟು ಉಲ್ಬಣಗೊಳ್ಳುತ್ತಿರುತ್ತವೆ.

ಆದ್ದರಿಂದ ಇದೀಗ ಪದೇ ಪದೇ ಕಾಣಿಸಿಕೊಳ್ಳುತ್ತಿರುವ ಈ ಕೋಮುಬಾಧೆ, ಜಾತಿಬಾಧೆಗಳು ಕೋಮಾವಸ್ಥೆಗೆ ತಲುಪುವುದಕ್ಕಿಂತ ಮೊದಲೇ ಲೋಕಕಲ್ಯಾಣಾರ್ಥವಾಗಿ ಕೋಮುಶಾಂತಿ ಕಾರ್ಯಕ್ರಮಗಳನ್ನು ಏರ್ಪಡಿಸುವುದು, ನೇರ್ಪುಗೊಳಿಸುವುದು ಭವಿಷ್ಯತ್ತಿನ ದೃಷ್ಟಿಯಿಂದ ಬಲು ಒಳ್ಳೆಯದು.

ಯಾಕೆಂದರೆ ಎಂತವರಿಗೂ ಹೊಗಳಲ್ಪಡುವಾಗ ಉಬ್ಬಲ್ಪಡದಿರಲು ಅಸಾಧ್ಯವಾಗುವಂತೆ ಅಷ್ಟೇ ಅಸಾಧ್ಯ ಈ ಕೋಮುಜಾತಿಗಳನ್ನು ಕೆರಳಿಸು ವಾಗ, ಕೆರೆಯುವಾಗ, ಕೆದಕುವಾಗ ಕೆರಳಲ್ಪಡದಿರುವುದು. ಉದ್ರೇಕಿಸಲ್ಪ ಡದಿರುವುದು. ತತ್ರಾಪಿ ತತ್ತಜ್ಜಾತಿ ಯ ತತ್ತತ್ಕೋಮಿನ ಜನಸಾಮಾನ್ಯರಿ ಗಂತೂ, ಇದನ್ನು ಮೀರಿನಿಲ್ಲಬೇಕಾದರೆ, ಲಾಗಾಯ್ತಿನಿಂದ ಮಾನಸಿಕ ಟ್ರೈನಿಂಗ್‌ಬೇಕು.



ಮಹಾಸಾಧನೆಯೇ ಬೇಕು.

ಲಾಗಾಯ್ತಿನಿಂದ ಸ್ಥಾಪಿತವಾಗಿದ್ದ ಎಂತಹ ಕೋಮು ಸೌಹಾರ್ದವನ್ನೂ ಕೂಡ ಒಂದು ಚಿಕ್ಕ ರಾಜಕೀಯಗಾಳಿ ಧೂಳೀಪಟಗೊಳಿಸಬಲ್ಲುದಾದ್ದರಿಂದ ಕೋಮು, ಜಾತಿಸೌಹಾರ್ದದ ಸ್ಥಿರತೆಗೆ ಅತ್ಯಂತ ಪೂರ್ವಭದ್ರತೆ, ಭದ್ರಬುನಾದಿ, ಅಡಿಪಾಯ ಅತ್ಯಗತ್ಯ.

ವಸ್ತುತಃ ಕೋಮುಜಾತಿಗಳು ಪೊಲಿಟಿಕಲ್ ಸಾಯನ್ಸ್‌ನ ಚೊಚ್ಚಲ ಸಂಶೋಧನೆಗಳಾಗಿದ್ದು ಹೆಚ್ಚು ಕಮ್ಮಿ ಅವುಗಳಿಗೆ ಈಗ ಐವತ್ತು ದಾಟುತ್ತಿವೆ. ಅವುಗಳ ವೈಶಿಷ್ಟ್ಯವೇನೆಂದರೆ ದಿನಹೋದಷ್ಟು ಮುದಿತನ ಮುಂದೂಡಲ್ಪಡುವುದು. ಅವುಗಳಿಗೆ ಮೊದಲು ವಾರ್ಧಕ್ಯ. ನಂತರ ಬಾಲ್ಯ. ಕೊನೆಗೆ ಯೌವನ.

ಇಂತಹ ಬಲಿಷ್ಠಗೊಳ್ಳುತ್ತಿರುವ ಕೋಮುಬಾಧೆ, ಜಾತಿಬಾಧೆಗಳ ಪರಿಹಾರಕ್ಕಾಗಿ ಮಾಡುವ ಕೋಮುಶಾಂತಿ ಉತ್ತಮಕಲ್ಪದ್ದಾಗಿರ ಬೇಕು. ಮತ್ತು ಈ ಕೋಮು ಜಾತಿ ಶಾಂತಿಹೋಮಕ್ಕೆ ಸೌಹಾರ್ದ, ಸಹೃದಯತೆಯೇ ಬೀಜಮಂತ್ರವಾಗಿರಬೇಕು. ಮೂಲಮಂತ್ರವಾಗಿರ ಬೇಕು. ಈ ಮಾಲಾಮಂತ್ರವನ್ನು ತತ್ತಜ್ಜಾತಿಜ್ಞಾತಿಗಳು ಹೆಚ್ಚುಬಾರಿ ಜಪಿಸಿದಷ್ಟು ಕೋಮುಬಾಧೆ, ಜಾತಿಬಾಧೆ ಶಮನವಾಗುತ್ತದೆ.

ಸನ್ನಿಧಾನಗಳಲ್ಲಿ ಜಪಿಸಿದರಂತೂ ಶೀಘ್ರಶಮನ. ಆದ್ದರಿಂದ ಪ್ರತಿಯೊಂದು ದೇವಸ್ಥಾನ, ಮಸೀದಿ, ಇಗರ್ಜಿಗಳಲ್ಲೂ ತಮ್ಮ ತಮ್ಮ ವಿಶೇಷಉತ್ಸವಗಳ ಮುಖ್ಯ ಸಂದರ್ಭದಲ್ಲೂ ಪ್ರತಿವರ್ಷ ಈ ಕೋಮಜಾತಿಶಾಂತಿ ಕಾರ್ಯಕ್ರಮಗಳು ಆಯೋಜಿತ ವಾಗಬೇಕು. ಅದರಂತೆ ಸ್ಕೂಲುಕಾಲೇಜುಗಳಲ್ಲೂ ಈ ಸೌಹಾರ್ದಮಂತ್ರದ ನಿರಂತರ ಉಪದೇಶವಾಗುತ್ತಿರಬೇಕು.

ಈ ನಿಟ್ಟಿನಲ್ಲಿ ಇದೀಗ ನೂತನವಾಗಿ ರೂಪುಗೊಳ್ಳುತ್ತಿರುವ ಸರ್ವಧರ್ಮ ಸೌಹಾರ್ದಸಂಸತ್ ಸಂಸ್ಥೆಯು ಪರಿಣಾಮಕಾರಿಯಾದ ಪಾತ್ರವನ್ನು ನಿರ್ವಹಿಸಬೇಕು.

ಕರ್ನಾಟಕ ಜೀವನ ವಿಜ್ಞಾನ ಅಕಾಡಮಿಯ ಧರ್ಮಚಕ್ರವರ್ತಿ ಯುವಾಚಾರ್ಯ
ಮಹಾಪ್ರಜ್ಞರ 85ನೇ ಹುಟ್ಟುಹಬ್ಬದ ಅಂಗವಾಗಿ ಬೆಂಗಳೂರು ಟೌನ್‌ಹಾಲ್‌ನಲ್ಲಿ
ನಡೆಸಿದ ಸರ್ವಧರ್ಮ ಸಮ್ಮೇಳನದಲ್ಲಿ ಪ್ರಸ್ತಾಪಿತವಾದ ನೂತನ ಶಾಂತಿ ಸಂಸ್ಥೆ
ಸರ್ವಧರ್ಮ ಸಂಸತ್ ಪ್ರತಿಷ್ಠಾಪನೆಯ ವಿಷಯದಲ್ಲಿ

**ಶ್ರೀ ಶ್ರೀ ಸುಗುಣೇಂದ್ರತೀರ್ಥ ಶ್ರೀಪಾದರು**

ನೀಡಿದ ಸಂದೇಶದ ಸಾರ.

ಶ್ರೀಮದನುವ್ಯಾಖ್ಯಾನ ಅನುಸಂಧಾನಪೂರ್ವಕ

# ಶ್ರೀ ಸು ಧಾ ಸು ವ ಚ ನ

ಶ್ರೀ ಶ್ರೀ ಸುಗುಣೇಂದ್ರತೀರ್ಥ ಶ್ರೀಪಾದರು

ಲೇಖಾಂಕ -28 ಮೊಕ್ಕಾಂ: ಬೆಂಗಳೂರು

ಇನ್ನು ವೈಶಿಷ್ಟ್ಯೋಪಪಾದಕಗಳಲ್ಲಿ ತೃತೀಯವೆನಿಸಿದ ಅಸ್ಯೋದ್ಭವಾದಿದಂ ಎಂಬ ವಿಶೇಷಣದ ವ್ಯಾಖ್ಯಾನಕ್ಕೆ ಇಳಿಯುತ್ತಾ ಅಸ್ಯದ ಆಸ್ಯದಲ್ಲಿರುವ ಅರ್ಥಗಳನ್ನು ಅನಾವರಣಗೊಳಿಸುತ್ತಿದ್ದಾರೆ ಜಯಾರ್ಯರು 'ಅಸ್ಯ ಪ್ರತ್ಯಕ್ಷಾದಿ ಪ್ರಮಾಣಸಿದ್ಧತಯಾ ಬುದ್ಧಿ ಸನ್ನಿಹಿತಸ್ಯ ಸ್ವವ್ಯತಿರಿಕ್ತ ಪ್ರಪಂಚಸ್ಯ' ಎಂಬುವುದಾಗಿ.

ಇಲ್ಲಿ ಮೇಲ್ನೋಟಕ್ಕೆ ಜಯಾರ್ಯರು ಅಸ್ಯ ಎಂಬುದಕ್ಕೆ ಸಹಜವಾಗಿ ಲೋಕಪ್ರಸಿದ್ಧವಾದ ಅರ್ಥವನ್ನೇ ಬರೆಯುತ್ತಿದ್ದಾರೆ ಎಂದನಿಸಿದರೂ ಇದನ್ನು ಚಿಂತಿಸಿದಾಗ ಅನೇಕ ಭಾವಗಳು ಉದ್ಭವಗಳಾಗುತ್ತವೆ. ಅದೇನೆಂದರೆ ಇಲ್ಲಿ ಪ್ರತ್ಯಕ್ಷಾದಿ ಪ್ರಮಾಣಸಿದ್ಧಸ್ಯ ಎಂದಿಷ್ಟೇ ಅರ್ಥಬರೆದರೆ ಒಂದನೆಯದಾಗಿ ಅಸ್ಯವನ್ನು ಸಂಕುಚಿತಗೊಳಿಸಿದಂತಾಗುತ್ತದೆ. ಮತ್ತು ಎರಡನೆಯದಾಗಿ ಆ ಅರ್ಥ ಪ್ರಸಿದ್ಧವೇ ಆಗಿರುತ್ತದೆ. ವ್ಯಾಖ್ಯಾನದ ಅಪೇಕ್ಷೆ ಇರುವುದಿಲ್ಲ ಎಂಬ ಪ್ರಶ್ನೆ ಉತ್ಪತ್ತಿಯಾಗುತ್ತದೆ. ಅದಕ್ಕೋಸ್ಕರ ಪ್ರತ್ಯಕ್ಷಾದಿ ಪ್ರಮಾಣಸಿದ್ಧಾತಯಾ ಬುದ್ಧಿ ಸನ್ನಿಹಿತಸ್ಯ ಎಂದು ವಿಶೇಷ ವ್ಯಾಖ್ಯಾನ ಬರೆಯುತ್ತಾರೆ.

ಇದರಿಂದ ಬಹಳ ಸೂಕ್ಷ್ಮವಾದ ಒಂದು ಕಲ್ಪಿತ ಪ್ರಶ್ನೆಗೆ ಉತ್ತರವನ್ನು ನೀಡಿದಂತಾಗುತ್ತದೆ. ಆ ಪ್ರಶ್ನೆಯೇನೆಂದರೆ ಪ್ರಮಾಣಸಿದ್ಧವಾದ ಸತ್ಯ ಜಗತ್ತಿಗೆ ಆಗಲಿ ಭಗವಂತ ಉದ್ಭವಾದಿದ. ಆದರೆ ಪ್ರಮಾಣಸಿದ್ಧವಾಗದ ಕವಿಕಲ್ಪಿತವಾದ ಕಾಲ್ಪನಿಕ ಜಗತ್ತಿಗೆ, ಮಾಯಾಜಗತ್ತಿಗೆ, ಜಾದೂಜಗತ್ತಿಗೆ ಸೃಷ್ಟಿಕರ್ತ ಅವ ಆಗಲಿಲ್ಲವಲ್ಲ? ಹಾಗಾಗಿಸಮಗ್ರ ಜಗತ್ತಿಗೆ ಅವ ಉದ್ಭವಾದಿದ ಅಲ್ಲವಲ್ಲ ಎಂದು.

ಇದೀಗ ಅಸ್ಯ ಎಂಬುದಕ್ಕೆ ಬುದ್ಧಿ ಸನ್ನಿಹಿತಸ್ಯ ಎಂದು ಅರ್ಥೈಸಿದ್ದರಿಂದ ಈ ಕಲ್ಪಿತ ಪ್ರಶ್ನೆ ಮಾಯವಾಗಲು ಸಾಧ್ಯವಾಯಿತು. ಏಕೆಂದರೆ ಅವ ಬರೇ ಪ್ರಮಾಣಸಿದ್ಧವಾದ ಜಗತ್ತಿಗೆ ಮಾತ್ರವಲ್ಲ ಪ್ರಮಾಣ ಸಿದ್ಧತ್ವೇನ ಬುದ್ಧಿ ಸನ್ನಿಹಿತಗಳಾದ ಜಾದೂಜಗತ್ತಿಗೂ, ಕವಿಕಪೋಲಕಲ್ಪಿತಜಗತ್ತಿಗೂ ಅವನೇ ಜನಕ. ಜಾದೂಗಾರರ ಜಾಲಕ್ಕೂ ಸ್ವಾಪ್ನಜಗತ್ತಿಗೂ ಅವನೇ ಜನಕ ಎಂದು ಉತ್ತರಿಸಿದ್ದಾಗುತ್ತದೆ. ಇಲ್ಲದೇ ಹೋಗಿದ್ದರೆ ಅಸ್ಯ ಪ್ರಮಾಣಸಿದ್ಧಸ್ಯ ಸ್ವವ್ಯತಿರಿಕ್ತ ಪ್ರಪಂಚಸ್ಯ ಎಂದಿಷ್ಟೇ ವ್ಯಾಖ್ಯಾನಿಸಿ ಬಿಡಬಹುದಿತ್ತು. ಅದು ಬಿಟ್ಟು ಪ್ರತ್ಯಕ್ಷಾದಿ ಪ್ರಮಾಣ ಸಿದ್ಧತಯಾ ಬುದ್ಧಿ ಸನ್ನಿಹಿತಸ್ಯ ಸ್ವವ್ಯತಿರಿಕ್ತ ಪ್ರಪಂಚಸ್ಯ ಎಂದು ಬಿಡಿಸಿ ಹೇಳಿದ್ದು ಈ ಕಾರಣಕ್ಕೆ.

ಮತ್ತೊಂದು ಯಾಕೆಂದರೆ ಲಿಂಬೆಹಣ್ಣು, ಬೂದಿ, ಉಂಗುರ, ಲಡ್ಡು, ಹೆಚ್ಚೆಮ್ಟಿವಾಚ್, ಟೈಟಾನ್‌ವಾಚ್ ಇತ್ಯಾದಿ ಪ್ರದತ್ವೇನ ಪ್ರತ್ಯಕ್ಷಾದಿ ಪ್ರಮಾಣಸಿದ್ಧತಯಾ ಬುದ್ಧಿ ಸನ್ನಿಹಿತರಾದ ಬಾಬಾದಿಗಳಿಗೂ ಜಾದೂ, ಮಾಟ, ಡೊಂಬರಾಟ ಮಾಡುವವರೆಲ್ಲರಿಗೂ ಸಾರ್ವತ್ರಿಕವಾಗಿ. ಉದ್ಭವಾದಿದತ್ವೇನ ನಾರಾಯಣನನ್ನು ಜ್ಞಾಪಿಸುವುದಕ್ಕೋಸ್ಕರನೂ ಕೂಡಾ ಬುದ್ಧಿಸನ್ನಿತಸ್ಯ ಎಂದು ವ್ಯಾಖ್ಯಾನ ಮಾಡಿದ್ದು ಎಂದು ತಿಳಿಯತಕ್ಕದ್ದಾಗುತ್ತದೆ.

ಎಂತಹ ಭಯಂಕರ ಮಾಟ, ಮಂತ್ರ, ಮೋಡಿ, ಪವಾಡ, ಇಂದ್ರಜಾಲ ಮಾಡುವವರು ಮತ್ತು ರಾಷ್ಟ್ರಕವಿ, ಲೋಕಕವಿ, ಲೋಕಲ್‌ಕವಿಗಳೆಲ್ಲರೂ ತಮ್ಮ ತಮ್ಮ ಅಪ್ಪ ಅಮ್ಮಂದಿರಿಗೆ ಹುಟ್ಟಿದ್ದರಿಂದ ಮತ್ತು ಸಾಯುವವರಾದ್ದರಿಂದಲೂ ನರಸಿಂಹಾದಿರೂಪಿಯಾದ ತನ್ನಂತೆ ಯಾರೂ ಸ್ವೋದ್ ಭವರಾಗುವುದಿಲ್ಲ, ತಾನು ಮಾತ್ರ ಸ್ವವ್ಯತಿರಿಕ್ತ ಪ್ರಪಂಚಕ್ಕೆ ಉದ್‌ಭವಾದಿದ ಆಗಿರುತ್ತೇನೆ ಎಂಬ ಆಶಯದ ಸೂಚನೆಯೂ ಈ ರೀತಿ ಸ್ವವ್ಯತಿರಿಕ್ತಪ್ರಪಂಚಸ್ಯ ಎಂಬ ವ್ಯಾಖ್ಯಾನದಲ್ಲಿದೆ ಎಂಬುದಾಗಿ ಯೋಚಿಸತಕ್ಕದ್ದಾಗಿರುತ್ತದೆ.

ಸರ್ವಕ್ಕೂ ಜನ್ಮಾದಿ ಚತುಷ್ಟಯವು ಸಂಬಂಧಿಯಾದ್ದರಿಂದ ನಾಲ್ಕನ್ನು ಮಾತ್ರ ಮೂಲ ಶ್ಲೋಕದಲ್ಲಿಟ್ಟುಕೊಂಡದ್ದು ಎಂಬ ಭ್ರಮೆ ಪರಿಹಾರಕ್ಕೋಸ್ಕರ ಜನ್ಮಾದ್ಯಷ್ಟಕ ಎಂದು ಉದ್‌ಭವಾದಿಶಬ್ದಕ್ಕೆ ವ್ಯಾಖ್ಯಾನ ಬರೆಯುತ್ತಿದ್ದಾರೆ. ಎಲ್ಲದಕ್ಕೂ ಜನ್ಮಾದ್ಯಷ್ಟಕ ಕೂಡುವುದಿಲ್ಲವಾದ್ದರಿಂದ ಈ ಕಷ್ಟಾಷ್ಟಕ ಅಥವಾ ಇಷ್ಟಾಷ್ಟಕವನ್ನು ಯಥಾಸಂಭವಂ ದದಾತಿ ಎಂದು ವ್ಯಾಖ್ಯಾನಿಸಿದ್ದಾಗಿರುತ್ತದೆ.

ಇಲ್ಲಿ ಉದ್‌ಭವಾದಿ ದದಾತೀತಿ ಎಂಬಲ್ಲಿ 'ದಾ' ಧಾತ್ವರ್ಥವು ಸ್ವಸ್ವತ್ವತ್ಯಾಗಪೂರ್ವಕಪರಸ್ವತ್ವಾಪಾದನರೂಪದ್ದು. ಹಾಗಿರುವಾಗ ಈಶ್ವರನ ಸ್ವತ್ವವೇ ಸ್ವೀಯತ್ವವೇ ಸರ್ವವಸ್ತುವಿನಲ್ಲೂ ಸರ್ವದಾ ಇದ್ದದ್ದರಿಂದ ಈಶ್ವರನಿಗೆ ಸ್ವಸ್ವತ್ವತ್ಯಾಗವೇ ಅರ್ಥಾತ್ ದಾನವೇ ಕೂಡುವುದಿಲ್ಲ. ಅದೇನಿದ್ದರೂ ಈಶ್ವರೇತರರಿಗೆ ಸಾಧ್ಯ ಎಂಬ ಶಂಕೆ ಇಲ್ಲಿ ಬರುತ್ತದೆ.

ಈ ಶಂಕೆಗೆ ಕೆಲವರ ಸಮಾಧಾನ ಹೀಗಿರುತ್ತದೆ. 'ಕನ್ಯಾದಾನ' ಶಬ್ದಾರ್ಥದಲ್ಲಿ ತಂದೆಯು ಮಗಳಲ್ಲಿ ತನ್ನ ಸ್ವತ್ವವನ್ನಿಟ್ಟುಕೊಂಡೇ ಸ್ವಸ್ವತ್ವ

ತ್ಯಾಗವನ್ನು ಮಾಡದೇ ದಾನ ಮಾಡುವುದರಿಂದ, ಅದೇ ರೀತಿ ವಿದ್ಯಾದಾನಾದಿಗಳಲ್ಲೂ ಸ್ವಸ್ವತ್ವತ್ಯಾಗವನ್ನು ಮಾಡದೇ ಇದ್ದದ್ದರಿಂದಲೂ 'ದಾ' ಧಾತುವಿಗೆ ಪರಸ್ವತ್ವಾಪಾದನ ಎಂದಿಷ್ಟೇ ಅರ್ಥವನ್ನು ಮಾಡಬೇಕು. ಆವಾಗ ಭಗವಂತನಿಗೆ ಉದ್‌ಭವಾದಿದಾನ ಕೊಡುತ್ತದೆ ಎಂದು.

ಸ್ವಲ್ಪಮಟ್ಟಿಗೆ ಇದೂ ಒಂದು ಸಮಾಧಾನವಾಗಬಹುದಾದರೂ ವಸ್ತುತಃ ಇಲ್ಲಿ 'ದಾ' ಧಾತುವಿಗೆ ದಾನ ಎಂಬ ಮುಖ್ಯಾರ್ಥವಿವಕ್ಷೆ ಮಾಡದೇ ಬರೇ ಉದ್‌ಭವಾದಿಕರ್ತಾ ಎಂದು ಕೃತಿ ಎಂಬ ಅರ್ಥವನ್ನು ಮಾತ್ರ ವಿವಕ್ಷಿಸಿದ್ದಾರೆ ಎಂಬ ಉತ್ತರವೇ ಉತ್ತಮವಾಗುತ್ತದೆ. ಮತ್ತು ನ್ಯಾಯವಾಗುತ್ತದೆ. ಆವಾಗ ಇಲ್ಲಿ ಗೌಣಪ್ರಯೋಗ ಯಾಕೆ ಮಾಡಿದ್ದು ಎಂಬ ಒಂದು ಪ್ರಶ್ನೆ ಉಳಿಯುತ್ತದೆ. ಇದಕ್ಕೆ ಸಮಾಧಾನವೇನೆಂದರೆ ಜಗದುದ್ಭವಾದಿಗಳ ಫಲಭಾಗಿತ್ವ ದಾನತೆಗೆದುಕೊಂಡವನಿಗೆ ಪ್ರಸಿದ್ಧವಾಗಿದೆ. ಅದರಂತೆ ಜಗದುದ್ಭವಾದಿದಾನಗಳ ಫಲಭಾಜನರು ಪರರೇ ಆಗಿದ್ದಾರೆ ಎಂಬ ಸೂಚನೆಯೇ ಈ ಗೌಣ ಪ್ರಯೋಗದ ಫಲವಾಗುತ್ತದೆ. ಈ ವಿಷಯವನ್ನು ಶ್ರೀಮದಾಚಾರ್ಯರು ತಾತ್ಪರ್ಯ ನಿರ್ಣಯದಲ್ಲಿ "ಸ್ರಕ್ಷ್ಯೇ ಹಿ ಚೇತನಗಣಾನ್ ಸುಖದುಃಖಮಧ್ಯಸಂಪ್ರಾಪ್ತಯೇ" ಎಂಬುದಾಗಿ ಭಗವಂತ ಪರಗಾಮಿಯಾದ ಫಲಗಳನ್ನೇ ಆತ್ಮಗಾಮಿಯನ್ನಾಗಿ ಭಾವಿಸುತ್ತಾ ಸೃಷ್ಟ್ಯಾದಿಗಳನ್ನು ಮಾಡಿದ ಎನ್ನುವ ಮೂಲಕ ತಿಳಿಸುತ್ತಾರೆ.

ಇನ್ನು "ಅಸ್ಯೇತಿ ಸಂಬಂಧಮಾತ್ರೇ ಷಷ್ಠೀ" ಎಂದು ಜಯಾರ್ಯರ ವ್ಯಾಖ್ಯಾನ. ಇದನ್ನು ಮೇಲ್ನೋಟಕ್ಕೆ ನೋಡಿದಾಗ ಜಯಾರ್ಯರು ಇಂತಹ ಉದ್‌ಗ್ರಂಥದಲ್ಲಿ ವಿಭಕ್ತ್ಯರ್ಥಾದಿ ಸಾಮಾನ್ಯ ಸಂಗತಿಗಳನ್ನು ಯಾಕೆ ನಿರೂಪಿಸುತ್ತಾರೆ ಎಂದು ಪ್ರಶ್ನೆ ಬರಬಹುದು. ಆದರೆ ಇದರ ಅವತಾರಿಕೆಯನ್ನು ತಿಳಿದಾಗ ಮಾತ್ರ ಈ ಸಾಮಾನ್ಯ ವ್ಯಾಖ್ಯಾನವೂ ಆಸಾಮಾನ್ಯವಾಗಿ ಕಾಣುತ್ತೆ.

ಅದೇನೆಂದರೆ ಇಲ್ಲಿ ದಾನ ಕರ್ಮಣಾ ಯಮಭಿಪ್ರೈತಿ ಸ ಸಂಪ್ರದಾನಂ ಎಂಬ ವ್ಯಾಕರಣದ ನ್ಯಾಯ ಪ್ರಕಾರ ಪ್ರಕೃತದಲ್ಲಿ ಉದ್‌ಭವಾದಿ ದಾನದ ಕರ್ಮೀಭೂತವಾದ ಉದ್‌ಭವಾದಿಗೆ ಸಂಬಂಧಿತ್ವೇನ ಅಭಿಪ್ರೇತವಾದದ್ದು ಈ ಪ್ರಪಂಚ. ಆದ್ದರಿಂದ ಪ್ರಪಂಚ ಸಂಪ್ರದಾನವಾಯ್ತು. ಆದ್ದರಿಂದ ಸಂಪ್ರದಾನೇ ಚತುರ್ಥೀ ಎಂಬ ಸೂತ್ರಪ್ರಕಾರ ಅಸ್ಮೈ ಎಂದಾಗಬೇಕು. ಅಸ್ಯ ಎಂದದ್ದು ತಪ್ಪು ಎಂಬ ಪ್ರಶ್ನೆಗೆ ಉತ್ತರರೂಪವಾಗಿ ಜಯಾರ್ಯರು 'ಅಸ್ಯೇತಿ ಸಂಬಂಧಮಾತ್ರೇಷಷ್ಠೀ' ಎಂದು ವಿಶದೀಕರಿಸಬೇಕಾಯ್ತು.

ಈ ಅವತಾರಿಕೆಯ ಮೇಲೆ ಪುನಃ ಪ್ರಶ್ನೆಕೋಟಿಯನ್ನು ಕಾಣಲು ಬರುತ್ತದೆ.



ಅದೇನೆಂದರೆ ನೀವು ಹೇಳಿದಂತೆ ಇಲ್ಲಿ 'ಅಸ್ಮೈ' ಎಂದು ಹೇಳಬೇಕಾದ ಅನಿವಾರ್ಯತೆಯೇನೂ ಬರುವುದಿಲ್ಲ. ಯಾಕೆಂದರೆ 'ವಿಪ್ರಾಯಗಾಂದದಾತಿ' ಎಂಬಿತ್ಯಾದಿಗಳಲ್ಲಿ ಚತುರ್ಥೀ ಬರಲಿಕ್ಕೆ ಏನು ಕಾರಣವಿದೆಯೋ ಅದಿಲ್ಲಿಲ್ಲ. ಅಲ್ಲಿಗೋನಿಷ್ಠ ಸ್ವತ್ವ ನಿರೂಪಕತ್ವ ವಿವಕ್ಷಿತವಾಗಿದೆ. ಪ್ರಕೃತದಲ್ಲಿ ಉದ್‌ಭವಾದಿ ನಿಷ್ಠಸ್ವತ್ವನಿರೂಪಕತ್ವ ವಿವಕ್ಷಿತವಲ್ಲ. ದಾನಕರ್ಮ ನಿಷ್ಠಸ್ವತ್ವ ನಿರೂಪಕತ್ವವೆಂಬ ದಾನಕರ್ಮಸಂಬಂಧಿತ್ವದಾತೃವಿಗೆ ವಿವಕ್ಷಿತವಾದಾಗ ಮಾತ್ರ ಚತುರ್ಥೀ ಬರುವುದು ನ್ಯಾಯ. ಪ್ರಕೃತದಲ್ಲಿ ಈ ಅರ್ಥ ಇಲ್ಲಿ ವಿವಕ್ಷೆ ಮಾಡಲಿಲ್ಲ ಮಾತ್ರವಲ್ಲ ಈ ರೀತಿ ವಿವಕ್ಷೆ ಮಾಡಿದರೂ ಪ್ರಕೃತದಲ್ಲಿ ಅಯುಕ್ತವಾಗುತ್ತದೆ. ಹಾಗಿರುವಾಗ ಚತುರ್ಥೀ ಬರುವ ಪ್ರಸಕ್ತಿ ನಿರಾಕೃತಿಗಾಗಿ 'ಅಸ್ಯೇತಿ ಸಂಬಂಧ ಮಾತ್ರೇ ಷಷ್ಠೀ' ಎಂದು ವ್ಯಾಖ್ಯಾನಿಸಿದ್ದು ಎಂಬ ನಿಮ್ಮ ವ್ಯಾಖ್ಯಾನ ಎಷ್ಟರ ಮಟ್ಟಿಗೆ ಸರಿ ಎಂಬುದು ಒಂದು ಪ್ರಶ್ನೆ.

ಆದರೆ ಈ ಪ್ರಶ್ನೆಯ ಮೇಲೆ ಬರುವ ಮತ್ತೊಂದು ಪ್ರಶ್ನೆ ಈ ಪ್ರಶ್ನೆಗೆ ಉತ್ತರವಾಗುತ್ತದೆ.

ಅದೇನೆಂದರೆ 'ಶತ್ರವೇ ಭಯಂ ದದಾತಿ' ಎಂಬಲ್ಲಿ ದಾನಕರ್ಮಭೂತವಾದ ಭಯನಿಷ್ಠ ಸ್ವತ್ವ ನಿರೂಪಕತ್ವವು ಶತ್ರುವಿನಲ್ಲಿ ಬಾಧಿತ. ಸ್ವತ್ವ ಎಂದರೆ ಯಥೇಷ್ಟ ವಿನಿಯೋಗಯೋಗ್ಯತ್ವ. ಇದು ಭಯದಲ್ಲಿಲ್ಲ. ಭಯವು ಬೇಡವೆಂದರೆ ಹೋಗುವುದಿಲ್ಲ. ಬೇಕೆಂದರೆ ಬರುವುದಿಲ್ಲ. ಆದುದರಿಂದ ದಾನಕರ್ಮ ಸಂಬಂಧಿತ್ವ ಎಂಬುದಕ್ಕೆ ದಾನ ಕರ್ಮನಿಷ್ಠಸ್ವತ್ವ ನಿರೂಪಕತ್ವ ಎಂಬ ಅರ್ಥದ ನಿಯಮವನ್ನು ಮಾಡಬಾರದು. ಬರೇ ದಾನ ಕರ್ಮಾಶ್ರಯತ್ವ ಎಂದು ಹೇಳಬೇಕು. ಪ್ರಕೃತದಲ್ಲಿ ದಾನಕರ್ಮ ಉದ್‌ಭವಾದ್ಯಾಶ್ರಯತ್ವವು ಪ್ರಪಂಚದಲ್ಲಿದ್ದದ್ದರಿಂದ ಸಂಪ್ರದಾನತ್ವಪ್ರಾಪ್ತವಾದದ್ದರಿಂದ ಚತುರ್ಥೀಪ್ರಸಕ್ತಿ ಬಂದಾಗ ಅದರ ನಿರಾಕರಣೆಗಾಗಿ 'ಸಂಬಂಧಮಾತ್ರೇ ಷಷ್ಠೀ' ಎಂದು ಹೇಳಿದ್ದು ಸರಿಯಲ್ಲವಾ ಎಂದು.

ಇಲ್ಲಿ ಮಗದೊಂದು ಪ್ರಶ್ನೆ. ಅದೇನೆಂದರೆ 'ಕರ್ತೃಕರ್ಮಣೋಃ ಕೃತಿ' ಎಂಬ ಸೂತ್ರದಲ್ಲಿ ಕರ್ತ್ರರ್ಥದಲ್ಲಿ ಷಷ್ಠೀ ಬರಬೇಕು ಎಂದು ಹೇಳಿದ್ದಾರೆ. ಪ್ರಕೃತದಲ್ಲಿ ಉದ್ಭವಾದಿರೂಪಕ್ರಿಯಾಶ್ರಯತ್ವರೂಪಕರ್ತೃತ್ವವು ಪ್ರಪಂಚಕ್ಕಿದ್ದದ್ದರಿಂದ 'ಅಸ್ಯ' ಎಂಬಲ್ಲಿ 'ಸಂಬಂಧ ಮಾತ್ರೇ ಷಷ್ಠೀ'ಕ್ಕಿಂತ 'ಕರ್ತೃತ್ವಾರ್ಥೇಷಷ್ಠೀ' ಎಂದು ಹೇಳುವುದೇ ಯುಕ್ತವಲ್ಲ ? ಎಂದು.

ಅದಕ್ಕುತ್ತರವೇನೆಂದರೆ ಕೃದಂತಪದಪ್ರಯೋಗ ಇದ್ದಾಗ ಮಾತ್ರ

'ಕರ್ತೃತ್ವಾರ್ಥೇಷಷ್ಠೀ' ಸೂತ್ರವಿಹಿತವಾಗುತ್ತದೆ. ಪ್ರಕೃತದಲ್ಲಿ ಉದ್‌ಭವಾದಿ ಎಂಬ ಪದವು ಕೃದಂತಪದವಲ್ಲ. ಆದುದರಿಂದ ಷಷ್ಠೀ ಬರುವ ಪ್ರಸಂಗ ಬರಲಿಲ್ಲ. ಮತ್ತು ಚತುರ್ಥೀ ಬರುವ ಪ್ರಸಂಗ ಬಂತು. ಆದಾಗ 'ಸಂಬಂಧಮಾತ್ರೇ ಷಷ್ಠೀ' ಎಂದು ವ್ಯಾಖ್ಯಾನಿಸುವ ಆವಶ್ಯಕತೆ ಬಂದೇ ಬಂತು ಎಂದು.

ಇಲ್ಲಿ ಸಂಬಂಧ ಮಾತ್ರೇ ಎಂಬಲ್ಲಿ ಮಾತ್ರ ಶಬ್ದಕ್ಕೆ ಸಂಬಂಧಸಾಮಾನ್ಯೇ ಎಂದರ್ಥ. ಸಂಬಂಧವನ್ನು ವಿಶೇಷರೂಪೇಣ ವಿವಕ್ಷೆ ಮಾಡದೆ ಸಂಬಂಧತ್ವೇನ ರೂಪೇಣ ವಿವಕ್ಷೆ ಮಾಡಿದಾಗ ಷಷ್ಠೀ ವಿಭಕ್ತಿ ಬರುವುದೇ 'ಶೇಷೇ ಷಷ್ಠೀ' ಎಂಬ ಸೂತ್ರದಿಂದ ವಿಹಿತವಾದದ್ದರಿಂದ ಮಾತ್ರ ಶಬ್ದಕ್ಕೆ ಸಾಮಾನ್ಯ ಎಂಬ ಅರ್ಥವನ್ನು ಇಟ್ಟುಕೊಳ್ಳಬೇಕಾಗಿದೆ.

ಇಲ್ಲಿ ಪುನಃ ಪ್ರಶ್ನೆ ಸಂಬಂಧಸಾಮಾನ್ಯವನ್ನು ಮತ್ತೆ ಯಾವ ಸಂಬಂಧವಿಶೇಷದಲ್ಲಿ ಪರ್ಯವಸಾನಗೊಳಿಸತಕ್ಕದ್ದು ಎಂದು.

ಉತ್ತರ-ಇಲ್ಲಿ 'ದಾ' ಧಾತ್ವರ್ಥ ಕೃತಿಯಾದ್ದರಿಂದ ಆ ಕೃತಿಗೆ ಸವಿಷಯ ಕತ್ವವಿದ್ದದ್ದರಿಂದ ಪ್ರಪಂಚವಿಶೇಷ್ಯಕಉದ್‌ಭವಾದಿವಿಧೇಯಕಕೃತಿಯಲ್ಲಿ ಪ್ರಪಂಚವು ವಿಶೇಷ್ಯಾಖ್ಯ ವಿಷಯವಾಗುವುದರಿಂದ ವಿಶೇಷ್ಯತ್ವರೂಪ ವಿಷಯತ್ವ ಸಂಬಂಧದಲ್ಲಿ ಪರ್ಯವಸಾನಗೊಳಿಸತಕ್ಕದ್ದು ಎಂದು.

ವಾಸ್ತವಿಕವಾಗಿ ಹೇಳುವುದಾದರೆ ಪ್ರಪಂಚಕ್ಕೂ ಉದ್ಭವಾದಿಗಳಿಗೂ ಆಶ್ರಯಆಶ್ರಯೀಭಾವರೂಪಸಂಬಂಧವು ವಿವಕ್ಷಿತವಾದ್ದರಿಂದ ವಿವಕ್ಷಿತಾರ್ಥವನ್ನೇ ಹೇಳಬೇಕಾದುದರಿಂದ ಸಂಬಂಧ ಸಾಮಾನ್ಯವನ್ನು ಆಶ್ರಯ ಆಶ್ರಯೀಭಾವರೂಪಸಂಬಂಧವಿಶೇಷದಲ್ಲಿ ಪರ್ಯವಸಾನಮಾಡಬೇಕು. ಆದರೂ ಚರ್ಚೆಯು ತಾರ್ಕಿಕಭಾಷೆಯಲ್ಲೇ ನಡೆಯುತ್ತಿರುವುದರಿಂದ ತಾರ್ಕಿಕ ಪ್ರಕ್ರಿಯೆಯಲ್ಲೇ ಪರ್ಯವಸಾನವು ಪರ್ಯವಸಾನವಾಗುತ್ತದಾದ್ದರಿಂದ ವಿಶೇಷ್ಯತ್ವರೂಪಸಂಬಂಧ ಎಂದು ತಿಳಿಯತಕ್ಕದ್ದಾಗಿದೆ.

ಇಲ್ಲಿ ಪುನಃ ಪ್ರಶ್ನೆಯೊಂದು ಉದ್ಭವವಾಗುತ್ತದೆ. ಅದೇನೆಂದರೆ ಉದ್ಭವಾದಿದ ಎಂಬ ಸಮಾಸದ ಘಟಕವಾಗದ ಅಸ್ಯ ಎಂಬ ಪದವು ಉದ್ಭವಾದಿ ಎಂಬ ಸಮಾಸಅಘಟಕ ಪದದಿಂದ ಅನ್ವಿತವಾದುದರಿಂದ ಅಸಾಮರ್ಥ್ಯವು ಪ್ರಾಪ್ತವಾದುದರಿಂದ ಉದ್‌ಭವಾದಿದಂ ಎಂಬಲ್ಲಿ ಸಮಾಸಕ್ಕೆ ಅನುಪಪತ್ತಿ ಬಂತು ಎಂದು.

ಉತ್ತರ - ನಿತ್ಯಸಾಪೇಕ್ಷವಾದದ್ದರಿಂದ 'ದೇವದತ್ತಸ್ಯ ಗುರುಕುಲಮಿತಿವತ್' ನಡೆದು ಹೋಗುತ್ತದೆ. (ಮುಂದುವರಿಯುವುದು)

## ವ್ಯಕ್ತಿಸ್ವಾತಂತ್ರ್ಯದ, ಅಭಿವ್ಯಕ್ತಿ ಸ್ವಾತಂತ್ರ್ಯದ ನಗ್ನರೂಪ

# ವಲ್ಗರ್‌ಫ್ರೆಂಡ್ಸ್

"ತಿಮ್ಮಪ್ಪನ ಆಣೆಯಾಗಿ ಹೇಳುತ್ತೇನೆ - ಇದಕ್ಕಿಂತ ಕೆಟ್ಟ ಚಿತ್ರ ಇಷ್ಟರ ತನಕ ಬಂದಿಲ್ಲ. ಶಪಥಪೂರ್ವಕ - ಖಡಾಖಂಡಿತ - ಕಟ್ಟುನಿಟ್ಟಾಗಿ - ನೂರಕ್ಕೆ ನೂರು ಇದು ವಯಸ್ಕರಿಗೆ ಮಾತ್ರ. ಇತಿಹಾಸದಲ್ಲೇ ಅತ್ಯಂತ ಪ್ರತಿಭಟನೆಗೆ ಒಳಗಾದ ಚಿತ್ರವಿದು. ಇಂದೇ ತ್ವರೆ ಮಾಡಿ"

ಒಂದು ಕೈಯಲ್ಲಿ ಚೆಂಡು. ಮತ್ತೊಂದರಲ್ಲಿ ಕಟ್ಟಿಗೆ ತುಂಡು. ಉದ್ದದ ಕ್ರಿಕೆಟ್ ದೈತ್ಯ ದಾಂಡಿಗ.

ಕಣ್ಣಿಗೆ ಕಟ್ಟುವಂತೆ ದಾರಿಹೋಕರನ್ನು ಅಡ್ಡಕಟ್ಟಿ ಮಧ್ಯೆಮಾರ್ಗ ದರೋಡಿಸುವಂತಿದ್ದ, ದೋಚುವಂತಿದ್ದ, ದೊಡ್ಡ ದೈತ್ಯ ಫಲಕವನ್ನು ವಾಕಿಂಗ್ ಹೊರಟ ಹಲ್ಲಿಲ್ಲದ ವೃದ್ಧ ಜೋಡಿಗಳಿಬ್ಬರು ನೋಡಿ ಮುಖ ಮುಖ ನೋಡಹತ್ತಿದರು.

"ಏನ್ರೀ ನಮಗೋಸ್ಕರವೇ ಯಾವನೋ ಮಹಾತ್ಮ ಸ್ಪೆಷಲ್ ಪಿಚ್ಚರ್ ತೆಗೆದಿದ್ದಾನೆ ನೋಡಿ. ಮಕ್ಕಳೆಲ್ಲಾ ಬಂದರೆ ತೊಂದ್ರೆಯಾಗುತ್ತೇಂತ ನಮಗೆ ಮಾತ್ರಾಂತ ಹಾಕಿದ್ದಾನೆ. ನೋಡಿ, ಏನೇ ಆಗಲಿ ವಯಸ್ಕರಾದ ನಮ್ಮ ಮೇಲೂ ಪಿಚ್ಚರಿನವರಿಗೆ ಕರುಣೆ ಉಂಟಾಯಿತಲ್ವಾ!" ಎಂದು ಮಹಾಫಲಕವನ್ನೇ ದಿಟ್ಟಿಸುತ್ತಾ ಪ್ರಥಮ ವೃದ್ಧ ಶ್ರೀಯುತ ಎಂಕೆ ಕುಮಾರ್ ಅಲ್ಲೇ ಉಸುರಿದರು. ಉದುರಿದರು.

"ಅಲ್ಲರೀ ನೀವು ವಯಸ್ಕರೇನ್ರೀ? ವಯಸ್ಕರೆಂದರೆ ನಾವಲ್ರೀ. ವಯಸ್ಕರೆಂದರೆ ಹುಡುಗರ್ರೀ" ವಾಕಿಂಗ್‌ಫ್ರೆಂಡ್ ದ್ವಿತೀಯವೃದ್ಧ ಎಸ್ಸೈಕುಮಾರ್ ತಕ್ಷಣ ಉತ್ತರಿಸಿದರು.

"ಮತ್ತೆ ನಾವೇನು ಹುಡುಗಿಯರಾ? ನಾವೂ ಹುಡುಗರಲ್ವಾ? ನಮ್ಮ ಅಪ್ಪಂದಿರು ನಮ್ಮ ಹೆಸರಿಗೆ ಕುಮಾರ್ ಅಂತಲೇ ಜೋಡಿಸಿಲ್ವಾ? ನೋಡಿ ನೂರಕ್ಕೆ ನೂರು ವಯಸ್ಕರೆಂದು ಹಾಕಿದ್ದಾನೆ. ನೂರಕ್ಕೆ ಹತ್ತಿರವಿರುವ ನೂರಕ್ಕೆ ನುಸುಳುತ್ತಿರುವ ನಾವೇ ಅಲ್ರೀ ನೂರಕ್ಕೆ ನೂರು ವಯಸ್ಕರು? ಆದ್ದರಿಂದ ಇದು ನಮಗೇ ಇರಬೇಕು" ಎಂದು ಸುವೃದ್ಧ ಎಂಕೆ ಕುಮಾರ್ ಬೆನ್ನು ನೆಟ್ಟಗೆ ಮಾಡಿ ಪ್ರತಿಪಾದಿಸಿದರು. ಪ್ರತಿವಾದಿಸಿದರು.

"ರೀ ಕೆಳಗೆ ನೋಡ್ರೀ ಪಿಚ್ಚರಿನ ಹೆಸರು 'ಗರ್ಲ್‌ಫ್ರೆಂಡ್' 'ಹೆಂಗಳೆಯರು'. ಇದು ನಮಗಲ್ಲರೀ. ಇದು ಎಳೆಯ ಹುಡುಗಿಯರಿಗೆರೀ". ಎಸ್ಸೈ ಕುಮಾರು ಅಟ್ಟಹಾಸ ಮಾಡುತ್ತಾ ಬೊಟ್ಟು ಮಾಡಿ ತೋರಿಸಿದರು.

"ಹಾಗಿದ್ದರೆ ಚೆಂಡು, ತುಂಡು ಹಿಡಿದ ತುಂಟಗಂಡು ಕಾಂಗರೂವಿನ ಚಿತ್ರ ಯಾಕ್ರೀ ಹಾಕಿದಾರ್ರೀ?" ತಕ್ಷಣ ಎಂಕೆ ಕುಮಾರ್ ಅವರ ಮರುಟಪ್ಪಾಲು ಬಂತು.



ಅದು ನೋಡಿ, ಚೆಂಡು ಅಂದರೆ ವೃದ್ಧರು. ತುಂಡು ಅಂದರೆ ತರುಣರು. ಈ ತರುಣರು ಮುದ್ದೆಯಂತಿರುವ ಹಣ್ಣುಹಣ್ಣು ವೃದ್ಧರನ್ನು ಚೆಂಡಿನಂತೆ ತುಂಡಿನಿಂದ ದೂರಮಾಡಿ ಪಿಚ್ಚರ್ ನೋಡಲು ನುಗ್ಗುತ್ತಾರೆ ಎಂದು ಇದರರ್ಥ ರೀ. ಗರ್ಲ್‌ಫ್ರೆಂಡ್ ಹಾಕಿದ ತಕ್ಷಣ ಬಾಯ್ ಫ್ರೆಂಡ್‌ಗಳು ಘೂಳಿಗಳಂತೆ ನುಗ್ಗುತ್ತಾರೆ ಎಂದು ಇದರ ಉದ್ದೇಶ ರೀ"

"ಅಲ್ಲರೀ ಈ ಕ್ರಿಕೆಟಿಗೂ ಈ ಪಿಚ್ಚರಿಗೂ ಏನು ಸಂಬಂಧ ರೀ?" ಎಂದು ಪ್ರಥಮ ವೃದ್ದರು ಮಧ್ಯೆ ಪರಿಪ್ರಶ್ನೆ ಮಾಡಿದರು.

ಅದು ನೋಡಿ ಕ್ರಿಕೆಟನ್ನು ಹುಡುಗಿಯರು ನೋಡುವುದು ಮಾತ್ರ. ಆಡುವುದಿಲ್ಲ. ಎದುರು ಕೂತು ಸ್ಫೂರ್ತಿ ಕೊಡುವುದು ಮಾತ್ರ. ಅದರಂತೆ ಈ ಪಿಚ್ಚರನ್ನೂ ಎಲ್ಲಾ ಹುಡುಗಿಯರು ಎದುರು ಕೂತು ನೋಡಿ, ಹುಡುಗರಿಗೆ ಸ್ಫೂರ್ತಿಮೂರ್ತಿಗಳಾಗಲಿ ಎಂಬ ಉದ್ದೇಶ ರೀ" ಅದಕ್ಕೋಸ್ಕರವೇ ಇಬ್ಬರೂ ಬರುವ ಹಾಗೆ ಫ್ರೆಂಡ್ ಅಂತ ಹಾಕಿದ್ದಾನೆ ರೀ.

"ಅಲ್ರೀ ತಿಮ್ಮಪ್ಪನ ಮೇಲೆ ಆಣೆ ಹಾಕ್ಯಾನಲ್ರೀ? ಈತ ತಿರುಪತಿಯ ಪರಮಭಕ್ತ ಅಂತ ಕಾಣುತ್ತೇ ರೀ" ಎಂದರು ಪ್ರಥಮ ವೃದ್ಧರು.

ತಕ್ಷಣ ಕನಲಿದ ಪ್ಲಸ್ ಟೂ ವೃದ್ಧರು, ಈತ "ತಿಮ್ಮಪ್ಪನ ಭಕ್ತಗಿಕ್ತ ಏನೂ ಅಲ್ಲರೀ. ತಿಮ್ಮಪ್ಪನ ಆಣೆ ಹಾಕಿದರೆ ತನಗೊಂದು ನಾಲ್ಕಾಣೆಯಾದರೂ ಜಾಸ್ತಿ ಬಂದೀತು ಎಂಬ ಆಸೆ ಅವನಿಗೆ. ಚಿತ್ರ ಬಹಳ ಒಳ್ಳೆದಿದೆ. ಅಂದರೆ ಯಾರು ನೋಡುತ್ತಾರೆ ರೀ?

ಕೆಲವರಂತೂ ತಮ್ಮದು ಮಹಾಕೆಟ್ಟ ಚಿತ್ರ ಅಂತ ಹೇಳಿ ಜಂಭಕೊಚ್ಚಿಕೊಂಡು ಒಳಗೆ ಹೋಗಿ ನೋಡಿದ್ರೆ ಅಂತಹಾ ಕೆಟ್ಟದ್ದು ಏನೂ ಕೊಡದೆ ಬರೇ ಒಳ್ಳೆದು ತೋರಿಸಿ ಮೋಸ ಮಾಡುತ್ತಾರೆ ರೀ! ಇದು ಸೆನ್ಸಾರ್‌ನವರು ಕಟ್ಟು ಮಾಡಿದರು ಎಂದು ಸುಳ್ಳು ಹೇಳುತ್ತಾರೆ ರೀ! ಅದಕ್ಕೋಸ್ಕರ ತಿಮ್ಮಪ್ಪನ ಆಣೆ ಹಾಕಿದ್ರೆ ಜನ ನಂಬುತ್ತಾರೆ ರೀ. ಜೊತೆಗೆ ಪ್ರತಿಭಟನೆ ಮಾಡಿಸಿ ಪೇಪರಿನವರ ಹತ್ತಿರ ಹೇಳಿ ಅದಕ್ಕೆ ದೊಡ್ಡ ಪ್ರಚಾರ ಕೊಡಿಸಬೇಕ್ರಿ. ಈ ರೀತಿ ಸರ್ಕಸ್ ಜಾಸ್ತಿ ಮಾಡಿದರೆ ಪ್ರತಿಭಟನೆ ಜಾಸ್ತಿ ಮಾಡಿಸಿದರೆ ಮಾತ್ರ ಪಿಚ್ಚರ್ ಸಕ್ಸಸ್ ಆಗೋದ್ರಿ! ತನ್ನ ಚಿತ್ರ ಸ್ಪೆಷಲ್‌ಕೆಟ್ಟದಿದೆ ಎಂದು ಜನರನ್ನು ಬೇರೆ ಯಾವ ರೀತಿ ನಂಬಿಸೋದ್ರಿ? ಅದಕ್ಕೋಸ್ಕರನೇ ಈ ತಿರುಪತಿ ತಿಮ್ಮಪ್ಪನ ಆಣೆ ಹಾಕೋದ್ರೀ!

ತಿರುಪತಿ ತಿಮ್ಮಪ್ಪನ ದರ್ಶನಕ್ಕೆ ಟಿಕೇಟು ಹಚ್ಚಿ ಜನ 'ಕ್ಯೂ' ನಿಲ್ಲುವಂತೆ ತನ್ನ ಪಿಚ್ಚರಿನ ದರ್ಶನಕ್ಕೂ ಕ್ಯೂ ಆಗಲೀಂತ ಇವನ ಪರ್ಪಸ್ ರೀ.

"ಅಂತೂ ಏನಾದ್ರೂ ಮಾಡಿ ಜನರ ನಂಬಿಕೆಯನ್ನು ದುರುಪಯೋಗಿಸಿ ಯಾದರೂ, ಜನರನ್ನು ಹಾಳು ಮಾಡಿಯಾದರೂ, ಜನರ ಕೆಟ್ಟ ಅಭಿರುಚಿಯನ್ನು ಕೆರಳಿಸಿಯಾದರೂ ದುಡ್ಡು ಮಾಡಬೇಕು ಎಂಬ ದುಷ್ಟತನ ರೀ ಈ ಪಿಚ್ಚರಿನವರದ್ದು" ಎನ್ನುತ್ತಾ ಮಿಸ್ಟರ್ ಕುಮಾರ್ ಮುಂದುವರಿಸಿದರು.

ಈ ದುಷ್ಟರಿಂದ ಈಗ ಏನಾಗಿದೆಯೆಂದರೆ ಪರದೇಶಗಳಲ್ಲಿ ಈಗ

ಶುರುವಾಗಿದೆಯಂತೆ. ಗಂಡಸರು ಗಂಡಸರನ್ನೇ ಹೆಂಗಸರು ಹೆಂಗಸರನ್ನೇ ಮದುವೆಯಾಗುವುದಂತೆ. ಅದಕ್ಕೆ ಕಾನೂನೂ ಆಗಿದೆಯಂತೆ. ಜೊತೆಗೆ ವೇಶ್ಯಾವಾಟಿಕೆಯನ್ನೂ ಪ್ರೊಫೆಷನ್ ಮಾಡಿದ್ದಾರಂತೆ.

ನೋಡಿ ಮೊದಲು ಸೃಷ್ಟಿಕಾಲದಲ್ಲಿ ಗಂಡಸು ಹೆಂಗಸನ್ನು ಮದುವೆಯಾಗುವುದಿತ್ತು. ಆಮೇಲೆ ಹೆಂಗಸಿಗೆ ಗಂಡಸನ್ನು ಕೊಟ್ಟು ಮದುವೆ ಮಾಡುವುದು ಬಂತು. ಇದೀಗ ಗಂಡಸು ಗಂಡಸನ್ನೇ ಹೆಂಗಸು ಹೆಂಗಸನ್ನೇ ಮದುವೆಯಾಗುವುದಂತೆ. ಮುಂದೆ ತನ್ನನ್ನು ತಾನೇ ಮದುವೆಯಾಗುವುದು, ನಾಯಿಯನ್ನು ಮದುವೆಯಾಗುವುದು, ಬೆಕ್ಕನ್ನು ಮದುವೆಯಾಗುವುದು ಎಲ್ಲಾ ಬಂದು ಬಿಡುತ್ತೆ ನೋಡಿ. ಅದಕ್ಕೂ ಲೈಸನ್ಸ್ ಕೊಡುತ್ತಾರೆ ನೋಡಿ. ಕೊನೇಗೆ ಪ್ರಾಣಿಗಳ ಹಾಗೆ ಮದುವೆ ಗಿದುವೆ ಏನೂ ಇಲ್ಲದೆ ಅರಣ್ಯದಂತೆ ಸುಮ್ನೆ ಹುಟ್ಟುಡುಗೆಯಲ್ಲೇ ಸುತ್ತಾಡುವುದು ಬಂದು ಬಿಡುತ್ತದೆ ನೋಡಿ ಎಂದರು. ಪೂರ್ಣ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಪೂರ್ಣ ಅಭಿವ್ಯಕ್ತಿಗೊಳಿಸುತ್ತಾರೆ ನೋಡಿ - ಈ ಸುಳ್ಳು ಸೆಕ್ಯೂಲರ್ ಜನ. ಇವೆಲ್ಲಾ ವ್ಯಕ್ತಿ ಸ್ವಾತಂತ್ರ್ಯದ, ಅಭಿವ್ಯಕ್ತಿಸ್ವಾತಂತ್ರ್ಯದ ನಗ್ನರೂಪ ರೀ. ಪೂರ್ಣರೂಪ ರೀ ನೈಜರೂಪ ರೀ" ಎಂದಾಗ ಎಂಕೆ ಕುಮಾರ್ ಕೇಳಿದರು.

"ಅಲ್ಲರೀ ಗಂಡಸು ಗಂಡಸನ್ನೇ ಹೆಂಗಸರು ಹೆಂಗಸನ್ನೇ ಮದುವೆಯಾದರೆ ಆ ಸಲಿಂಗ ದಂಪತಿಗಳ ಆಸ್ತಿ ವಿಲೇವಾರಿ ಹೇಗೆ ಮಾಡುತ್ತಾರೆ ರೀ" ಎಂದು.

ಎದುರಿನ ವೃದ್ಧರು ಹೇಳಿದರು. "ನೀವು ಎಂಕೆ ಕುಮಾರ್ ಅಂದರೆ ಮಂಕಿ ಕುಮಾರ್ ರೀ. ಗಂಡಸು ಗಂಡಸನ್ನು ಹೆಂಗಸು ಹೆಂಗಸನ್ನು ಎಂದಾಗ ನಾನು ಒಂದೇ ಸಲ ಎಂದು ಹೇಳಿದೆನಾ? ಹತ್ತಾರು ಸಲ ಆಗುವಾಗ ಆಸ್ತಿನಾಸ್ತಿ ಆಗುವುದಿಲ್ವಾ? ತಮಗೆ ತಾವೇ ಮಕ್ಕಳಂತಾಗುತ್ತಾರೆ ಎಂದೂ ಅರ್ಥವಾಗುವುದಿಲ್ವಾ?" ಎಂದು.

ಸ್ವಲ್ಪ ಸಾವರಿಸಿಕೊಂಡ ಎಂಕೆ ಕುಮಾರ್ ಹೇಳಿದರು "ನೋಡಿ ಅದಕ್ಕೇರೀ ಮೊನ್ನೆ ನಮಗೆ ಐವತ್ತು ವರ್ಷಗಳ ದೀರ್ಘದಾಂಪತ್ಯಕ್ಕೆ ಸಮ್ಮಾನ ಮಾಡಿದ್ರೀ ಎಂದು ಸನ್ಮಾನದ ಕಾರಣವನ್ನು ಹೊಳೆಸಿಕೊಂಡರು. ಇಷ್ಟರತನಕ ಸಹಜವಾಗಿದ್ದ ಧೀರ್ಘ ದಾಂಪತ್ಯವನ್ನು ಇತ್ತೀಚೆ ಸಾಧನೆಯಾಗಿ ಪರಿಗಣಿಸಿ ಸನ್ಮಾನ ಮಾಡಿದ್ದು ಯಾಕೇಂತ ಗೊತ್ತಾಗಲಿಲ್ಲ ಮಾರಾಯರೇ ನನಗೆ ಇಷ್ಟರತನಕ.

ಅಷ್ಟರಲ್ಲಿ ಎಸ್ಸೈಕುಮಾರ್ ಹೇಳಿದರು "ಜನರಿಗೆ ಚಿಂತನ ಶಕ್ತಿ ಕುಂಠಿತವಾಗುತ್ತಿದೆ ನೋಡಿ. ಅದನ್ನು ಮತಿಗೇಡಿ ಸ್ವಾರ್ಥಿ ದುಷ್ಟರು ಚೆನ್ನಾಗಿ ದುರುಪಯೋಗಿಸಿಕೊಳ್ಳುತ್ತಿದ್ದಾರೆ ನೋಡಿ. ಅದಕ್ಕೆ ಯೌವನದ ಹುಚ್ಚಿನಲ್ಲಿರುವ ಹುಡುಗ ಹುಡುಗಿಯರನ್ನು ಬಲಿ ಮಾಡಿ ತಾವು ದುಡ್ಡಿನಲ್ಲಿ ಬಲಿಷ್ಠರಾಗುತ್ತಾರೆ ನೋಡಿ. ಅಂಡರ್‌ವರ್ಲ್ಡ್‌ನ ಬಲ ಪಡೆದು ವಲ್ಗರ್‌ವರ್ಲ್ಡ್‌ನ ಸೃಷ್ಟಿಸುತ್ತಾರೆ ನೋಡಿ.

"ಇಲ್ಲದಿದ್ದರೆ ಒಂದು ದಿನ ಬೆಂಕಿ ಹಚ್ಚಲ್ಪಡುವ ಈ ಮಾಂಸ ಮೂಳೆಗಳ ಮೂಟೆಯಾದ ಸರ್ವತ್ರಮಲಸ್ರಾವಿಯಾದ ಈ ದೇಹಕ್ಕೆ, ಮುದುಡುವ ದೇಹಕ್ಕೆ



ಇಷ್ಟೊಂದು ವೈಭವೀಕರಣವೇಕೆ? ಅತಿರಂಜನೆಬೇಕೇ? ಜೀವನದಲ್ಲಿ ಅನೇಕ ಪ್ರಮುಖ ಕ್ಷೇತ್ರಗಳ ಕಡೆಗೆ, ಸಾಧನೆಗಳ ಕಡೆಗೆ ಗಮನ ಹರಿಸಬೇಕಾಗಿರುವಾಗ ಈ ಒಂದು ಸಹಜದೌರ್ಬಲ್ಯಕ್ಕೆ ಇಷ್ಟು ಅಸಹಜ ವೈಭವೀಕರಣಬೇಕೇ? ಬಾಲಕರ, ಅಬಲೆಬಾಲೆಯರ ವಯೋಗುಣವನ್ನು ಕೆರಳಿಸಿ ಸುಖದ ಹೆಸರಿನಲ್ಲಿ ಮಾನಸಿಕ ಹೊಯ್ದಾಟದ ಕೆಸರಿನಲ್ಲಿ ಅವರನ್ನು ತುರುಕಿಸಿ, ಸಿಲುಕಿಸಿ, ಗರ್ಲ್‌ಫ್ರೆಂಡ್ಸ್ - ಗರಳಫ್ರೆಂಡ್ಸ್, ಬಾಯ್‌ಫ್ರೆಂಡ್ಸ್ ಇತ್ಯಾದಿಯಾಗಿ ಪಿಚ್ಚರ್ ಮಾಡಿ ಸಾವಿರಾರು ಕುಟುಂಬಗಳ ಬಾಳು ಹಾಳುಮಾಡಿ ಅಶಾಂತಿ ಆತ್ಮಹತ್ಯೆಗಳ ಕೂಪಕ್ಕೆ ದೂಡಿ ನಿದ್ದೆಯ ಗುಳಿಗೆಗಳಿಗೆ ಶರಣಾಗುವಂತೆ ಮಾಡಿ ದುಡ್ಡು ಮಾಡಬೇಕಾದ ಗೀಳು ಈ ದುಡ್ಡಿನ ಹಾಳು ಹುಳುಗಳಿಗೆ ಬೇಕೇ? ಉದರಂಭರಣಕ್ಕಾಗಿ ಇಷ್ಟೆಲ್ಲಾ ಮಾಡಬೇಕೇ? ಹಾಳು ಮಾಡಿಯೇ ಹಣಮಾಡಬೇಕೇ? ಎಂದು ಎಸ್ಸೈ ಹೇಳಿದರು.

ನಶ್ವರ ಸುಖಕ್ಕಾಗಿ ಶಾಶ್ವತ ಶಾಂತಿಯನ್ನು ಬಲಿಗೊಟ್ಟು ಜನಗಳು ಸೇತುವೆ ಹುಡುಕುವಂತೆ ಮಾಡಬೇಕೇ? ಮುಂದೆ ಹೋದಷ್ಟು ಮುಚ್ಚಲ್ಪಡುವ ಹಿಂಬರುವ ದಾರಿಯುಳ್ಳ ಏಕಮುಖಿ ಮಾರ್ಗದಲ್ಲಿ ಮುಗ್ಧರನ್ನು ದೂಡಬೇಕೇ? ಬಾಲ್ಯವಿವಾಹಕಾರರನ್ನು ಬುದ್ಧಿವಂತರನ್ನಾಗಿಸಬೇಕೆ? ಎಂದು ಹೇಳಿದಾಗ.

ನೀವು ದೊಡ್ಡ ಫಿಲಾಸಫರ್ ರೀ ಎಂದು ಎಂಕೆ ಕುಮಾರ್ ಹೇಳಿದರು. ಎಸ್ಸೈ ಹೇಳಿದರು ನನ್ನ ಮೊಮ್ಮಕ್ಕಳು ಈ ಕೂಪದಲ್ಲಿ ಸಿಕ್ಕಿಬಿದ್ದು ನಾನು ಫುಲ್ ಸಫರ್ ಆದದ್ದರಿಂದಲೇ ಫಿಲಾಸಫರ್ ಆದದ್ದು ಮರಾಯರೇ ಎಂದು. ಹೌದು ಈ ಹಾಳು ಪಿಚ್ಚರಿನವರು ನನ್ನ ಕುಟುಂಬದಂತೆ ಇನ್ನೆಷ್ಟು ಸಂಸಾರಗಳನ್ನು ಸಫರ್ ಮಾಡಿದ್ದಾರೋ ಯಾರಿಗೆ ಗೊತ್ತು? ನಾಯಿಬುದ್ಧಿಯವರು ಎನ್ನುತ್ತಾ ಕೈಯಲ್ಲಿದ್ದ ಕೋಲು ಹಿಡಿದು ನಡುಗಿದರು. ಗುಡುಗಿದರು.

ಮುಂದಡಿಯಿಡುತ್ತಾ ನಡುಗುತ್ತಾ ನಡೆಯುತ್ತಾ ಗುಡುಗಿದ ರಭಸಕ್ಕೆ ಕೋಲು ದಾರಿಯಲ್ಲಿದ್ದ ಮುದ್ದೆಗೆ ತಾಗಿ ಜಾರಿ ಬಿತ್ತು.

ಇಲ್ಲದೆಯಿದ್ದ ಹಲ್ಲು ಕಡಿಯುತ್ತಾ ಹಿಂಜುತ್ತಾ "ನೋಡಿ, ಬರೇ ಗರ್ಲ್‌ಫ್ರೆಂಡ್ಸ್ ಫಲಕ ನೋಡುತ್ತಾ ನಡೆದದ್ದಕ್ಕೆನೇ ಇಂತಹ ದುರಾವಸ್ಥೆ ಇನ್ನು ಪಿಚ್ಚರನ್ನೇ ನೋಡಿದರೆ ಇನ್ನೇನೇನೋ?" ಎನ್ನುತ್ತಾ ಕೋಲು ಯಾವ ಮುದ್ದೆಗೆ ತಾಗಿ ಜಾರಿಬಿದ್ದಿತ್ತಪ್ಪಾ ಎಂದು ಕನ್ನಡಕ ತೆಗೆದು ನೋಡುತ್ತಾರೆ. ಆ ಮುದ್ದೆ ಅದೇ ಈಗ ತಾನೇ ಹೇಳಿದ್ದರದ್ದೇ ಆಗಿತ್ತು.

ಹಾಳುಹುಳಗಳಿಂದ ತುಳುಕುತ್ತಿದ್ದ ಅದು ದುಷ್ಟಚಿತ್ರಗಳ ಮೂಲಕ, ಹಾಳುಗೀಳುಗಳನ್ನು ಹೈಲೈಟ್ ಮಾಡುವ ಮೂಲಕ ಸಹಸ್ರಾರು ಮುಗ್ಧ ಬಾಲಬಾಲೆಯರಿಗೆ ತಾಮಸಚಾಳಿ ಹೇಳಿಕೊಡುವ ಮೂಲಕ ಲಕ್ಷಾಂತರ ಬಾಳುಗಳನ್ನು ಹಾಳುಗೆಡಹುವ 'ವಲ್ಗರ್ ಫ್ರೆಂಡ್', 'ಗರ್ಲ್‌ಫ್ರೆಂಡ್', 'ಹೆಲ್‌ಫ್ರೆಂಡ್' ಮುಂತಾದ ಚಿತ್ರವಿಚಿತ್ರಚಿತ್ರಕರ್ತರನ್ನು ಚಿತ್ರಪ್ರವರ್ತಕರನ್ನು ಚಿತ್ತಚೋರರನ್ನು, ವಿಕ್ಷಿಪ್ತಚಿತ್ತರನ್ನು ಚಿತ್ರಗುಪ್ತ ಚಿತ್ರಹಿಂಸೆಯಿಂದ ಚಿತ್ರಿಸುವಂತಿತ್ತು.

**- ಸುಶ್ರೀ**

ಮುಖಪುಟ ಲೇಖನ

# ಧನ್ವಂತರಿರ್ಭಗವಾನ್ ಪಾತ್ವಪಥ್ಯಾತ್

ಶ್ರೀಮನ್ನಾರಾಯಣನ ಅವತಾರರೂಪ ಧನ್ವಂತರಿ ಔಷಧದ ದೇವತೆ. ಸಮುದ್ರ ಮಥನ ಕಾಲದಲ್ಲಿ ಅಮೃತಕಲಶವನ್ನು ಹಿಡಿದುಕೊಂಡು ಪ್ರಾದುರ್ಭಾವಗೊಂಡ ರೂಪ.

ಅಮೃತವನ್ನು ನೀಡುವ ಮೂಲಕ ದೇವತೆಗಳಿಗೆ ಮೃತ್ಯುಭಯದಿಂದ ಪಾರು ಮಾಡಿ ಅಮರರನ್ನಾಗಿಸಿದ ರೂಪ.

ಅಷ್ಟೇ ಅಲ್ಲದೆ ಸಕಲ ರೋಗಗಳನ್ನು ನಿವಾರಿಸುವ ಆಧಿವ್ಯಾಧಿಗಳನ್ನು ಪರಿಹರಿಸುವ ಆರೋಗ್ಯಭಾಗ್ಯವನ್ನು ಕರುಣಿಸುವ ಭಗವದ್ರೂಪ ರೋಗಬಾಧೆಯಿಂದ ಬಳಲುವವರು ಯಾರೇ ಆಗಲಿ ಧನ್ವಂತರಿ ಜಪವನ್ನು ಗುರುಗಳಿಂದ ಉಪದೇಶಿಸಿಕೊಂಡು ಕ್ರಮಪೂರ್ವಕ ಜಪಿಸಿದಲ್ಲಿ ರೋಗಶಮನಗೊಳ್ಳುವಂತದ್ದು ಇಂದಿಗೂ ಪ್ರತ್ಯಕ್ಷಸಿದ್ಧವಾಗಿದೆ. ಈ ಸಂಸಾರ ಚಕ್ರದಲ್ಲಿ ಸಿಲುಕಿಕೊಂಡಿರುವುದೇ ಒಂದು ಮಹಾರೋಗ 'ಭವರೋಗ'.

**ಸುಖಸ್ಯಾನಂತರಂ ದುಃಖಂ ದುಃಖಸ್ಯಾನಂತರಂ ಸುಖಂ**

ಎಂದು ಸುಖದುಃಖಗಳ ಮಿಶ್ರಣ ಮತ್ತು ದುಃಖವೇ ಪ್ರಧಾನವಾಗಿರುವ ಭವರೋಗ. ಸಂಸಾರ ಸಾಗರ, ಆಧಿವ್ಯಾಧಿಜಲಧಿ, ಕಷ್ಟಗಳ ಕಡಲು.

ಈ ಕಡಲನ್ನು ದಾಟಿಸುವ ಮಹಾಶಕ್ತಿ ಭಗವನ್ನಾಮವೊಂದಕ್ಕೆ ಮಾತ್ರವಿದೆ. ಭವರೋಗಹರನೇ ಆ ವೈದ್ಯನೇ 'ಧನ್ವಂತರಿ' ರೂಪದಲ್ಲಿ ಕಾಣಿಸಿಕೊಂಡ ಶ್ರೀಮನ್ನಾರಾಯಣ.

ಈ ಧನ್ವಂತರಿ ರೂಪಿ ನಾರಾಯಣನನ್ನು ಸ್ಮರಿಸಿದಲ್ಲಿ ಲೌಕಿಕ ರೋಗಗಳು ಶಮನಗೊಳ್ಳುವುದು ಮಾತ್ರವಲ್ಲದೆ, ನಿರಂತರ ಜಪದಿಂದ ಶಾಶ್ವತವಾಗಿ ಭವರೋಗವೇ ಪರಿಹಾರವಾಗಿ ವೈಭವದ ಮೋಕ್ಷಪ್ರಾಪ್ತಿಗೂ ಕಾರಣವಾಗುವುದು ಎಂಬುದಾಗಿ ಶಾಸ್ತ್ರಗಳು ಒತ್ತಿ ಒತ್ತಿ ಹೇಳುತ್ತಿವೆ. 'ವೈದ್ಯೋ ನಾರಾಯಣೋ ಹರಿಃ'

ಇಂತಹ ಧನ್ವಂತರಿಯು ಹಿತ - ಅಹಿತಗಳ ಅರಿವೇ ಇರದ ಪಾಮರರಾದ ನಮ್ಮನ್ನು ಅಹಿತಗಳಿಂದ ದೂರ ಮಾಡಿ ಸಾಧನೆಗಳಿಗೆ ಬೇಕಾದ ಆರೋಗ್ಯ ಭಾಗ್ಯವನ್ನು ಕರುಣಿಸಲಿ. ಹಿತದೆಡೆಗೆ ಮುನ್ನಡೆಸಲಿ.

# ಮನೆಯೆಂಬ ಮಂದಿರ

ಡಾ। ಎಚ್. ವಿ. ನರಸಿಂಹ ಮೂರ್ತಿ

ಪರಮಾತ್ಮ ಒಬ್ಬನೇ ಇದ್ದನಂತೆ. ಅವನೊಳಗೆ ಒಂದು ಸಂಕಲ್ಪ ಮೂಡಿತಂತೆ. 'ಏಕೋಽಹಂ ಬಹುಸ್ಯಾಮ' - ಅಂದರೆ ನಾನೊಬ್ಬನೇ ಇರುವೆ; ಅನೇಕ ವಾಗೋಣ ಎಂದು. ಈ ಸಂಕಲ್ಪ ಮೂಡಿದ್ದೇ ತಡ, ಕೂಡಲೇ ಆತ ಕಾರ್ಯಪ್ರವೃತ್ತನಾಗಿ ಮನೆ ಮಾಡಿ, ಗೃಹಸ್ಥನಾದನಂತೆ.

ಆದ್ದರಿಂದ ಒಬ್ಬನಿಂದ ಸಮೂಹವಾಗಲು, ಸಮೂಹ ಸುಖವಾಗಿರಲು, ಸುಖದಿಂದ ತೃಪ್ತಿ ಸಿಗುವಂತಾಗಲು ದೇವರು ತನಗೆ ತಾನೇ ರೂಪಿಸಿಕೊಂಡ ವಿಧಿ - ನಿಷೇಧಗಳ ರಚನೆಯೇ ಗೃಹಸ್ಥ ಜೀವನ, ಅದಕ್ಕೆ ನೆಲೆಯೊದಗಿಸಿದ ಮನೆ.

ಮನೆಯೆಂದರೆ ಕೇವಲ ಕಲ್ಲು - ಇಟ್ಟಿಗೆಗಳ ಒಂದು ಕಟ್ಟಡ ಮಾತ್ರವಲ್ಲ; ಅದೊಂದು ನಂಬಿಕೆಯ ನೆಲೆ; ಭರವಸೆಯ ತಾಣ; ವಿಶ್ವಾಸದ ಆಗರ, ಪ್ರಾಣಿ - ಪಕ್ಷಿಗಳು ಗುಹೆ - ಗೂಡುಗಳಲ್ಲಿರುತ್ತವೆ. ಆದರೆ ನಾವು ಇರುವುದು ಮನೆಯಲ್ಲಿ. ಏಕೆಂದರೆ ನಾವೆಲ್ಲ ಮನುಷ್ಯರು. ಆಲೋಚಿಸುವ ಮನಸ್ಸಿದ್ದವರು. ಆದ್ದರಿಂದಲೇ ಮನೆಗೊಂದು ಮಹತ್ತ್ವ ಬಂತು. ಅದು ಕುಟುಂಬದ ಕೇಂದ್ರವೆನಿಸಿತು. ಸಮಾಜ ಶಾಸ್ತ್ರಜ್ಞರು ಹೇಳುವಂತೆ ಸಮಷ್ಟಿ ಸಮಾಜದ ಮೂಲಘಟಕ ಮನೆ.

**'ನ ಗೃಹಂ ಗೃಹಮಿತ್ಯಾಹುಃ ಗೃಹಿಣೀ ಗೃಹಮುಚ್ಯತೇ'**

ಎಂಬುದು ಸಂಸ್ಕೃತದ ಒಂದು ಸುಭಾಷಿತ. ಇದರ ಅರ್ಥ ಕೇವಲ ಕಟ್ಟಡವೇ ಮನೆಯಲ್ಲ; ಗೃಹಿಣಿ ಇರುವ ತಾಣವೇ ಮನೆ. ಆದ್ದರಿಂದ ಗೃಹಿಣಿ ಮನೆಯ ಹೆಗ್ಗಂಬ; ಆಕೆ ಮನೆಯ ಮೂಲಾಧಾರ ಶಕ್ತಿ. ಇಂತಹ ಈ ಮನೆಯಲ್ಲಿ ತಂದೆ, ತಾಯಿ, ಮಕ್ಕಳು - ಇವರೆಲ್ಲ ಕೇವಲ ವಾಸಿಸುತ್ತಿಲ್ಲ; ಬದುಕು ನಡೆಸುತ್ತಾರೆ. ಪರಸ್ಪರ ಪ್ರೀತಿ, ವಿಶ್ವಾಸ, ನಂಬಿಕೆ, ಶ್ರದ್ಧೆ, ಭಕ್ತಿ, ಗೌರವ, ಕಷ್ಟ-ಸುಖಗಳಲ್ಲಿ ಒಂದಾಗುವ ಹಂಬಲ - ಇವೆಲ್ಲ ಇಲ್ಲಿ ತನ್ನಿಂದ ತಾನೇ ಮೊಳೆಯುತ್ತವೆ. ಶಾಸ್ತ್ರಕಾರ ಮನು ಹೇಳುವಂತೆ -

**'ಸಂತುಷ್ಟೋ ಭಾರ್ಯಯಾ ಭರ್ತಾ ಭರ್ತ್ರಾ ಭಾರ್ಯಾ ತಥೈವ ಚ।**
**ಯಸ್ಮಿನ್ನೇ ವಗೃಹೇ ನಿತ್ಯಂ ಕಲ್ಯಾಣಂ ತತ್ರವೈ ಧ್ರುವಮ್ ॥'**

ಯಾವ ಮನೆಯಲ್ಲಿ ಹೆಂಡತಿಯಿಂದ ಗಂಡ ಮತ್ತು ಗಂಡನಿಂದ ಹೆಂಡತಿ ಸಂತುಷ್ಟರಾಗಿರುತ್ತಾರೋ, ಅಲ್ಲಿ ಎಲ್ಲ ವಿಧವಾದ ಒಳಿತುಗಳೂ ಶಾಶ್ವತವಾಗಿ ನೆಲೆನಿಲ್ಲುತ್ತವೆ.

ನಮ್ಮ ಪೂರ್ವಿಕರು ವಿಧಿಸಿದ ಚತುರಾಶ್ರಮಗಳಲ್ಲಿ ಎರಡನೆಯದಾದ ಗೃಹಸ್ಥಾಶ್ರಮದ ಧರ್ಮವನ್ನು ಸಾಧಿಸುವ ತಪೋಭೂಮಿ ಮನೆ. ಪರಿಪೂರ್ಣ ವ್ಯಕ್ತಿತ್ವ ಸಾಧಿಸುವ ನೆಲೆಮನೆ,

**'ಚೇತನಾ', ನೇರಂಬಳ್ಳಿ, ರೋಡ್, ಕೋಟೇಶ್ವರ - 576 222**



ಈ ಮನೆ. ಇದೊಂದು ವ್ಯವಸ್ಥೆ ಮಾತ್ರವಲ್ಲ, ಸಮಾಜವನ್ನು ಸದಾ ಸುಸ್ಥಿತಿಯಲ್ಲಿ ಇಡಲು ರೂಪಿಸಿದ ಆಶ್ರಮ ಇದು. ಮದುವೆ ಇಲ್ಲಿ ಕೇವಲ ಒಂದು ಒಪ್ಪಂದವಲ್ಲ; ಒಂದು ಸಂಸ್ಕಾರ. ಹೆಣ್ಣು ಭೋಗವಸ್ತು, ದುಡಿಯುವ ಆಳು ಖಂಡಿತ ಅಲ್ಲ, ಆಕೆ ತಾಯಿ, ಎಲ್ಲ ಶಕ್ತಿಗಳ ಮೂಲ. ಎಲ್ಲರನ್ನೂ ಸಲಹುವ ಅನ್ನಪೂರ್ಣೆ. ಮತ್ತೊಬ್ಬರಿಗಾಗಿ ತ್ಯಾಗ ಮಾಡುವ, ಕಷ್ಟಸಹಿಸುವ, ಇನ್ನೊಬ್ಬರಿಗೆ ಕೊಟ್ಟು ತಾನು ತಿನ್ನುವ ಗುಣ ಬೆಳೆಸುವ ತ್ಯಾಗಧಾಮ, ಈ ಮನೆ. ಆದ್ದರಿಂದ ಮನೆ ಕೇವಲ ಮನೆಯಲ್ಲ, ಅದೊಂದು ಮಂದಿರ.

ಪ್ರಾಣಿಗಳಲ್ಲಿ ತಂದೆ, ತಾಯಿ, ಮಕ್ಕಳು - ಈ ಭಾವನೆ ತೀರ ಸೀಮಿತ ಅವಧಿಯದು. ಸ್ವಲ್ಪ ಸಮಯದ ನಂತರ ಮರೆತು ಹೋಗುವಂತಹುದು. ನಮ್ಮಲ್ಲಿ ಹಾಗಲ್ಲ; ಸದಾಕಾಲ ನಿರಂತರವಾಗಿ ಈ ಭಾವಧಾರೆ ಹರಿದು ಬರುತ್ತಲೇ ಇದೆ. ಅದನ್ನು ಬೆಳೆಸಲು ಎಲ್ಲರೂ ಶ್ರಮಿಸುತ್ತಾರೆ. ಮನೆ ಈ ಮಾನವೀಯ ಸಂಬಂಧವನ್ನು, ಅನ್ಯೋನ್ಯತೆಯನ್ನು ಕಲಿಸುವ ಕೇಂದ್ರ; ಕವಿ ಸರ್ವಜ್ಞ ಹೇಳುವ ಸ್ವರ್ಗಕ್ಕೆ ಕಿಚ್ಚು ಹಚ್ಚಿಸುವ 'ಬೆಚ್ಚನೆಯ ಮನೆ' ಇದು.

ಸಂಸ್ಕೃತದ ಕವಿಯೊಬ್ಬ ಇಂತಹ ಗೃಹಸ್ಥ ಜೀವನವನ್ನು ಪ್ರಶಂಸಿಸುತ್ತಾ -

**'ಸಾನಂದಂ ಸದನಂ ಸುತಾಶ್ಚ ಸುಧಿಯಃ ಕಾಂತಾಮನೋಹಾರಿಣೀ।**
**ಸನ್ಮಿತ್ರಂ ಸುಧನಂ ಸ್ವಯೋಷಿತಿ ರತಿಶ್ಚಾಜ್ಞಾಪರಾಃ ಸೇವತಾಃ ॥**
**ಆತಿಥ್ಯಂ ಶಿವಪೂಜನಂ ಪ್ರತಿದಿನಂ ಮಿಷ್ಟಾನ್ನಪಾನಂ ಗೃಹೇ ।**
**ಸಾಧೋಃ ಸಂಗಮುಪಾಸತೇ ಹಿ ಸತತಂ ಧನ್ಯೋಗೃಹಸ್ಥಾಶ್ರಮಃ ॥'**

ಇದರ ಅರ್ಥ ಇಷ್ಟೆ: ಆನಂದದ ಧಾಮವಾದ ಮನೆ, ವಿದ್ಯಾವಂತ ಮಕ್ಕಳು, ಮೆಚ್ಚಿನ ಮಡದಿ, ಸನ್ಮಿತ್ರರ ಭಾಗ್ಯ, ಸುಖ ನೀಡುವ ಭಾರ್ಯೆ, ಆಜ್ಞಾಪಾಲಕ ಸೇವಕರು, ನಿತ್ಯವೂ ಅತಿಥಿ ಸತ್ಕಾರ, ದೇವರ ಪೂಜೆ, ಮೃಷ್ಟಾನ್ನ ಭೋಜನ ಮತ್ತು ಸಾಧು - ಸಜ್ಜನರ ಸಹವಾಸ - ಇವೆಲ್ಲವೂ ಸದಾ ಇರುವ ಗೃಹಸ್ಥಾಶ್ರಮವು ಧನ್ಯ; ಧನ್ಯ!


ಸಾದರ ಸ್ವೀಕಾರ

**ಅಷ್ಟಮಹಾಮಂತ್ರಗಳು**



**ಲೇಖಕರು : ವಿದ್ವಾನ್ ಪಿ. ಅನಂತಪದ್ಮನಾಭಾಚಾರ್ಯ** **ಬೆಲೆ ರೂ. 20/-**
**ಪ್ರಕಾಶಕರು : ಕ್ಷಿಪ್ರಪ್ರಸಾದಪ್ರತಿಷ್ಠಾನ,** 119/3, ಬಿ. ಎಸ್. ಕೆ. 1ನೇ ಹಂತ, 14ನೇ ಕ್ರಾಸ್, ಗಂಗಮ್ಮ ಲೇಔಟ್, ಬೆಂಗಳೂರು - 560 050

ಶ್ರೀ ಮಧ್ವಾಚಾರ್ಯರ 'ತಂತ್ರಸಾರ ಸಂಗ್ರಹ'ವನ್ನು ಆಧರಿಸಿದ ಅಷ್ಟಮಹಾಮಂತ್ರಗಳ ಅರ್ಥವಿವರಣಾತ್ಮಕ ಗ್ರಂಥದ ಎರಡನೆ ಆವೃತ್ತಿ.

**ಮಾರ್ದನಿಗಳು (ಕಥಾಸಂಕಲನ)**

**ಲೇಖಕಿ : ಇಂದಿರಾ ಹಾಲಂಬಿ** (ಗಿರಿವಾಸಿನಿ) **ಬೆಲೆ ರೂ. 66-00**
**ಪ್ರಕಾಶನ : ಸಂದೀಪ ಸಾಹಿತ್ಯ,** ಆತ್ರಾಡಿ - 576 107. ದೂರವಾಣಿ : 0820-2544307

'ಮಾರ್ದನಿಗಳು' ಸಂಕಲನದಲ್ಲಿ ಹದಿನಾರು ವಿವಿಧ ಬಗೆಯ ಕತೆಗಳನ್ನೊಳಗೊಂಡು ವಸ್ತು, ವಿವರ, ಗಾತ್ರ, ಕಾಲಮಾನ, ಎಲ್ಲದೃಷ್ಟಿಯಲ್ಲೂ ವೈವಿಧ್ಯತೆ ಹೊಂದಿವೆ.



ಪರಮಪೂಜ್ಯ ಶ್ರೀ ಶ್ರೀ ಸುಗುಣೇಂದ್ರತೀರ್ಥ ಶ್ರೀಪಾದರು ತಮ್ಮ ಆತ್ಮೀಯರಾದ ಮೈಸೂರು ದತ್ತ ಪೀಠದ ಸಂತ ಗಣಪತಿ ಸಚ್ಚಿದಾನಂದ ಸ್ವಾಮಿಗಳ 63ನೇ ಹುಟ್ಟುಹಬ್ಬದ ಮಹೋತ್ಸವವನ್ನು ಉದ್ಘಾಟಿಸಿ ಅಭಿನಂದಿಸಿದಾಗ ಭಾರತದ ಮಾಜಿ ಅಧ್ಯಕ್ಷ ಶ್ರೀ ಆರ್. ವೆಂಕಟ್ರಾಮನ್‌ರವರು, ಹಿಮಾಚಲ ಪ್ರದೇಶದ ರಾಜ್ಯಪಾಲರು, ಕೇರಳದ ಹೈಕೋರ್ಟ್ ನ್ಯಾಯಾಧೀಶರು ಮುಖ್ಯಾತಿಥಿಗಳಾಗಿ ಭಾಗವಹಿಸಿದರು.

# ಗಣೇಶ ಪ್ರತಿಷ್ಠೆ

ಕಾರವಾರ ಹಬ್ಬುವಾಡದಲ್ಲಿರುವ ಶ್ರೀ ಪುತ್ತಿಗೆ ಮಠ ವಿಠಲಾಂಜನೇಯ ಗುರುಸಾರ್ವಭೌಮರ ಸನ್ನಿಧಿಯಲ್ಲಿ ನೂತನವಾಗಿ ನಿರ್ಮಿತವಾದ ಗಣೇಶ ವಿಗ್ರಹದ ಪ್ರತಿಷ್ಠಾನೆಯು ಮೇ 27ರಂದು ವೈದಿಕ ವಿಧಿವಿಧಾನಗಳೊಂದಿಗೆ ಪೂಜ್ಯ ಶ್ರೀ ಶ್ರೀ ಸುಗುಣೇಂದ್ರ ತೀರ್ಥ ಶ್ರೀಪಾದರ ಅಮೃತಹಸ್ತದಿಂದ ನೆರವೇರಿತು.

ಮಂದಿರದ ದಾನಿಗಳಾದ ಶ್ರೀ ಪಿ. ಪ್ರಕಾಶ್‌ಗಾಂವ್‌ಕರ್ ದಂಪತಿಗಳನ್ನು ಈ ಸಂದರ್ಭದಲ್ಲಿ ಪೂಜ್ಯ ಶ್ರೀಪಾದರು ಶಾಲು ಹೊದಿಸಿ ಅನುಗ್ರಹಿಸಿದರು.

ಈ ಸಂದರ್ಭದಲ್ಲಿ ಅಧ್ಯಕ್ಷರಾದ ಶ್ರೀ ರಾಮಮೂರ್ತಿಯವರು, ಜಿ. ಜಿ. ಆಚಾರ್ಯ, ಎನ್. ಡಿ. ಪಾಟೀಲ್, ಶ್ಯಾಮಾಚಾರ್ ಕಟ್ಟಿ ಕುಪ್ಪಳಿದಿವ್ನೆ ಮುಂತಾದ ಊರಿನ ಗಣ್ಯರು ಉಪಸ್ಥಿತರಿದ್ದರು. ಕೇಂಜ ಶ್ರೀಧರ ತಂತ್ರಿಯವರು ವೈದಿಕ ವಿಧಿಗಳನ್ನು ನೆರವೇರಿಸಿದ್ದರು.




॥ ಶ್ರೀಪತಿರ್ಮಾನದೋನಃ ॥

# ಪ್ರಾಜೆಕ್ಟ್ ವಿಜಯ – ಬೆಳೆಸಿ ಬೆಳೆಯಿರಿ

ವೈಷ್ಣವ ಬಂಧು

ಶ್ರೀ ಹರಿವಾಯುಗುರುಗಳ ಅನುಗ್ರಹದಿಂದ ಮತ್ತು ಗ್ರಾಹಕರ ಪ್ರೋತ್ಸಾಹದಿಂದ ನಮ್ಮ ಮುದ್ರಣ ಸಂಸ್ಥೆ **'ಮೈತ್ರಿ ಎಂಟರ್‌ಪ್ರೈಸಸ್'** ಹಾಗೂ **'ವಸ್ತಾರೆ ಇಂಪ್ರಿಂಟ್ಸ್'**ಗೆ ಹತ್ತು ವರ್ಷ ತುಂಬಿದ ಸಂಭ್ರಮ. ನಾವು ಕಂಡ ಪ್ರತಿಯೊಂದು ಒಡನಾಟಕ್ಕೂ ಒಂದು ಗಟ್ಟಿ ವಿಶ್ವಾಸದ ನಂಟಾಗಿ ಮುಂದುವರೆದು ನಮ್ಮ ಸಂಸ್ಥೆಯನ್ನು ಸತತ ಬೆಳವಣಿಗೆಯತ್ತ ಸಾಗಿಸುವಲ್ಲಿ, ತನ್ನದೇ ಆದ ವಿಶಿಷ್ಟ ಪಾತ್ರ, ಇದರಿಂದಾಗಿ ನಮ್ಮ ಮುದ್ರಣ ಘಟಕದ ಯಂತ್ರಾನುಕೂಲತೆಗಳನ್ನು ಹೆಚ್ಚಿಸುವಲ್ಲಿ ನಮ್ಮ ಪುಟ್ಟ ಕನಸುಗಳೂ ಕಾರ್ಯಗತ.

ಇಂದು ನಾವು ಬೆಳೆಯಲು ಅನುಕೂಲವಾಗುವ ಅವಕಾಶಗಳು ಹೆಚ್ಚುತ್ತಿವೆ. ಗ್ರಾಹಕರು ವಿಶ್ವಾಸಪೂರ್ವಕವಾಗಿ ನಮ್ಮಿಂದ ಬಯಸುತ್ತಿರುವ ಸೇವೆಗಳೂ ಮೆಟ್ಟಿಲೇರುತ್ತಿವೆ. ನಮಗಾದರೋ ಅವನ್ನೆಲ್ಲ ಈಡೇರಿಸಿ, ಬೆಳೆದು, ಅಭಿವೃದ್ಧಿಯತ್ತ ಹೆಜ್ಜೆ ಹಾಕುವ ಸಹಜ ತವಕ. ಆದರೆ ಲಭ್ಯವಿರುವ ಯಂತ್ರಾನುಕೂಲತೆ ಹಾಗೂ ವೈಯಕ್ತಿಕ ಅಡೆತಡೆಗಳಿರುವುದರಿಂದ ಅವಕಾಶಗಳು ಭರಿಸಲಾಗದಷ್ಟು ದೊಡ್ಡ ತುತ್ತನ್ನು ಬಾಯಿಯಲ್ಲಿಟ್ಟುಕೊಂಡಂತಹ ಅನುಭವ.

ಅದಕ್ಕೆಂದೇ ನಮ್ಮ ಕಾರ್ಯಾನುಕೂಲತೆಗಳನ್ನು ಹೆಚ್ಚಿಸಲೋಸುಗ ಒಂದು ವಿಶಿಷ್ಟ ರೀತಿಯಲ್ಲಿ ಬಂಡವಾಳ ಸಂಗ್ರಹಿಸಲು ಪರಸ್ಪರ ಲಾಭದಾಯಕವಾದ ಯೋಜನೆಯೊಂದನ್ನು ಹಾಕಿ ಕೊಂಡಿದ್ದೇವೆ. **'ಪ್ರಾಜೆಕ್ಟ್ ವಿಜಯ'** ಎಂಬ ಹೆಸರಿನ ಈ ಯೋಜನೆಯಡಿ ನಮ್ಮ ವೈಷ್ಣವ ಬಂಧುಗಳಿಂದ ತಲಾ ರೂ. 10,000/- (ಹತ್ತು ಸಾವಿರ ರೂಪಾಯಿ) ಶೇ. 12ರಂತೆ (ವಾರ್ಷಿಕ) 'ಸಹಾಯ ಬಂಡವಾಳ' ಸಂಗ್ರಹಿಸುವ ಕಾರ್ಯಕ್ಕೆ ಹುಟ್ಟು ಹಾಕಿದ್ದೇವೆ. 4 ವರ್ಷ ನಮ್ಮೊಡನಿರುವ ಈ ಮೊತ್ತಕ್ಕೆ ತ್ರೈಮಾಸಿಕವಾಗಿ ಬಡ್ಡಿಯನ್ನು ನೀಡಲಾಗುವುದು.

ಇದರಲ್ಲಿ ನಮ್ಮ ಶ್ರೇಯೋಭಿಲಾಷಿಗಳಾಗಿ ತಾವು ಭಾಗವಹಿಸಿ ತಮ್ಮಂತಹ ಇತರರನ್ನೂ ಪರಿಚಯಿಸಿ ನಮ್ಮೆಲ್ಲರ **'ವೈಷ್ಣವ ಮೈತ್ರಿ'** ಇನ್ನೂ ಬೆಳೆಯಲು ಸಹಾಯವಾಗುವಂತೆ ತಮ್ಮಲ್ಲಿ ನಮ್ಮ ಸವಿನಯ ಭಿನ್ನಹ.

***"A Little Push from you will help us play Better and bring the benefits back to you"***

ಹೆಚ್ಚಿನ ವಿವರಗಳಿಗೆ : **ಜಗನ್ನಾಥ ಕೆ. ವಸ್ತಾರೆ.** ದೂರವಾಣಿ : **080-56716658**

# 74C, 17th 'A' Cross, Basaveshwarnagar 4th Stage, 4th Block,
Bangalore - 560 079.
Ph.: 080-23383141 E-mail : my31co@bgl.vsnl.net.in